ಅಧ್ಯಕ್ಷರು : ಬೇಡ. ನಿಮ್ಮ ಪಕ್ಷದವರೇ ಮಾತನಾಡಲು ಈಗಾಗಲೇ ನಾಲ್ಕು ಗಂಟೆ ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ಅವರು(ಸಿಂಧ್ಯಾ) ಮಾತನಾಡಿದ ನಂತರ ನನಗೆ ಮಾತನಾಡಲು ಅವಕಾಶ ಕೊಡುತ್ತೇನೆಂದು ಹೇಳಿದರೆ ಸಾಕು.

ಅಧ್ಯಕ್ಷರು : ಅವರು ಮಾತನಾಡಿ ಮುಗಿಯಲಿ, ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನನ್ನ ಗ್ರಹಾಚಾರ ಹೇಗಿದೆಯೆಂದರೆ, ನಾನು ಮಾತನಾಡಲು ಎದ್ದು ನಿಂತರೆ ನಮ್ಮ ಸ್ನೇಹಿತರು, 'ನೀವು ಮಾತನಾಡುವುದು ಬೇಡ' ಎಂದರೆ. ನಾನು ಅವರಿಗೆ ಹೇಳಿದೆ: 'ಕೃಷ್ಣ ಬೈರೇಗೌಡರಿಗೆ ಕೇವಲ ಮೂರು ತಿಂಗಳಷ್ಟೇ ಅವಧಿ ಸಿಕ್ಕಿರುವುದರಿಂದ ಈ ಸದನದಲ್ಲಿ ಅವರಿಗೆ ಮಾತನಾಡಲು ಐದು ನಿಮಿಷ ಅವಕಾಶ ಕೊಡಿ' ಎಂದು ಹೇಳುವುದಕ್ಕೆ ನಾನು ಎದ್ದು ನಿಂತೆ. ಇವೊತ್ತು ಏಕೋ ಮಾನ್ಯ ಶ್ರೀನಿವಾಸಗೌಡರು ನನಗೆ ಮಾತನಾಡಲು ಅಡ್ಡಿಪಡಿಸುತ್ತಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ನೀವು (ಸಿಂಧ್ಯಾ) ಮಾತನಾಡಿದ ನಂತರ ನಾನು ಮಾತನಾಡುತ್ತೇನೆಂದರೆ ಮಾನ್ಯ ಅಧ್ಯಕ್ಷರ ಬಳಿ ಕೇಳಿಕೊಂಡೆ ಅಷ್ಟೆ.

ಶ್ರೀ ಆರಗ ಜ್ಞಾನೇಂದ್ರ : ಮಾತನಾಡಬಾರದೆಂದು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ ; ಮಾತನಾಡಬಾರದೆಂದು ನೀವು ಹೇಳುವುದಕ್ಕಾಗುವುದಿಲ್ಲ. ನಾವು ಮಾತನಾಡಬೇಕೇ ಬೇಡವೇ ಎಂಬುದನ್ನು ಮುಂದಿನ ಚುನಾವಣೆಯಲ್ಲಿ ಜನರು ಹೇಳುತ್ತಾರೆ!

ಅಧ್ಯಕ್ಷರು : ಈಗ argument ಬೇಡ, please commence.

2. ವಿತ್ತೀಯ ಕಾರ್ಯಕಲಾಪಗಳು

(1) 2004--05 ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ ಹಾಗೂ ಮುಖ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೇ, ಇದು ಈ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿ ಕಾಂಗ್ರೆಸ್ಸಿನ ಸರ್ಕಾರ ಬಂದ ಮೇಲೆ ಮಂಡಿಸುತ್ತಿರುವ 5ನೇ ಆಯವ್ಯಯವಾಗಿಯ ಈ ಮುಖ್ಯಮಂತ್ರಿಗಳು ಬಹಳ lucky Chief Minister ಆಗಿದ್ದಾರೆ. He is the most luckiest Chief Minister I have seen in 22 years of my political carrier as an MLA. ಏಕೆಂದರೆ, ಇವರಿಗೆ ಸಿಕ್ಕಿದಂತಹ Governorsಗಳು, witch-hunting Governorsಗಳು ಅಲ್ಲ. ಇವರಿಗೆ ಬಹಳ favourable ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಆಮೇಲೆ Opposition is divided every-day. This is the weakest Opposition also I have seen. ಅದಲ್ಲದೆ ಈ ಮುಖ್ಯಮಂತ್ರಿಗಳಿಗೆ internal dissentionsಇಲ್ಲ. ನಾವು ಈ ಸಭೆಯಲ್ಲಿ ಇರತಕ್ಕಂಥವರು ಅದನ್ನು ಗಮನಿಸಿದ್ದೇವೆ. ಮಾನ್ಯ ಬಂಗಾರಪ್ಪನವರು ಮತ್ತು ಮಾನ್ಯ ವೀರಪ್ಪ ಮೊಯ್ಲಿಯವರ ಕಾಲದಲ್ಲಿ ಆಡಳಿತ ಪಕ್ಷದ ಸದಸ್ಯರುಗಳೇ 40 ಜನ ಒಳಗಡೆ ಬಂದು ಬಿಟ್ಟಿದ್ದರು. ಆಮೇಲೆ ಇವರಿಗೆ High Command ಕಾಟವೂ ಕೂಡ ಇಲ್ಲ. He has manipulated High Command also in his favour. There is full co-operation from the Central Government. Central Governmentನವರೇನಾದರೂ ಈ ಬರಗಾಲದ ಪರಿಸ್ಥಿತಿಯಲ್ಲಿ ಇವರಿಗೇನಾದರೂ ದುಡ್ಡು ಕೊಡದೇ ಹೋಗಿದ್ದರೆ, ಇವತ್ತಿನ ಪರಿಸ್ಥಿತಿಯಲ್ಲಿ ಈ ಸರ್ಕಾರ ಹರಾಜು ಎದ್ದು ಹೋಗಿ ಬಿಡುತ್ತಿತ್ತು. Union

Government, I must say, has been very favourable to this Government. With all this, the Media is also favourable to this Chief Minister. I don't know why. The Media is also very very favourable.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು Central Government ನಮಗೆ ಬಹಳ favourable ಎಂದು ಹೇಳುತ್ತಿದ್ದೀರಿ. 45 ಅಲ್ಲಿಗೆ ಕೊಟ್ಟು 9 ಇಲ್ಲಿ ಕೊಡುವುದು, 235 ಕೋಟಿ ರೂ.ಗಳನ್ನು ಅಲ್ಲಿಗೆ ಕೊಟ್ಟು.............

ಶ್ರೀ ಪಿ.ಜಿ.ಆರ್. ಸಿಂಧ್ಯಾ : ದಯವಿಟ್ಟು intervene ಮಾಡಬೇಡಿ. ಇವತ್ತು ಮಾತನಾಡಲು ನನಗೆ ಹೆಚ್ಚು ಸಮಯ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇನ್ನೂ ಟೈಮ್ ಇದೆ. ತಾವು 12.30 ಗಂಟೆಯವರೆಗೆ ಮಾತನಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಓಹೋ ! ಹಾಗಾದರೆ ಪರವಾಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವತ್ತು ಕೊನೆಯ ದಿವಸ. ಆದ್ದರಿಂದ ಇವತ್ತು ಸ್ವಲ್ಪ ಹೆಚ್ಚು ಕಲಾಪ ನಡೆಯುತ್ತದೆ. ಮಾನ್ಯ ಅಧ್ಯಕ್ಷರು ತಮಗೆ ಮಾತನಾಡಲು ಇನ್ನಷ್ಟು ಸಮಯ ಕೊಡುತ್ತಾರೆ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, I don't agree with the philosophy of the BJP. I differ from it. But the Government of India has been kind towards this Government, whatever these people may say. My campaign in the next elections is going to be against BJP and congress both. But this Chief Minister, ಇಂತಹ ಒಂದು favourable atmosphere ಇದ್ದರೂ, ಒಬ್ಬ ಸೌಮ್ಯವಾಗಿರತಕ್ಕಂಥ Governorಗಳು, divided, divided divided and the weakest Opposition possible, internal dissention ಇಲ್ಲ, ನಿನ್ನೆಯೂ ಸಹಿತ ಆಡಳಿತ ಪಕ್ಷದ ಶಾಸಕರುಗಳು, ನಮ್ಮ Commandar-in-Chief ನೀವೇ ಆಗಿರಬೇಕೆಂದು ಹೇಳಿದ್ದಾರೆ. Look at this, I really pity. I pity Mr.Dharm Singh, I pity Mr.Kharge, I pity Mr.H.K.Patil, I pity Mr.Chandre Gowda. ನಮಗೆ ನೀವೇ ಕಮ್ಯಾಂಡರ್ ಆಗಬೇಕೆಂದು ಹೇಳುತ್ತಾ ಇದ್ದಾರೆ. ಆದರೆ ಪೇಪರ್‌ನಲ್ಲಿ ಅದೇನೋ ರಿಪೋರ್ಟ್ ಇದೆ, ಈ ಕಮ್ಯಾಂಡರ್ ಅವರ ಊರಿನಲ್ಲೇ ನಿಂತುಕೊಳ್ಳುವುದಿಲ್ಲವಂತೆ. ಮಾನ್ಯ ಸೋಮಶೇಖರ್ ಏನಾದರೂ ಎಚ್ಚರಿಕೆ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಅವರ ಭಯವೋ, ಏನೋ, ನನಗಂತೂ ಗೊತ್ತಿಲ್ಲ. Your Commandar is running away from the battlefield, even before the battle has started. From Maddur, Commandar-in-Chief is not going to......

ಶ್ರೀ ಬಿ.ಸೋಮಶೇಖರ್ : ನಾನು ಸಪೋರ್ಟ್ ಮಾಡಿದರೂ ಮುಖ್ಯಮಂತ್ರಿಗಳು ಅಲ್ಲಿ ಗೆಲ್ಲುವುದು ಕಷ್ಟ ಬಿಡಿ.

ಅಧ್ಯಕ್ಷರು : ಸಿಂಧ್ಯಾರವರೇ, ಚುನಾವಣೆಗಳ ವಿಷಯ ಇಲ್ಲಿ ಬೇಡಿ. ದಯವಿಟ್ಟು ನೀವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇಲ್ಲಿ ಚುನಾವಣೆ ವಿಷಯವಲ್ಲ, ಬಜೆಟ್‌ನಲ್ಲೇ ಚುನಾವಣೆ ಇರುವಾಗ ಇನ್ನು ಬೇರೆ ಏನು ನಾನು ಇಲ್ಲಿ ಮಾತನಾಡಲಿ? ನಾನು ಸರ್ಕಾರವನ್ನು ಹೊಗಳಲೇ? ಸ್ವಾಮಿ.

ಅಧ್ಯಕ್ಷರು : ಬಜೆಟ್‌ನಲ್ಲಿ ಚುನಾವಣೆ ಇರುವುದನ್ನು ತಾವು ತೋರಿಸುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬಜೆಟ್‌ನಲ್ಲಿ ಇರುವುದೇ ಚುನಾವಣೆ! ಇದರಲ್ಲಿ ಬೇರೆ ಇನ್ನೇನಿದೆ? This is the Congress Election Manifesto of 2004 Parliament and Assembly Elections. There is nothing beyond this.

ಅಧ್ಯಕ್ಷರು : ಎಲೆಕ್ಷನ್ ಮ್ಯಾನಿಫೆಸ್ಟೋ ಎಂದು ಅದರ ಮೇಲೆ ಬೋರ್ಡ್ ಏನೂ ಇಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, There is no need of any board. But, in reality this is the case. ಆದರೆ, though we have a....

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಮದ್ದೂರಿನಲ್ಲಿ ಚುನಾವಣೆಗೆ ನಿಲ್ಲುವುದಿಲ್ಲ ಎಂದು ನಿಮಗೆ ಯಾರು ಹೇಳಿದರು?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸ್ವಾಮಿ, definite ಆಗಿ ನನಗೆ ಗೊತ್ತಿದೆ. ನೀವು ಹೋಮ್ ಮಿನಿಸ್ಟರ್ ಆದವರಲ್ಲಾ ಸ್ವಾಮಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾಜಿ ಹೋಮ್ ಮಿನಿಸ್ಟರ್‌ರಾಗಿರುವಂತಹ ನೀವೇ ಹೀಗೆ ಹೇಳಿದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ದಯಮಾಡಿ ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಕರ್ನಾಟಕದ ಪೊಲೀಸರು ಎಷ್ಟು ದೊಡ್ಡ ಮನುಷ್ಯರುಗಳಾಗಿದ್ದಾರೆ ಎಂದರೆ, ಯಾರೇ ಒಂದು ಸಲ Home Minister ಆಗಿ ಮಾಜಿಯಾಗಿದ್ದರೂ ಸಹ ಅವರು ಸಾಯುವವರೆಗೂ ಕರ್ನಾಟಕದ ಪೊಲೀಸರು ಅವರಿಗೆ ಸೆಲ್ಯೂಟ್ ಹೊಡೆಯುತ್ತಾರೆ ಮತ್ತು ಅವರಿಗೆ information ಅನ್ನೂ ಸಹ ಕೊಡುತ್ತಾರೆ. ಎಲ್ಲಾ information ಕೂಡ ನನ್ನ ಹತ್ತಿರ ಇದೆ. ಜಯನಗರದಲ್ಲಿ ನಿಲ್ಲಬೇಕು, ಚಾಮರಾಜ ಪೇಟೆಯಲ್ಲಿ ನಿಲ್ಲಬೇಕು, ಕೂಡ್ಲಿಗಿಯಲ್ಲಿ ನಿಲ್ಲಬೇಕು, ಪಾಪ! ಬಿನ್ನಿಪೇಟೆಯಿಂದ ಗೆದ್ದಂತಹ ಮಾನ್ಯ ಸೋಮಣ್ಣನವರು ನಿನ್ನೆ–ಮೊನ್ನೆ ತಾನೇ ಕಾಂಗ್ರೆಸ್‌ಗೆ ಹೋದರು, ಅವರು ಬಿನ್ನಿಪೇಟೆಯಲ್ಲಿ ನಿಂತುಕೊಳ್ಳಬೇಕು, ಅವರಿಗೆ ಹಿಂಸೆ, ಚಿಕ್ಕಪೇಟೆಯಲ್ಲಿ ನಿಂತುಕೊಳ್ಳಬೇಕು. ಎಲ್ಲಾ ಕಡೆಗಳಲ್ಲೂ ಆ ಪೊಲೀಸರಿಗೆ ಬೇರೆ ಕೆಲಸಗಳೇ ಇಲ್ಲ. ಅವರು ಸರ್ವೆ ಮಾಡುವುದು, ಸರ್ವೆ ರಿಪೋರ್ಟ್‌ಗಳನ್ನು ತೆಗೆದುಕೊಂಡು ಕೊಡುವುದು, ಇದೇ ಆಗಿದೆ. ಮಾನ್ಯ ಅಧ್ಯಕ್ಷರೇ, ನಿಮಗೂ ಸ್ವಲ್ಪ ಬೇಜಾರಾಯಿತೋ ಏನೋ. ನನಗೂ ಸ್ವಲ್ಪ ಮಾತನಾಡಲು ಅವಕಾಶ ಕೊಡುವ ಕರುಣೆ ತೋರಿಸಿದ್ದೀರಿ. Chief Minister ವಿಷಯವನ್ನು ನಾನು ಅಲ್ಲಿಗೇ ನಿಲ್ಲಿಸುತ್ತೇನೆ. ನೀವೆಲ್ಲಾ Commandar-in-Chief ನೀವೇ ಆಗಬೇಕೆಂದು ಹೇಳುತ್ತಿದ್ದೀರಲ್ಲಾ, ಆ ನಿಮ್ಮ ಕಮ್ಯಾಂಡರ್ರೇ ಯುದ್ಧರಿಂದ ಓಡಿ ಹೋಗುತ್ತಿದ್ದಾರಲ್ರೀ! ಇನ್ನು ನೀವು ಇಮತಹ ಕಮ್ಯಾಂಡರ್ ಅನ್ನು ಕಟ್ಟಿಕೊಂಡು ಹೇಗೆ ಎಲೆಕ್ಷನ್ ಗೆಲ್ಲುತ್ತೀರೋ ಏನೋ, ನನಗಂತೂ

ಆಶ್ಚರ್ಯವೇ ಆಗುತ್ತಿದೆ. ಮಾನ್ಯ ಅಧ್ಯಕ್ಷರೇ, ಇವರು ಬಜೆಟ್‌ನಲ್ಲಿ ಹೇಳಿರತಕ್ಕಂಥ ವಿಚಾರಗಳು ಏನೆಂದರೆ, Feel good factor ಒಂದೇ ಅಲ್ಲ ಎಂದು ಹೇಳುತ್ತೀದ್ದಾರೆ. ಆ 'Feel good' word ಅನ್ನು ಯಾವ ಪಂಡಿತರುಗಳು, ಚತುರ್ವೇದಿಗಳು, ತ್ರಿವೇದಿಗಳು, ಇದನ್ನು ಕಾಯಿನ್ ಮಾಡಿದರೊ, ನನಗಿನ್ನೂ ಅರ್ಥವಾಗಿಲ್ಲ. ಅದು ಏನೇ ಇರಲಿ, ಅದು ಪಾರ್ಲಿಮೆಂಟ್‌ನಲ್ಲಿ ಮಾತನಾಡತಕ್ಕಂಥ ವಿಚಾರ, ಅದರ ಬಗ್ಗೆ ನಾನು ಇಲ್ಲಿ ಮಾತನಾಡುವುದಕ್ಕಾಗುವುದಿಲ್ಲ. because, I am also a great admirer of Mr.Atal Bihari Vajpayee. I am also a great admirer of him. I had the opportunity of staying with him in the jail for two months.

SRI D.B. CHANDRE GOWDA : Take a chance this year to go to Parliament.

SRI P.G.R. SINDHIA : No, I will not do that. ಇವರು 'Feel good factor ಇಲ್ಲ ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. `Feel good factor' ಬಹಳ ದೊಡ್ಡದ್ದಾಗಿ ಇದೆ ಎಂದು ನನಗೂ ಕೂಡ ಅನ್ನಿಸುವುದಿಲ್ಲ. But, at the same time, Udaya TV ನಲ್ಲಿ ಮಾತ್ರ ಒಂದಷ್ಟು ದಿನ ಬರುತ್ತಿತ್ತು, ಈಗ ನಿನ್ನೆ ಒಂದು ವಾರದಿಂದ ಈ TVನಲ್ಲೂ ಬರುವುದಕ್ಕೆ ಪ್ರಾರಂಭ ಆಗಿದೆ, "ನಾವು ಅರ್ಧ ದಾರಿ ನಡೆದು ಬಿಟ್ಟಿದ್ದೇವೆ, ನೀವೆಲ್ಲಾ ನಮ್ಮ ಜೊತೆಯಲ್ಲಿ ಬನ್ನಿ, ಊಟ ಮಾಡಿಕೊಂಡು ಬನ್ನಿ, ಇನ್ನರ್ಧ ದಾರಿ ನಾವು ನಡೆಯಬೇಕು", ಮದ್ದೂರಿನಿಂದ ಅರ್ಧ ದಾರಿನಡೆದಿದ್ದಾರಂತೆ, ಇನ್ನು ವಾಪಸ್ ಹೋಗುವುದಕ್ಕೆ ಇವರಿಗೆ ಆಗುತ್ತಿಲ್ಲವಂತೆ, ಅದಕ್ಕೋಸ್ಕರ " ನೀವೆಲ್ಲಾ ಬನ್ನಿ, ನೀವೆಲ್ಲಾ ಬನ್ನಿ" ಎಂದು ಈಗ ಕರೆಯುತ್ತಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲರಿಗೆ ಇದೆಲ್ಲಾ ಬಹಳ intersting ಆಗಿ ಇರುತ್ತದೆ, ಅವರು ದಯವಿಟ್ಟು ಇದನ್ನೆಲ್ಲಾ ಕೇಳಬೇಕು. ಮಾನ್ಯ ಅಧ್ಯಕ್ಷರೇ, `Feel good factror'ಗೆ ಮುಂಚೆ, ನನಗೆ ಮೊದಲನೇ ಬಾರಿಗೆ, ಈ ಸದನದಲ್ಲಿ ಒಂದು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ನನಗನ್ನಿಸುತ್ತಿದೆ. ಏಕೆ ಎಂದರೆ, ಬರೀ ಉಡಾಫೆ ಹೊಡೆಯುವುದೇ ಈ ಸರ್ಕಾರದ ಕೆಲಸವಾಗಿದೆ. ಇವರು ಬರೇ ಉಡಾಫೆಗಳನ್ನೇ ಹೊಡೆದುಕೊಂಡು ಬಂದಿದ್ದಾರೆ. ನೀವು ಇವರ ಐದು ವರ್ಷಗಳ ಬಜೆಟ್ ಅನ್ನು ನೋಡಿ, ಇದು ಐದನೇ ಬಜೆಟ್, ಈ ಸಾರಿ ಈ ಉಡಾಫೆ ಹೊಡೆದುಕೊಳ್ಳುವುದನ್ನು ಯಾವ ತರಹ ಹೊಡೆದಿದ್ದಾರೆ ಎಂದರೆ, ದೊಡ್ಡ ದೊಡ್ಡ ಕವಿಗಳು, ಮಹಾನುಭವರುಗಳ ಹೆಸರುಗಳನ್ನೆಲ್ಲಾ ತೆಗೆದುಕೊಮಡು ಹೋಗಿ ಈ ಬಜೆಟ್‌ಗೆ ಸೇರಿಸಿ ಬಿಟ್ಟಿದ್ದಾರೆ. ನಾನು ಹೇಳುತ್ತೇನೆ, ಈ ಅಸೆಂಬ್ಲಿಯನ್ನು, ಶಾಸಕರುಗಳನ್ನು, ಮಂತ್ರಿಗಳನ್ನು ಕೇವಲವಾಗಿ ನೋಡುವಂತಹ ದೃಷ್ಟಿಕೋನ ಮಾನ್ಯ ಮುಖ್ಯಮಂತ್ರಿಗಳದ್ದು ಹೇ! ಯಕಶ್ಚಿತ್! ಯಾರು ಇವರು? ನಾನು ಬಹಳ ದೊಡ್ಡವನು, ನಾನು High-tech.ಈಗ ನಿನ್ನೆಯಿಂದ ಅದೊಂದು ಶುರುವಾಗಿದೆ, ``High-tech ಅನಿಸಿಕೊಳ್ಳುವುದಕ್ಕೆ I am very proud."ಎನ್ನುತ್ತಿದ್ದಾರೆ. ಯಕಶ್ಚಿತ್! ಏನು ಸ್ವಾಮಿ? ಇದು. ಈಗ ಗೊತ್ತಾಗುತ್ತದೆ ನಿಮಗೆ. ಅಧಿಕಾರ ಕೇಂದ್ರೀಕರಣ ಮಾಡಿಕೊಂಡಿರತಕ್ಕಂಥ ಮೊದಲನೇ ಮುಖ್ಯಮಂತ್ರಿ ಎಂದರೆ ಶ್ರೀಮಾನ್ ಎಸ್.ಎಂ.ಕೃಷ್ಣರವರು. ಯಾವ ಮಂತ್ರಿಗಳಿಗೂ ಕೂಡ ಅಧಿಕಾರ ಇಲ್ಲ. ಯಾರು ಏನೂ ಜಾಸ್ತಿ ಮಾತನಾಡುವಂತಿಲ್ಲ. ಜಾಸ್ತಿ ಏನಾದರೂ ಮಾತನಾಡಿದರೆ, ಮಂತ್ರಿಗಳಿಗೆ reward ಕೊಡುತ್ತಾರೆ ಎಂದರೆ, ನೀವು (ಹೆಚ್.ಕೆ. ಪಾಟೀಲ) ಒಳ್ಳೆಯ ಕೆಲಸವನ್ನು ಮಾಡಿದಿರಿ, ಅಲ್ಲವೇ? ಈಗ ನೀವು ಹೇಳಿಕೊಳ್ಳಬೇಕಲ್ಲಾ, atleast ಗದಗ್‌ನಲ್ಲಿ, ಹಾವೇರಿನಲ್ಲಿ,ಧಾರವಾಡದಲ್ಲಿ, ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ನೀವು congress Partyಗೆ

ಕ್ಯಾನ್‌ವಾಸ್ ಮಾಡುತ್ತೀರಿ, 'ಕೃಷ್ಣಾ ಕಣ್ಣೀರಿನ ಕಥೆ' ಬರೆದಿದ್ದವರು ನೀವು. ನೀವು ಕೆಲಸ ಮಾಡಿದ್ದೇನೆ ಎಂದು ಹೇಳುತ್ತೀರಾ? ನೀವು ಕೆಲಸ ಮಾಡಿದ್ದೀರಿ. ನಿಮಗೆ ಏನು reward ಸಿಕ್ಕಿದ್ದು? ನಿಮಗೆ reward ಸಿಕ್ಕಿದ್ದು, ಪತ್ರಿಕೆಗಳಲ್ಲಿ ಯಾವ ಮಂತ್ರಿಗಳನ್ನು drop ಮಾಡುತ್ತಾರೆ ಎಂದು ಬರೆದಿದ್ದರೋ, ಆ ಮಂತ್ರಿಗಳಿಗೆಲ್ಲಾ ದೊಡ್ಡ ದೊಡ್ಡ Cabinet portfolioಗಳು ನೀರಾವರಿಗೆ ಇವರು ಕೊಟ್ಟಂತಹ ಮಹತ್ವ ಇದು. ನಾನು I really sympathise with the senior leaders who are sitting in the front bench.ಮಾನ್ಯ ಅಧ್ಯಕ್ಷರೇ, ಈ ಸರ್ಕಾರ, ಈ ಮುಖ್ಯಮಂತ್ರಿಗಳು, ಕನಿಷ್ಟ ಪಕ್ಷ ತಮ್ಮ ಸಹೋದ್ಯೋಗಿಗಳನ್ನು ನೋಡತಕ್ಕಂಥ ದೃಷ್ಟಿಕೋನ ಏನಿದೆ, ಇದು ಸರಿಯಲ್ಲ. ಬಹಳ ಯಕಶ್ಚಿತ್! ಅವರವರಲ್ಲೇ ಎತ್ತಿ ಕಟ್ಟುವುದು. ಇನ್ನು ವಿರೋಧ ಪಕ್ಷದವರು ಇರಲಿ, ಯಾರದ್ದೂ ಮೂರು ಕಾಸಿನ ಮಾತು ಕೇಳಲಿಲ್ಲ. ಬರಗಾಲದ ಕೆಲಸ ಕೇಮದ್ರ ಸರ್ಕಾರದ್ದು, ಅಲ್ಲಿ NDA ಸರ್ಕಾರ ಇದೆ ಎಂಬ ಕಾರಣದಿಂದ ನೀವು ಶಾಸಕರುಗಳನ್ನು ಆTask Force Committeeಗೆ ಅಧ್ಯಕ್ಷರುಗಳನ್ನಾಗಿ ಮಾಡಿದ್ದೀರೇ ಹೊರತು, ಅದನ್ನು ಬಿಟ್ಟು ಬೇರೆ ಇನ್ನಾವ ಕಾರಣದಿಂದಲೂ ಸಹಿತ ನೀವು ಅವರನ್ನು ಮಾಡುತ್ತಿರಲಿಲ್ಲ. ಈ ವರ್ಷದ ಬಜೆಟ್ ಏನಿದೆ, ಇದೊಂದು ಸುಳ್ಳಿನ ಕಂತೆ. It's bundle of lies. It is nothing but a bundle of lies.ಇಲ್ಲಿ ಏನೂ ಇಲ್ಲ, ನಾನು ಅಲ್ಲಿಗೆ ಬರುತ್ತೇನೆ. ಅದಕ್ಕಿಂತ ಮುಂಚೆ ಅವರು ಬೇರೆ ``Indian is shining''ಎಂದು ಹೇಳುತ್ತಿದ್ದಾರೆ. ಅದು ಯಾರಿಗೆ shine ಆಗುತ್ತಿದೆಯೋ ಏನೋ ಎಂದು ನನಗಂತೂ ಅರ್ಥವಾಗುತ್ತಿಲ್ಲ, ಅವರು ``India is shining''``Indian is brightening''ಎಂದು ಭಾರಿ ದೊಡ್ಡದಾಗಿ ಪ್ರಚಾರವನ್ನು ಅವರು ಮಾಡಿಕೊಂಡು ಹೋಗುತ್ತಿದ್ದರೆ, ನಿಮ್ಮ ತುತ್ತೂರಿ ಸಹ ಆಗಲೇ ಪ್ರಾರಂಭವಾಗಿದೆ. ಅವರದ್ದು ತಾಳ, ನಿಮ್ಮದು ತುತ್ತೂರಿ. ನಾನು ಹೇಳುತ್ತೇನೆ, ನಿಮಗೂ, ಅವರೇನು 'ಇಂಡಿಯಾ ಪ್ರಕಾಶಮಾನ' ಎಂದು ಹೇಳುತ್ತಿದ್ದಾರಲ್ಲಾ ಅದಕ್ಕೂ ಬಹಳ ಹೆಚ್ಚಿನ ವ್ಯತ್ಯಾಸ ಈ ಮಿಡಿಯಾದಲ್ಲೇನೂ ನನಗೆ ಕಾಣುತ್ತಿಲ್ಲ. ಯಾರ ದುಡ್ಡು ಸ್ವಾಮಿ ಅದು? ಸೂಟು, ಬೂಟು ಹಾಕಿಕೊಂಡು, ದಿನಕ್ಕೆ, ಸಾಯಂಕಾಲಕ್ಕೆ ಮಧ್ಯಾಹ್ನಕ್ಕೆ ಒಂದೊಂದು ಸೂಟುಗಳನ್ನು ಹಾಕಿಕೊಂಡು ಪತ್ರಿಕೆಗಳಲೆಲ್ಲಾ advertisement ಕೊಡಲಾಗುತ್ತಿದೆ. ಯಾರ ದುಡ್ಡು ಅದು? ಯಾವ ಮುಖ್ಯಮಂತ್ರಿಗಳೂ ಕೂಡ ಇಷ್ಟೊಂದು publicity ಕೊಟ್ಟಿರಲಿಲ್ಲ. "ನೀವೆಲ್ಲರೂ ಮಹಾತ್ವಾಕಾಂಕ್ಷಿಗಳನ್ನಿಟ್ಟುಕೊಂಡು ಮೌಲ್ಯಾಧಾರಿತ ರಾಜಕಾರಣವೆಂದು ಹೇಳಿ ಬಹಳ ಪಬ್ಲಿಸಿಟಿ ತೆಗೆದುಕೊಳ್ಳುತ್ತಿದ್ದೀರಿ" ಎಂದು ಇತ್ತ ಕುಳಿತಿದ್ದ ಹೆಚ್.ಕೆ.ಪಾಟೀಲರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಆ ಸಂದರ್ಭದಲ್ಲಿ ಟೀಕೆ ಮಾಡುತ್ತಿದ್ದರು. ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ನಡೆದಂಥ ಪಬ್ಲಿಸಿಟಿ in front of this, it is peanut. ಇದು ಯಾರ ದುಡ್ಡೆಂದು ನೀವು ಖರ್ಚು ಮಾಡುತ್ತಿದ್ದೀರಿ? ನನಗಂತೂ ಅರ್ಥವಾಗುತ್ತಿಲ್ಲ, ಇದಾದ ನಂತರ ನಿಮ್ಮ ಬಜೆಟ್‌ನ financial situation ಏನಿದೆ, ಎಷ್ಟು ಆದಾಯ ಬರುತ್ತದೆ? ಎಷ್ಟು ಖರ್ಚು ಮಾಡಬಹುದು ಎಂಬುದಕ್ಕೆ ನೀವು ಒಂದು ಎಸ್ಟಿಮೇಟ್ ಕೊಡಬೇಕು. ನಿಮಗೆ ಗೊತ್ತಿರುವಂತೆ, ಡಾ:ತಿಮ್ಮಯ್ಯನವರು he is one of the well known economists of our country. ನಾನು Deccan Herald ಪತ್ರಿಕೆಯವರನ್ನು ಅಭಿನಂದಿಸುತ್ತೇನೆ. ಇಲ್ಲಿ ಸಮಯದ ಅಭಾವವೋ, ಬೇರಾರಿಗೂ ಆಸಕ್ತಿ ಇಲ್ಲವೋ, ಒಟ್ಟಿನಲ್ಲಿ ಬಜೆಟ್ ಬಗ್ಗೆ ಸರಿಯಾಗಿ ಚರ್ಚೆ ಮಾಡುವುದಕ್ಕಾಗಲಿಲ್ಲ. I compliment Deccan Hearld and Prajavani for publishing the article of Dr.Thimmaiah, who has correctly analysed the financial situation of the State. ನೀವು ಎಷ್ಟೊಂದು

ಸುಳ್ಳು ಹೇಳುತ್ತೀರಿ, ನೀವೆಷ್ಟು ವಂಚಕರು, ಜನರನ್ನು ಯಾವ ರೀತಿ ಮೋಸಗೊಳಿಸಿದ್ದೀರಿ. ಇವೊತ್ತಿನ ಬಜೆಟ್‌ನಲ್ಲಿ ಏನೇನೂ ಇಲ್ಲವೆಂದು ಡಾ:ತಮ್ಮಯ್ಯನವರು ಬಹಳ ಚೆನ್ನಾಗಿ ಹೇಳಿದ್ದಾರೆ. ನನಗನ್ನಿಸುತ್ತದೆ: This is a political statement of a desparate leader. `ಮತ್ತೆ ಅಧಿಕಾರಕ್ಕೆ ಬರುತ್ತೇವೋ? ಇಲ್ಲವೋ? ನಮ್ಮ ಪಕ್ಷಕ್ಕೆ 140 ಸೀಟುಗಳು ಸಿಗುತ್ತದೆಯೇ?' ಎಂದು ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಬಹಳ desparate ಆಗಿದ್ದಾರೆ. ನಾನು ಖಂಡಿತವಾಗಿ ಹೇಳುತ್ತೇನೆ: 140 ಅಲ್ಲ, ನೀವು 100ನ್ನೂ ಸಹ ದಾಟುವುದಿಲ್ಲ. You are going to have a big Waterloo.ಚುನಾವಣಾ ಸಮಯದಲ್ಲಿ ಉತ್ತರ ಕರ್ನಾಟಕದತ್ತ ನೀವೇನಾದರೂ ಹೋದರೆ ನಿಮಗೆ ಸೋಲು ಕಟ್ಟಿಟ್ಟ ಬುತ್ತಿಯೆಂದು ಇವೊತ್ತು ನಾನು ಭವಿಷ್ಯ ನುಡಿಯುತ್ತಿದ್ದೇನೆ. ನೀವು ಎಷ್ಟು ಸೀಟುಗಳಲ್ಲಿ ಆಯ್ಕೆಯಾಗುತ್ತೀರೆಂದರೆ, ಅದನ್ನು ಬೆರಳುಗಳಲ್ಲಿ ಎಣಿಸಬೇಕಾಗುತ್ತದೆ! ಇದು ಮುಖ್ಯಮಂತ್ರಿಗಳಿಗೂ ಸಹ ಗೊತ್ತಿರುವುದರಿಂದ now, hi is desparate. ಅದಕ್ಕೋಸ್ಕರವೇ ಹತ್ತಾರು ಯೋಜನೆಗಳನ್ನು, things which are impossible....

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮನ್ನು ನೀವು(ಸಿಂಧ್ಯಾ) ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೀರಿ. ಸಿಂಧ್ಯಾರವರೆ, ನಿಮ್ಮ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮ್ಮ ಪರಿಸ್ಥಿತಿಗೆ ಬರುತ್ತೇನೆ. They are double digit ಎಂದು ನೀವು ಹೇಳಿದ್ದನ್ನು ನಾನು ಕೇಳಿಸಿಕೊಂಡೆ. Double digit ವಿಷಯಕ್ಕೆ ಬರುತ್ತೇನೆ. ಹೆಚ್.ಕೆ.ಡಿ.ಬಿ. ಅಧ್ಯಕ್ಷರಾಗಿದ್ದ ಬೋಸಾರಾಜ್‌ರವರು ಸ್ವಲ್ಪ ಸೇಫ್ ಆಗಿದ್ದಾರೆ. ಅವರು discretionary grant ನ್ನು ಖರ್ಚು ಮಾಡಿ ಕೆಲಸ ಮಾಡಿಕೊಂಡಿದ್ದಾರೆ. ಈ ಬಜೆಟ್‌ನಲ್ಲಿ ಹತ್ತಾರು ಯೋಜನೆಗಳನ್ನು, things which are impossible,ಮಾಡಲು ಸಾಧ್ಯವಾಗದಿರುವಂಥ ಯೋಜನೆಗಳೆಲ್ಲವನ್ನೂ ಬಜೆಟ್‌ನಲ್ಲಿ ಅನ್ವನ್ಸ್ ಮಾಡಿದ್ದೀರಿ. It is impossible. I will tell you. On what basis Congress has come to power in Karnataka? ಯಾವ ಆಧಾರದ ಮೇಲೆ ನಿಮಗೆ 145 ಸೀಟುಗಳು ಬಂದಿದ್ದವು? ನಿಮಗೆ ಸೀಟುಗಳು ಬಂದಿದ್ದು, ಪಶ್ಚಿಮದಲ್ಲಿರುವ ಹೊಳೆಗಳೆಲ್ಲವನ್ನೂ ಪೂರ್ವಕ್ಕೆ ಹರಿಸುತ್ತೇವೆಂದು ಘೋಷಿಸಿದ್ದಿರಿ. ಕನಿಷ್ಠ ಪಕ್ಷ Old-age pensionಅನ್ನು 100 ರೂಪಾಯಿಗಳಿಂದ 150 ರೂಪಾಯಿಗಳಿಗೆ ಹೆಚ್ಚಿಸುತ್ತೇವೆಂದು ಹೇಳಿದಿರಿ.You have told this in the manifesto. I don't know, whether Prof. B.K. Chandrashekar wrote it or somebody else wrote it or, Manishankar Iyer Wrote it" I don't know that. Old-age Pension ಅನ್ನು 150 ರೂಪಾಯಿಗಳಿಗೆ ಹೆಚ್ಚಿಸುವುದಾಗಿ ಹೇಳಿದವರು ಈಗ ನೀಡುತ್ತಿರುವ ಒಂದು ನೂರು ರೂಪಾಯಿ ಸಹ ಆರು ತಿಂಗಳಿಗೊಂದು ಸಲ ಹಳ್ಳಿಗಳಲ್ಲಿ ಬರುತ್ತದೆ! ಜನರು ನಿಮಗೆ ಶಾಪ ಹಾಕುತ್ತಿದ್ದಾರೆ. Because, there is no money in your treasury. There is absolutely no money in your treasury. ಇದನ್ನು ಮೋಸವೆಂದು ಕರೆಯುತ್ತೀರೋ? ವಂಚನೆಯೆಂದು ಕರೆಯುತ್ತೀರೋ? ದ್ರೋಹವೆಂದು ಕರೆಯುತ್ತೀರೋ? ಈ ಬಜೆಟ್ ಅನ್ನು ಏನೆಂದು ಕರೆಯುತ್ತೀರಿ? ನಿಮ್ಮ ಚುನಾವಣಾ ಪ್ರಣಾಳಿಕೆಗೆ ಏನಾಸರೂ ಅರ್ಥವಿದೆಯೇ? ಬಜೆಟ್ ಅನ್ನು 'ಬೋಗಸ್' ಎಂದು ನಾನೇಕೆ ಹೇಳುತ್ತಿದ್ದೇನೆಂದರೆ, ಈ ಯೋಜನೆಗಳನ್ನು ಅನೌನ್ಸ್ ಮಾಡಿದ್ದೀರಲ್ಲಾ ಯೋಸಜನೆಗಳ ಅನುಷ್ಠಾನಕ್ಕೆ ನೀವು ದುಡ್ಡನ್ನು ಎಲ್ಲಿಂದ ಹವಣಿಸಿಕೊಳ್ಳುತ್ತಿರಿ? In a Budget, you must say, 'ನಾವು ಇಂತಿಂಥ ಕಡೆಗಳಿಂದ ದುಡ್ಡು

ಹವಣಿಸಿಕೊಂಡಿದ್ದೇವೆ,resource mobilise ಮಾಡಿಕೊಮಡಿದ್ದೇವೆ' ಎಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಮೊನ್ನೆ ಕೇಂದ್ರ ಸರ್ಕಾರದವರು ಬಜೆಟ್‌ನಲ್ಲಿ ಏನು ಮಾಡಿದರೋ, ಅವರಿಗೆ ನಾವೇನು ಕಡಿಮೆ ಎನ್ನುವ ರೀತಿಯಲ್ಲಿ ಅವರ ಜೊತೆಯಲ್ಲಿ ನೀವೂ compete ಮಾಡಿದ್ದೀರೇ ಹೊರತು ಬೇರೆ ಏನೂ ಮಡಿಲ್ಲ ಇದು ಭಂಡತನದ ಪ್ರದರ್ಶನ! ನಯವಂಚನೆ! 1999–2000ರಲ್ಲಿ ನೀವು ಅಧಿಕಾರಕ್ಕೆ ಬಂದಾಗ ನೀವೇ ಹೇಳಿದಂತೆ ಮೊದಲನೇ ಬಜೆಟ್ ನಗರಗಳ ಮೇಲೆ ಕೇಂದ್ರೀಕೃತವಾಗಿತ್ತು. ಬೆಂಗಳೂರು ನಗರದಲ್ಲಿ ಪಾರ್ಕುಗಳನ್ನು ಹೊರತುಪಡಿಸಿದರೆ ಸ್ವಲ್ಪ ರಿಯಲ್ ಎಸ್ಟೇಟ್ , ಲ್ಯಾಂಡ್ ಬಿಸಿನೆಸ್ ಜಾಸ್ತಿಯಾಗಿದೆ. ಅದು ಯಾವ ಕಾರಣಕ್ಕೆ, ಏನೆಂದು ನಾನು ಮಾತನಾಡುವುದಿಲ್ಲ. ಅದನ್ನೂ ಬಿಟ್ಟರೆ ಮತ್ತೇನಾಗಿದೆಯೆಂದರೆ, ನಾವು Bangalore City improvement ಬಗ್ಗೆ ತೆಗೆದುಕೊಳ್ಳೋಣ. Cauvery 4th Stage ತೆಗೆದುಕೊಳ್ಳುತ್ತಿರಾ? ಅದನ್ನು ಹಿಂದಿನ ಸರ್ಕಾರ ಪ್ರಾರಂಭಿಸಿದ್ದು fly overs ತೆಗೆದುಕೊಳ್ಳುತ್ತೀರಾ? ಅದನ್ನೂ ಹಿಂದಿನ ಸರ್ಕಾರವೇ ಶುರು ಮಾಡಿದ್ದು. ಕೆಲವು road meridians, 120 ಪಾರ್ಕುಗಳನ್ನು ಹೊರತುಪಡಿಸಿದರೆ ಬೆಂಗಳೂರು ನಗರದಲ್ಲಿ ನಿಮ್ಮ ಸಾಧನೆ ಏನು? ಆ ಮಹಾನುಭಾವ ದಿವಂಗತ ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ಕಟ್ಟಿಸಿ ಹೋದರು. ಅವರು ಅಧಿಕಾರದಲ್ಲಿ ಮತ್ತೆ ಕುಳಿತುಕೊಳ್ಳುವುದಕ್ಕಾಗಲಿಲ್ಲವಂತೆ ಏನು ತರಾತುರಿಯೇ ಸೌತ್ ಬ್ಲಾಕ್ ಕಟ್ಟಡ ಇನ್ನೂ ಪೂರ್ತಿಗೊಂಡಿಲ್ಲ, ಈ ಕಟ್ಟಡ ಕಟ್ಟುತ್ತೇವೆಂದು ಹುಡ್ಕೋದಿಂದ 90 ಕೋಟಿ ರೂಪಾಯಿಗಳ ಸಾಲ ತೆಗೆದುಕೊಂಡರು. ಅದು ಯಾರಿಗೆ ಅನುಕೂಲ ಮಾಡಿಕೊಡುವುದಕ್ಕೋ? ಅದರ ಎಸ್ಟಿಮೇಟನ್ನು 140 ಕೋಟಿ ರೂಪಾಯಿಗಳಿಗೆ ಜಾಸ್ತಿ ಮಾಡಿಸಿದ್ದಾರೆ.. ಇದನ್ನು ಹೇಳಿಕೊಳ್ಳಲು ನನಗೆ ನಾಚಿಕೆಯಾಗುತ್ತದೆ. ನಾನು ಆ ಕಾರ್ಯಕ್ರಮಕ್ಕೆ ಹೋಗಲಿಲ್ಲ. ಗೋಣಿಚೀಲದಲ್ಲಿ ಮುಚ್ಚಿಕೊಂಡು ಕಾರ್ಯಕ್ರಮ ಮಾಡುತ್ತೀರೆಂದರೆ ಏನು ಅಂತಹ ಅವಸರ ನನಗಂತೂ ಅರ್ಥವಾಗುವುದಿಲ್ಲ. ನೀವು ನಾಳೆ ಬೆಳಿಗ್ಗೆ ಅಲ್ಲಿಗೆ ಹೋಗಿ ಕುಳಿತುಕೊಂಡು ಬಿಡಬೇಕೆ? ಮೊದಲನೆಯ ಬಜೆಟ್ ಕತೆ ಈ ರೀತಿಯಾದರೆ, ಎರಡು ಮತ್ತು ಮೂರನೇ ಬಜೆಟ್‌ನಲ್ಲಿ 'ಉತ್ತರ ಕರ್ನಾಟಕದ ಅಭಿವೃದ್ಧಿ' ಎಂದರು. ಉತ್ತರ ಕರ್ನಾಟಕದ ಜನರ ಬೆನ್ನಿಗೆ ನೀವು ಇವೊತ್ತು ಚೂರಿ ಹಾಕಿದ್ದೀರಿ. ನಿನ್ನೆ ನಾನು ಉದಯ ಟಿ.ವಿ. ವೀಕ್ಷಿಸುತ್ತಿದ್ದೆ. ಹೆಚ್.ಕೆ.ಡಿ.ಬಿ.ಯನ್ನು ಅಬಾಲಿಶ್ ಮಾಡದೆ ಅದಕ್ಕೆ ದುಡ್ಡು ಕೊಡಬೇಕೆಂದು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ನಾಯಕತ್ವದಲ್ಲಿ ಎಂ.ಎಲ್.ಎ.ಗಳು ಮುಖ್ಯಮಂತ್ರಿಗಳ ಬಳಿ ಡೆಲಿಗೇಶನ್ ಹೊಗಿದ್ದರಂತೆ! ನೋಡಿ, ನಿಮಗೆ ಯಾವ ಸ್ಥಿತಿ ಬಂದಿದೆ? I really pity. ಯಾವ ಒಂದು vision ಇಟ್ಟುಕೊಂಡು, ಹಿಂದೆ ನಮ್ಮ ಸರ್ಕಾರ ಇದ್ದಾಗ, ಮಾನ್ಯ ರಾಮಕೃಷ್ಣ ಹೆಗಡೆ, ದೇವೇಗೌಡ, ಪಟೇಲ್, ಬೊಮ್ಮಾಯಿ ಮತ್ತು ವೀರೇಂದ್ರ ಪಾಟೀಲ್‌ರವರು ಇದ್ದಾಗ ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಹೆಚ್ಚು ಒತ್ತು ನೀಡಬೇಕೆಂದು ಹೇಳಿದರೆ ನೀವು ಅದನ್ನು dilute ಮಾಡುವ ಪ್ರಯತ್ನ ಮಾಡಿದ್ದೀರಿ. ಇದರ ಬಗ್ಗೆ ನಾವು ಜನರಿಗೆ ಹೇಳಬೇಕಾಗುತ್ತದೆ. ಇದರ ಬಗ್ಗೆ ಈ ಸಂದರ್ಭದಲ್ಲಿ ಹೇಳದೆ ಇನ್ಯಾವ ಸಂದರ್ಭದಲ್ಲಿ ಹೇಳುವುದು? ನೀವು ಉತ್ತರ ಕರ್ನಾಟಕದ ಜನರಿಗೆ ಮೋಸ ಮಾಡಿದಿರಿ. ಮಾನ್ಯ ಜಗದೀಶ್ ಶೆಟ್ಟರ್‌ರವರು ಹೋರಾಟ ಮಾಡಿರುವುದನ್ನು ನಾನು ಮೆಚ್ಚುತ್ತೇನೆ. ಉತ್ತರ ಕರ್ನಾಟಕಕ್ಕೆ ಒಂದು ಹೈಕೋರ್ಟ್ ಪೀಠ ಬೇಕೆಂದು ಕೇಂದ್ರ ಸರ್ಕಾರದಿಂದ ಅವರು ಬಹಳ ಪ್ರಾಮಾಣಿಕ ಪ್ರಯತ್ನ ಮಾಡಿದರು. ಎಲ್ಲಾ ತರಹದ ಪ್ರಯತ್ನವಾಯಿತು. ಬಜೆಟ್‌ನಲ್ಲಿ ನಿಮ್ಮ ನಯವಂಚನೆಯ ಮಾತು! ಏನೆಂದರೆ, ಇನ್ನೇನು ಹೈಕೋರ್ಟ್ ಪೀಠ ಬಂದೇಬಿಟ್ಟಿತು, ನಾಳೆ ಬೆಳಿಗ್ಗೆ ಬಂತು, ಹತ್ತು ಕೋಟಿ ರೂ ಹಣ ಇಟ್ಟಿದ್ದೇವೆ, ಕಟ್ಟಡ ಕಟ್ಟುತ್ತಿದ್ದೇವೆಂದರು. ನ್ಯಾಯಮೂರ್ತಿಗಳ ಬಳಿ ನಾವು ಎಲ್ಲಾ ಪಕ್ಷಗಳವರು

ಸೇರಿಕೊಂಡು ಹೋಗಿದ್ದವು. ಅಧ್ಯಕ್ಷರೆ, ತಾವು ಬಂದಿರಲಿಲ್ಲ. ಮೊದಲನೆಯದಾಗಿ, ಅವರು ಇನ್‌ಫ್ರಾಸ್ಟಕ್ಚರ್ ಪ್ರಾಬ್ಲಮ್ ಹೇಳಿದರು. ಎರಡನೆಯದಾಗಿ, ಹೈಕೋರ್ಟ್ ಪೀಠ ಗುಲ್ಬರ್ಗದಲ್ಲಿ ಸ್ಥಾಪಿಸಬೇಕೇ ಹುಬ್ಬಳ್ಳಿ, ಬಳ್ಳಾರಿ, ಬಿಜಾಪುರದಲ್ಲಿ ಸ್ಥಾಪಿಸ ಬೇಕೆ ಎನ್ನುವ ಬಗ್ಗೆ ತಕರಾರು ಇರುವುದಾಗಿ ತಿಳಿಸಿದರು. ನೀವು ನಿಜವಾಗಿಯೂ, if you are to be a stateman-like leader ನೀವು ಏನು ಮಾಡಬೇಕಾಗಿರುತ್ತೆಂದರೆ, ಉತ್ತರ ಕರ್ನಾಟಕದ ಬಾರ್ ಅಸೋಸಿಯೇಶನ್ ಅವರನ್ನು ಕರೆಸಿ ಅವರೆಲ್ಲರಿಗೂ ಸೂಕ್ತ ಸಮಜಾಯಿಷಿ ನೀಡುವ ಮೂಲಕ ಒಂದು ಅಭಿಪ್ರಾಯಕ್ಕೆ ಬರುವಂತೆ ಮಾಡಬೇಕಿತ್ತು. ಇದು ಒಂದೆಡೆಯಾದರೆ, ಮತ್ತೊಂದೆಡೆ ಇನ್‌ಫ್ರಾಸ್ಟಕ್ಚರ್ ಡೆವಲಪ್‌ಮೆಂಟ್ ಕೆಲಸ ಮಾಡುವುದಕ್ಕೆ ನಿಮಗೆ ಏನು ತೊಂದರೆಯಾಗಿತ್ತು? ಬಜೆಟ್‌ನಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದಿರಲ್ಲಾ, ಆ ದುಡ್ಡು ಏನಾಯಿತು? ಅದು ಯಾರ ಜೇಬಿಗೆ ಹೋಯಿತು? ಅದನ್ನು ನಾವು ಕೇಳಬಹುದೇ? ಇದೆಲ್ಲವೂ ಆದನಂತರ, ಮೂರನೇ ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕೆ ಮೋಸ ಮಾಡುವ ಮೂಲಕ ಈಗ ನಾಲ್ಕನೇ ಬಜೆಟ್‌ನಲ್ಲಿ rural oriented ಎಂದು ಹೇಳಿದ್ದಾರೆ. This is a rual oriented budget. ``ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ನಾನು ಮಹತ್ವ ಕೊಡುತ್ತೇನೆ" ಎಂಬ ಮಾತನ್ನು ಹೇಳಿದ್ದಾರೆ. Power distribution ಬಗ್ಗೆ ಹೇಳುವುದಾದರೆ, ಇವೊತ್ತು ಗ್ರಾಮೀಣ ಪ್ರದೇಶಗಳಲ್ಲಿ ರೈತರೇ ಹಣ ತೆತ್ತು ಟ್ರಾನ್ಸಾಫ಼ರ್ಮರ್‌ಗಳನ್ನು ಖರೀದಿಸಿ ತೆಗೆದುಕೊಂಡು ಹೋಗಬೇಕಂತೆ. ಟ್ರಾನ್ಸಾಫಾರ್ಮರ್‌ಗಳನ್ನು ಖರೀದಿಸುವ ಶಕ್ತಿ ರೈತರಲ್ಲಿದೆಯೇ? ಒಂದು ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಳ್ಳುವುದಕ್ಕೆ 35 ಸಾವಿರ ರೂಪಾಯಿಗಳನ್ನು ಕಟ್ಟಬೇಕಂತೆ. ಈಗ ಬೆಳೆ ಇಲ್ಲ, ಬೆಳೆದ ಬೆಳೆಗೆ ಬೆಲೆ ಇಲ್ಲ, ಬಾವಿಯಲ್ಲಿ ನೀರಿಲ್ಲ. ಬಾವಿಯಲ್ಲಿರುವ ಅಲ್ಪಸ್ವಲ್ಪ ನೀರನ್ನಾದರೂ ಮೇಲಕ್ಕೆತ್ತೋಣವೆಂದರೆ ಟ್ರಾನ್ಸ್‌ಫಾರ್ಮರ್‌ಗೆ 35 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಇವೊತ್ತು ಕುಡಿಯುವ ನೀರಿಗಾಗಿ ಜನರು ಪರಿತಪಿಸುತ್ತಿದ್ದಾರೆ. ಇವೆಲ್ಲವೂ ಸುಮ್ಮಸುಮ್ಮನೆ ನೀಡಿರುವ ಸುಳ್ಳು ಹೇಳಿಕೆಗಳು. ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಒಂದು ಬೋರ್‌ವೆಲ್ ಹಾಕಿಸಿ ಎಂದರೆ ದುಡ್ಡಿಲ್ಲವೆನ್ನುತ್ತಾರೆ. ಸಿಇಓ ಹತ್ತಿರ ಕೇಳಿದರು ಇದೇ ಉತ್ತರ ಕೊಡುತ್ತಾರೆ. ಇದರ ಬಗ್ಗೆ ನಾನೊಬ್ಬ ಮಾತ್ರ ಹೇಳುವಂಥಾದ್ದಲ್ಲ. ಆಡಳಿತ ಪಕ್ಷದ ಶಾಸಕರು ಕೂಡ ಈ ಕುರಿತು ಯೋಚಿಸಬೇಕು. ಕುಡಿಯುವ ನೀರಿಗೆ ಬೋರ್‌ವೆಲ್ ಹಾಕಲು ದುಡ್ಡು ಬೇಕೆಂದರೆ, 'ಈಗಾಗಲೇ ಸರ್ಕಾರದಿಂದ ನಮಗೆ ಕೋಟ್ಯಂತರ ರೂಪಾಯಿಗಳಷ್ಟು ಹನ ಬಾಕಿ ಬರಬೇಕಾಗಿದೆ, ಹೇಗೆ ಬೋರ್ ಕೊರೆಸುವುದು?' ಎನ್ನುತ್ತಾರೆ. ನನಗೆ ಗೊತ್ತಿದೆ: ಕೋಲಾರ ಜಿಲ್ಲಾ ಪಂಚಾಯತಿಗೆ 80–85 ಲಕ್ಷ ರೂಪಾಯಿಗಳಷ್ಟು ಹಣ ಕೊಡುತ್ತೇವೆಂದು ಸರ್ಕಾರದವರು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಆ ಹಣ ಇನ್ನೂ ಬಿಡುಗಡೆಯಾಗಿಲ್ಲದಿರುವುದೂ ಸಹ ಗೊತ್ತಿದೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಕೋಲಾರಕ್ಕೆ 90 ಲಕ್ಷ ರೂಪಾಯಿಗಳು ಮಂಜೂರಾಗಿ ಆಗಲೇ ಮೂರು ತಿಂಗಳಾಯಿತು. ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಸಂಬಂಧಿತ ಫೈಲನ್ನು ಮೂರು ತಿಂಗಳಿನಿಂದ ಇಟ್ಟುಕೊಂಡಿದ್ದು ಸರ್ಕಾರಕ್ಕೆ ಇನ್ನೂ ಕಳುಹಿಸಿಕೊಟ್ಟಿಲ್ಲ. "ಕುಡಿಯುವ ನೀರಿಗೆ ಜನರು ಹಾಹಾಕಾರ ಪಡುತ್ತಿದ್ದಾರೆ, ಇವೊತ್ತಿಗೂ ಸಹ ಹಣ ಬಿಡುಗಡೆಯಾಗಿಲ್ಲ" ಎಂದು ನಾನೇ ಸ್ವತಃ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಬಳಿ ಮಾತನಾಡಿದ್ದೇನೆ. ಅಲ್ಲದೆ, ಗ್ರಾಮೀಣ ನೀರು ಪೂರೈಕೆ ಮಂತ್ರಿಗಳಾದ ಸನ್ಮಾನ್ಯ ಶ್ರೀ ಕೆ.ಬಿ.ಕೋಳಿವಾಡ್ ಅವರ ಕಚೇರಿಗೂ ಕೂಡ ನಾನು ಹೋಗಿದ್ದೆ. ಈಗ ಕೋಳಿವಾಡ್‌ರವರ

11.10 ಪಿ.ಎಂ

ಆಫೀಸ್‌ಗೆ ಹೋಗಿ ಬಂದೆ, ಅವರು ಸಂಬಂಧಪಟ್ಟ ಕಾರ್ಯದರ್ಶಿಗಳಾದ ಬಳಿಗಾರ್‌ರವರ ಹತ್ತಿರ ಮಾತನಾಡಿದರು, ಈಗಾಲೂ ಕೂಡ ಅವರಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಾರೆ, ಮಾನ್ಯ ಮುನಿಯಪ್ಪನವರಿಗೆ ಹೇಳಿದ್ದೆವು, ಮಂತ್ರಿಗಳಿಗೆ ಹೇಳಿದ್ದೆವು, ಇನ್ನೂ ರಿಲೀಸ್ ಆಗಿಲ್ಲ, ಆಡಳಿತ ಹೇಗಿದೆ ಎನ್ನುವುದಕ್ಕೆ ಜಿಲ್ಲಾ ಪಂಚಾಯಿತಿಯವರ ಇದು ಒಂದು ಉದಾಹರಣೆ. ಕೋಲಾರದಲ್ಲಿ ಕುಡಿಯುವ ನೀರಿಗಾಗಿ ಮೂರು ತಿಂಗಳುಗಳಿಂದ ಹಣ ಕೊಟ್ಟಿಲ್ಲ. ಇದನ್ನು ಯಾವ ರೀತಿ ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿಮಗೆ ಸ್ವಲ್ಪ ಅನುಕೂಲವಾಯಿತು. ದುಡ್ಡು ರಿಲೀಸ್ ಆದರೆ ನಾಲ್ಕು ಬೋರ್‌ವೆಲ್ ಹಾಕಿಸಬಹುದು. ಶಾಸಕರು ಚುನಾವಣೆಗೆ ಹೋಗುವುದಕ್ಕೆ ಭಯಭೀತವಾಗಿದ್ದಾರೆ. ಏಕೆಂದರೆ, ಈಗ ನಾವು ಹಳ್ಳಿಗಳಿಗೆ ಹೋದರೂ ನಿರು ಕೊಟ್ಟು ಹಳ್ಳಿಗೆ ಬನ್ನಿ ಎಂದು ಹೇಳುತ್ತಾರೆ. ನೀರು ಕೊಡದೆ ಏಕೆ ಬರುತ್ತೀರಿ ನೀವು, ನಿಮ್ಮ ಯೋಗ್ಯತೆಗೆ ನಮ್ಮ ಊರಿಗೆ ಕುಡಿಯುವುದಕ್ಕೆ ನೀರು ಕೊಡುವುದಕ್ಕೆ ಸಾಧ್ಯವಾಗಲಿಲ್ಲ; ಒಂದು ಬೋರ್‌ವೆಲ್ ಆದರೂ ಹಾಕಿಸುವುದಕ್ಕೆ ಸಾಧ್ಯವಾಗಲಿಲ್ಲ, ಎನ್ನತಕ್ಕಂತಹ ಮಾತನ್ನು ಹೇಳುತ್ತಾರೆ. ಕನಿಷ್ಟ ಪಕ್ಷ ಒಂದು ಕ್ಷೇತ್ರಕ್ಕೆ 10 ಲಕ್ಷ ರೂಪಾಯಿಗಳನ್ನಾದರೂ ಕೊಡುತ್ತಿಲ್ಲ ನೀವು, ಒಟಟಾರೆ ಸೋರ್ಸ್‌ರ್ ಎಲ್ಲಾ ಡ್ರೈ ಅಪ್ ಆಗಿದೆ. ಅಂತಹ ಕಡೆಗಳೆಲ್ಲೆಲ್ಲಾ ಏನು ಮಾಡುವುದು? ಎರಡು ಕಿ.ಮಿ. 3 ಕಿ.ಮಿ. ದೂರದಿಂದ ಜನ ನೀರು ತೆಗೆದುಕೊಂಡು ಬರುತ್ತಿದ್ದಾರೆ. ಸುಮ್ಮನೆ ಗವರ್ನ್‌ಮೆಂಟ್ ಆರ್ಡರ್ ಮಾಡುತ್ತೇವೆಂದು ಹೇಳುವುದು, ಅಪಹಾಸ್ಯಕ್ಕೆ ಈಡಾಗಿದ್ದಿರಿ ನೀವು. ಎಲ್ಲಿ ಪ್ರೈಬಜೇಟ್ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತದೆ ಅದನ್ನೆಲ್ಲಾ ಕಾನ್‌ಫ್ಲಿಕೇಟ್ ಮಾಡುತ್ತೇವೆಂದು ಖರ್ಗೆಯವರು ಸ್ಟೇಟ್‌ಮೆಂಟ್ ಕೊಟ್ಟರು. ಆ ತರಹದ ಒಂದೇ ಒಂದು ಉದಾಹರಣೆ ತೋರಿಸಿ. ಈ ಬಜೆಟ್‌ನಲ್ಲಿ ಕುಡಿಯುವ ನೀರಿನ ಪರಿಹಾರಕ್ಕೆ ಬರ ಪರಿಹಾರಕ್ಕೆ ಏನು ಉತ್ತರವನ್ನು ತೋರಿಸಿದ್ದೀರಿ ಎಂದು ಉತ್ತರದಲ್ಲಿ ಹೇಳ ಬೇಕಾಗುತ್ತದೆ. ಇದಾದ ಮೇಲೆ ನಿಮ್ಮ ಸರ್ಕಾರಕ್ಕೆ ಮತ್ತೊಂದು ಗ್ರಹಚಾರ ಬಂದಿರತಕ್ಕಂಥದ್ದು. ಹಸಿರು ಕಾರ್ಡುಗಳನ್ನು ಬದಲಾವಣೆ ಮಾಡಿದಿರಿ, ಹಸಿರು ಕಾರ್ಡುಗಳನ್ನು ಬದಲಾವಣೆ ಮಾಡಿ ಅದರಲ್ಲಿ ಕೆಲವು ಇನ್ ಎಲಿಜಿಬಲ್ ಪೀಪಲ್‌ಗೆ ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಇತ್ತು. ಅದನ್ನು ಸರಿ ಮಾಡುವುದನ್ನು ಬಿಟ್ಟು ಹಸಿರು ಕಾರ್ಡುಗಳನ್ನು ಬದಲಾವಣೆ ಮಾಡಿಯೆಲ್ಲೋ ಕಾರ್ಡ್ ಮಾಡುತ್ತೇವೆಂದು ಹೇಳಿದ್ದೀರಿ. ಶ್ರೀಮಾನ್ ಮುದ್ದಹನುಮೇಗೌಡರಂತಹ ಹಿರಿಯ ನಾಯಕರುಗಳು ಯೋಚನೆ ಮಾಡಬೇಕು, ಈ ಹಳದಿ ಕಾರ್ಡುಗಳನ್ನು ಹಂಚುವುದಕ್ಕೆ ನಿಮ್ಮ ಮಂತ್ರಿಗಳಿಗೆ ನಾಲ್ಕು ವರ್ಷಗಳು ಬೇಕಾ? ನಾಲ್ಕು ವರ್ಷ ಮೂರನೇ ತಿಂಗಳು. ಎಮ್‌ಎಲ್‌ಎಗಳು ಹೋಗಿ ವಿಲೇಜ್ ಅಕೌಂಟೆಂಟ್‌ಗಳ ಕರ್ಟಸಿಗೆ ಬೇಗ್ ಮಾಡಬೇಕು. ಇವರಿಗೆ ಹಳದಿ ಕಾರ್ಡ್ ಸಿಕ್ಕಿಲ್ಲ ದಯಮಾಡಿ ಕೊಟ್ಟು ಬಿಡು ಎಂದು ಹೇಳಬೇಕು. ಹಳದಿ ಕಾರ್ಡುಗಳ ಸಂಖ್ಯೆಯನ್ನು 33 ಲಕ್ಷಕ್ಕೆ ಇಳಿಸಿದ್ದೀರಿ. ಇದು ನೀವು ಮಾಡಿರುವ ದ್ರೋಹ. ಮೂರೂವರೆ ರೂಪಾಯಿ ಇದ್ದ ಅಕ್ಕಿಯನ್ನು ಆರು ರೂಪಾಯಿ ಮಾಡಿದ್ದೀರಿ. ಮೂರು ರೂಪಾಯಿ ಇದ್ದ ಸೀಮೆ ಎಣ್ಣೆಯನ್ನು 11 ರೂಪಾಯಿಗೆ ಮಾರುತ್ತಿದ್ದೀರಿ, ಸಕ್ಕರೆ ಬೆಲೆ ದುಪ್ಪಟ್ಟ ಮಾಡಿದ್ದೀರಿ, ಗೋಧಿ ಬೆಲೆ ಐದೂವರೆ ರೂಪಾಯಿ ಮಾಡಿದ್ದೀರಿ, ಇದನ್ನು ನಾವು ಇಲ್ಲಿ ಹೇಳದೆ, ಇನ್ನೆಲ್ಲಿ ಹೇಳುವುದು? ಜನ ನಿಮಗೆ ಏತಕ್ಕೋಸ್ಕರ ಓಟು ಕೊಡಬೇಕು ಹೇಳಿ, ನಾವು ಅಧಿಕಾರಕ್ಕೆ ಬಂದರೆ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಹೇಳುತ್ತೇವೆ. ಮೂರೂವರೆ ರೂಪಾಯಿಗೆ ಒಂದು ಕೇಜಿ ಅಕ್ಕಿ ಮಾರೇ ಮಾರುತ್ತೇವೆ. At any cost we will do it. We will come back and we will do it.

ನೀವು ಹೇಳಿ ಅದನ್ನು, ಹೋಗಲಿ, ಕಾಂಗ್ರೆಸ್‌ನವರು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಾಗಲೆಲ್ಲಾ ಅಕ್ಕಿ ಬೆಲೆ ಜಾಸ್ತಿ. ಹೋದ ಸಾರಿ ಅಷ್ಟೆ, ಎರಡು ರೂಪಾಯಿ ಕೇಜಿ ಇದ್ದುದ್ದು ವೀರಪ್ಪ ಮೊಯಿಲಿಯವರು ಐದು ರೂಪಾಯಿ ಮಾಡಿದ್ದರು. ನೀವು ವೀರಪ್ಪ ಮೊಯಿಲಿ ಯವರಿಗಿಂತ ನಾನೇನು ಕಡಿಮೆ ಎಂದು ಆರು ಮುಕ್ಕಾಲು ಏಳು ರೂಪಾಯಿ ಮಾಡಿದಿರಿ. ಜನ ಇವತ್ತು ಶಾಪ ಹಾಕುತ್ತಿದ್ದಾರೆ. ಇವತ್ತಿಗಾದರೂ ನೀವು ಹಳದಿ ಕಾರ್ಡುಗಳನ್ನು ಕೋಡುತ್ತಿದ್ದೀರಾ? ಜನಗಳಿಗೆ ಮೋಸ ಮಾಡುವುದಕ್ಕೋಸ್ಕರ ಕೆಲವು ಜಿಲ್ಲಾ ಮಂತ್ರಿಗಳು ತಹಶೀಲ್ದಾರ್‌ಗಳಿಗೆ ಫೋನನಲ್ಲಿ ಹೇಳಿ ಚೀಟಿಗಳನ್ನು ಕೊಡುತ್ತಿದ್ದಾರೆ. ಟೆಂಪರರಿ ಕಾರ್ಡ್ಸ್ ಎಂದು ಕೊಡುತ್ತಿದ್ದಾರೆ. ಆ ಟೆಂಪರರಿ ಕಾರ್ಡ್ಸ್‌ನ್ನು ಎಲಕ್ಷನ್ ಆದ ತಕ್ಷಣ ಇವರು ಅಧಿಕಾರಕ್ಕೆ ಬಂದರೆ ವಾಪಸ್ ತೆಗೆದುಕೊಳ್ಳುತ್ತಾರೆಂದು ಜನ ಹೇಳುತ್ತಿದ್ದಾರೆ. ಇದನ್ನು ನಾನು ಹೇಳುತ್ತಿಲ್ಲ, ಜನ ಹೇಳುತ್ತಿದ್ದಾರೆ. ನಿಮ್ಮ ಎಫಿಷಿಯಂಟ್, ಟ್ರಾನ್ಸ್‌ಪರೆಂಟ್, ಕಂಪ್ಯೂಟರ್ ಹೈಟೆಕ್ ಗವರ್ನಮೆಂಟ್‌ಗೆ, ಬಿಲೊದ ಪಾವರ್ಟಿ ಲೈನ್ ಇರತಕ್ಕಂತಹ 60 ಲಕ್ಷ ಜನಗಳಿಗೆ ಕಾರ್ಡುಗಳನ್ನು ಬದಲಾವಣೆ ಮಾಡುವುದಕ್ಕೆ ಶಕ್ತಿ ಇಲ್ಲ ಎಂದರೆ, ಇದು ಬಹಳ ಯೋಗ್ಯ ಸರ್ಕಾರ ಎಂದು ಹೇಳಲಾ ನಾನು. ಅಥವಾ ಇನ್ನೇನು ಹೇಳಬೇಕು, ಯಾವ ಶಬ್ದ ಉಪಯೋಗಿಸಬೇಕು ನಾನು, ಬಹಳ ವಿಷ್ಟಾವಂತ ಮಂತ್ರಿಗಳು ಎಂದು ಹೇಳಲಾ ಅಥವಾ ಅನಿಷ್ಟಾವಂತ ಎಂದು ಹೇಳಲಾ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಇವೆಲ್ಲಾ ನಾವು ಹೇಳಿದೆವು, ಕೊನೆಗೆ ಜನವರಿಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದೆವು, ಬರಗಾಲದ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. It has come to a grinding halt ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ನಿಭಾಯಿಸಲಿಕ್ಕೆ ಮಾಡಬೇಕಾಗಿರತಕ್ಕಂತಹ ಕೆಲಸಗಳು ಸಂಪೂರ್ಣವಾಗಿ ಸ್ಥಗಿತ ಆಗಿವೆ. ಎಲ್ಲಿ ಕೆಲಸ ಆಗುತ್ತಿದೆ ಎಂದು ಅವರು ಹೇಳಲಿ ಈ ಬಜೆಟ್‌ನಲ್ಲಿ ಬರಗಾಲದ ಬಗ್ಗೆ ಏನಾದರೂ ಇದೆಯಾ? Atleast to day, let the Chief Minister and the Minister in charge of the drought situation, let them make a statement. ಇಂತಿಂಥ ತಾಲ್ಲೂಕಿನಲ್ಲಿ ಇಂಥ ಕೆಲಸ ಆಗುತ್ತಿದೆ ಎಂದು ಹೇಳಲಿ, ಬರಗಾಲದ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿದೆ. ಹಳದಿ ಕಾರ್ಡುಗಳನ್ನೂ ಕೂಡ ಕೊಡುತ್ತಿಲ್ಲ. ಅದರಲ್ಲಿ ಕೊಡುತ್ತಿರತಕ್ಕಂತಹ ಅಕ್ಕಿಯ ಪ್ರಮಾಣ 20 ಕೆಜಿ ಇದ್ದುದು 8 ಕೇಜಿಗೆ ಇಳಿಸಿದ್ದೀರಿ. ಒಂದು ಕೇಜಿ ಅಕ್ಕಿ ಮುರೂವರೆ ರೂಪಾಯಿ ಇದ್ದುದು ಏಳು ರೂಪಾಯಿ ಆಗಿದೆ. 67 ಲಕ್ಷ ಇದ್ದ ಕಾರ್ಡುಗಳು 30 ಲಕ್ಷಕ್ಕೆ ಇಳಿಸಿದ್ದೀರಿ. ಮೋಸ ಮಾಡುವುದಕ್ಕೆ ಟೆಂಪರರಿ ಕಾರ್ಡುಗಳನ್ನು ಕೊಡುತ್ತಿದ್ದೀರಿ. The government's entire work has come to a grinding halt.

ಶ್ರೀ ಬಿ. ಸೋಮಶೇಖರ್ : 30 ಲಕ್ಷಕ್ಕೆ ಇಳಿಸಿಲ್ಲ 70 ಲಕ್ಷ ಕೋಟ್ಟಿದ್ದೇವೆ ಎಂದು ತಾವು ಹೇಳುತ್ತಿದ್ದೀರಿ. 70 ಲಕ್ಷ ಕಾರ್ಡುಗಳನ್ನು ಕೊಟ್ಟು ಗಣೇಶನನ್ನು ಮಾಡುವುದಕ್ಕೆ ಹೋಗಿ ಗಣೇಶನ ಅಪ್ಪ ಆಗಿರುವುದು ನಾವು ನೋಡಿದ್ದೇವೆ. ಈ 70 ಲಕ್ಷ ಕಾರ್ಡುಗಳನ್ನು ಯಾರಿಗೆ ಕೊಟ್ಟಿದ್ದಾರೆಂದರೆ, 10 ಎಕರೆ ಗದ್ದೆ ಇರುವವರು, ಪಂಪ್‌ಸೆಟ್ ಇರುವವರು, ಅಫೀಷಿಯಲ್ಸ್‌ಗೆ ನಿಮ್ಮ ವಿಜೇಲ್ ಅಕೌಂಟೆಂಟ್‌ಗಳು 500–500 ರೂಪಾಯಿಗೆ ಮಾರಿಕೊಂಡಿದ್ದಾರೆ. 500ರೂ, 200ರೂ, 100ರೂಗೆ ಮಾಡಿಕೊಂಡು, ಹಸಿರು ಕಾರ್ಡ್‌ನವರಿಗೂ ಇಲ್ಲ, ಬೇರೆ ಬಡವರಿಗೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪಾರ್ಲಿಮೆಂಟರಿ ಡೆಮಾಕ್ರಸಿ ಎಂದರೆ ಏನು? He is our leader. I have to yield to him. ಇಲ್ಲದಿದ್ದರೆ ಅವರು ನಾನು ಈಲ್ಡ್ ಆಗಿಲಿಲ್ಲವೆಂದು ನನ್ನ ಮೇಲೆ ಬೇಜಾರು ಮಾಡಿ ಕೊಳ್ಳುತ್ತಾರೆ. ಅವರು ಮಾತನಾಡುವಾಗಲೆಲ್ಲಾ ನಾನು ಎದ್ದಾಗ ಅವರು

ಈಲ್ಡ್ ಆಗಿದ್ದಾರೆ. ಎರಡು ನಿಮಿಷ ಅಷ್ಟೇ ನಾನು ಈಲ್ಡ್ ಆಗಿದ್ದು. On what basis, Congress has come to power? ಕರ್ನಾಟಕದಲ್ಲಿ ನಿಮ್ಮ ಓಟು ಬ್ಯಾಂಕ್ ಆಧಾರ ಏನು ಹಿಂದುಳಿದ ವರ್ಗದವರು, ಹರಿಜನ ಗಿರಿಜನರು ಮತ್ತು ಅಲ್ಪ ಸಂಖ್ಯಾಂತರು ಅವರಿಗೆ ಏನಾದರೂ ಈ ನಾಲ್ಕು ಬಜೆಟ್‌ಗಳಲ್ಲಿ ತೋರಿಸಿದ್ದೀರಾ? Any thing you have shown? ಇವತ್ತು ಹರಿಜನರಿಗೆ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಮಾಡಿರತಕ್ಕಂತಹ ದೊಡ್ಡ ಮೋಸ ಎಂದರೆ, ಕಾಂಗ್ರೆಸ್ ಸರ್ಕಾರ ಮತ್ತು ಕಾಂಗ್ರೆಸ್‌ನ ಬಜೆಟ್ ಅವರ ಆಧಾರದ ಮೇಲೆ ನೀವು ಅಧಿಕಾರಕ್ಕೆ ಬಂದಿರತಕ್ಕಂಥದ್ದು. ನಾನು ಅಭಿವೃದ್ಧಿ ಕೆಲಸಗಳ ಬಗ್ಗೆ ಮಾತನಾಡುತ್ತಿದ್ದೆ, ಸಾಲದ ಮೇಲೆ ಕೆಲಸಗಳು ಆಗುತ್ತಿರತಕ್ಕಂಥದ್ದು ಬಿಟ್ಟರೆ ಈ ಸರ್ಕಾರದ ಸಾಧನೆ ಏನೂ ಇಲ್ಲ, ಆ ಅಡ್ವರ್ಟೈಸ್‌ಮೆಂಟ್ ದಯವಿಟ್ಟು ತೆಗೆದು ಬಿಡಿ ನಮಗೆ ನಾಚಿಕೆಯಾಗುತ್ತದೆ ಎಂದು ನಾನು ಮಾನ್ಯ ಚಂದ್ರೇಗೌಡರಿಗೆ ಹೇಳಿದೆ. ಅರಸುರವರಿಗೆ ಅವಮಾನ ಮಾಡಬೇಡಿ ಎಂದು ಹೇಳಿದೆ. 40 ವರ್ಷಗಳಲ್ಲಿ ಐದು ಲಕ್ಷ ಮನೆಗಳು ಅಷ್ಟೆ ಅಂತೆ ಕಟ್ಟಿದ್ದು, ಅರಸುರವರ ಸರ್ಕಾರದಲ್ಲಿ ತಾವು ನೀರಾವರಿ ಮಂತ್ರಿಗಳಾಗಿದ್ದಿರಿ, ತಾವು ದಯವಿಟ್ಟು ಹೇಳಿ, ಅರಸು ಅವರು ಒಬ್ಬರೇ ಆರು ಲಕ್ಷ ಮನೆಗಳನ್ನು ಕಟ್ಟಿಸಿದ್ದರು. ನಾವು 12 ವರ್ಷಗಳಲ್ಲಿ 10 ಲಕ್ಷ ಮನೆಗಳನ್ನು ಕಟ್ಟಿಸಿದ್ದೆವೆ ಎಂದು ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲೆ ಬೋರ್ಡುಗಳನ್ನು ಹಾಕಿಸಿದ್ದಾರೆ. ಹೀಗೆ ಹೇಳಿ ಜನಗಳಿಗೆ ಏಕೆ ವಂಚನೆ ಮಾಡುತ್ತೀರಿ? 40 ವರ್ಷಗಳಲ್ಲಿ ಐದು ಲಕ್ಷ ಮನೆಗಳು, ಇವರು ನಾಲ್ಕೂವರೆ ವರ್ಷಗಳಲ್ಲಿ 12 ಲಕ್ಷ ಮನೆಗಳನ್ನು ಕಟ್ಟಿಸಿದ್ದಾರಂತೆ ಹೀಗೆ ಸುಳ್ಳು ಹೇಳುವುದಕ್ಕೆ ನಿಮಗೆ ನಾಚಿಕೆ ಆಗುವುದಿಲ್ಲವಾ? ಸುಳ್ಳು ಹೇಳುವುದಕ್ಕೆ ಒಂದು ಇತಿ ಮಿತಿ ಬೇಡವಾ? ನೀವು ಮನೆಗಳನ್ನು ಕಟ್ಟಿದ್ದೀರಿ, ರಸ್ತೆಗಳನ್ನು ಮಾಡಿದ್ದೀರಿ, ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ ನೀವು ಎಷ್ಟು ಸುಳ್ಳು ಹೇಳುವುದಕ್ಕೆ ಹೊರಟಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಏನೇನು ಹೇಳಿದ್ದೇವು ಅವು ಪ್ರತಿಯೊಂದೂ ಅಚ್ಚಾಗಿದೆ. ಸಾರ್ವಜನಿಕರ ಮುಂದಿಟ್ಟಿದ್ದೇವೆ, ಪರಿಶೀಲನೆ ಮಾಡುವುದಕ್ಕೆ ಅವಕಾಶ ಇದೆ. ನೀವು ಸುಳ್ಳು ಹೇಳಿದ್ದೀರಿ ಎಂದು ಹೇಳುತ್ತಿದ್ದೀರಿ, ಆ ಶಬ್ದ ಈಗ ಇಲ್ಲಿ ಸೇರಿಸಬಹುದು ಎಂದಾಗಿದೆ ಆದ್ದರಿಂದ ನಾನು ಏನೂ ಹೇಳುವುದಿಲ್ಲ. ಸತ್ಯಕ್ಕೆ ದೂರವಾದುದು ಎಂದು ಹೇಳುವುದು ಸಹಜವಾದುದು. ನೇರವಾಗಿ, ಇರಲಿ ಕೊನೇ ದಿವಸ, ಮಧ್ಯ ಪ್ರವೇಶ ಮಾಡುವುದು ಬೇಡ. ಒಂದೇ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ, 12 ಲಕ್ಷ ಮನೆಗಳು ಕಂಪ್ಲೀಟ್ ಆಗಿವೆ ಎಂದು ನಾವು ಎಲ್ಲಿಯೂ ಬರೆದುಕೊಂಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಡ್ವರ್ಟೈಸ್‌ಮೆಂಟ್ ತೆಗೆದು ತೋರಿಸಿ, ಕೆಎಸ್‌ಆರ್‌ಟಿಸಿ ಬಸ್ಸುಗಳ ಮೇಲೆ 11 ಲಕ್ಷ ಮನೆಗಳು ಕಂಪ್ಲೀಟ್ ಆಗಿವೆ ಎಂದು ಹಾಕಿಕೊಂಡಿಲ್ಲವಾ? ನಾನು ಇದನ್ನು ಛಾಲೆಂಜ್ ಮಾಡಿ ಹೇಳುತ್ತೇನೆ. ಈ ಸದನಕ್ಕೇ ಅದನ್ನು ತರಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಎಲ್ಲಿಯೂ ಹೇಳಿಲ್ಲ. 12 ರಿಂದ ಈಗ 11ಕ್ಕೆ ಬಂದಿದ್ದೀರಿ. 11 ಲಕ್ಷ ಮನೆಗಳನ್ನು ಐದು ವರ್ಷಗಳಲ್ಲಿ ಪೂರ್ಣಗೊಳಿಸುತ್ತೇವೆ, ಎಂಟು ಲಕ್ಷ ಮನೆಗಳು ಪೂರ್ಣಗೊಳಿಸಿದ್ದೇವೆ ಎಂದು ಹೇಳಿದ್ದು. That is on record.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಸುಳ್ಳು ಎನ್ನುವುದನ್ನು ರೆಕಾರ್ಡ್‌ನಲ್ಲಿ ಸೇರಿಸಬೇಡಿ, ಸತ್ಯಕ್ಕೆ ಒಂದು ಸಾವಿರ ಮೈಲಿ ದೂರ ಎಂದು ಬರೆದುಕೊಳ್ಳಿ, ನಾನು ಅಯೋಗ್ಯರು ಎಂದು ಹೇಳಿದೆ, ಯೋಗ್ಯರು ಎಂದು ಬರೆದುಕೊಳ್ಳಿ, ಅನಿಷ್ಟಾವಂತರು ಎಂದು ಹೇಳಿದೆ, ನಿಷ್ಟಾವಂತರು ಎಂದು ಬರೆದುಕೊಳ್ಳಿ, ನನ್ನದೇನೂ ತಕರಾರು ಇಲ್ಲ. ನನ್ನ ಡ್ಯೂಟಿ as a opposition member, what I have to do I am doing it. ಆದರೆ ನನ್ನ ಕಾನ್‌ಷಿಯಸ್‌ನೆಸ್ ಇರುತ್ತದಲ್ಲಾ,

ಶ್ರೀ ಡಿ.ಬಿ. ಚಂದ್ರೇಗೌಡ : ಮುಂದೆ ಏನೋ ಆಗುತ್ತೇವೆಂದು ಹೇಳುತ್ತಿದ್ದೀರಿ, ಈ ತರಹ ಸುಳ್ಳು ಹೇಳಿದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ನೀವು ಜೊತೆಯಲ್ಲಿ ಸೇರಿಕೊಂಡು ಮುಂದಾಗುವುದು ಅದರಲ್ಲಿ ಏನೂ ಡೌಟ್ ಇಟ್ಟುಕೊಳ್ಳಬೇಡಿ ನೀವು.

ಅಧ್ಯಕ್ಷರು : ಸಿಂಧ್ಯರವರೇ, ಅರ್ಧ ಗಂಟೆ ತಾವು ಕೇಳಿದಿರಿ, ಅರ್ಧ ಗಂಟೆ ಮೇಲಾಯಿತು. ಇನ್ನೈದು ನಿಮಿಷ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಸಾಕು ಕೂತುಕೊಂಡು ಬಿಡಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ. ಬೇರೆಯವರು ಮಾತನಾಡುವಾಗ ನೀವು ಟೈಮ್ ಫಿಕ್ಸ್ ಮಾಡುವುದು ಅಷ್ಟೇ ಮಾಡುವುದಿಲ್ಲ. ನನಗೆ ಮಾತ್ರ ಟೈಮ್ ಫಿಕ್ಸ್ ಆಗುತ್ತದೆ ಏಕೆ? ಬೇರೆಯವರಿಗೆ ಏಕೆ ಎರಡು ಗಂಟೆ ಮೂರು ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರಿ.

ಅಧ್ಯಕ್ಷರು : ನಾವು ಹೇಳಿದರೆ ಅವರು ಕೇಳಲಿಲ್ಲವಲ್ಲಾ

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೇಳಲಿಲ್ಲವೆಂದರೆ ನಾವೇಕೆ ಕೇಳಬೇಕು? ಆದರೂ ನಾನು ಕೇಳುತ್ತೇನೆ. ನಿಮಗೆ ನಾನು ಸೆಲ್ಯೂಟ್ ಮಾಡುತ್ತೇನೆ. ನೀವು ಕಳೆದ ನಾಲ್ಕೂವರೆ ವರ್ಷಗಳಲ್ಲಿ ನನಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟಿದ್ದೀರಿ, ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಚಾರದಲ್ಲಿ ನನ್ನ ತಕರಾರು ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಸಿಂಧ್ಯರವರೇ, ಸರ್ಕಾರದ ಜೊತೆಗೂ ಜಗಳ ಮಾಡುತ್ತೀರಿ ಆದರೆ, ಅಧ್ಯಕ್ಷರ ಜೊತೆಯಲ್ಲಿಯೂ ಜಗಳ ಮಾಡುತ್ತಿದ್ದೀರಲ್ಲ, ವಿರೋಧ ಪಕ್ಷಗಳ ಜೊತೆಗೂ ಜಗಳ ಮಾಡುತ್ತೀರಿ, ಎಲ್ಲರ ಜೊತೆಯಲ್ಲೂಜಗಳ ಮಾಡುತ್ತೀರಿ. ಇವತ್ತು ನೀವು ಜಗಳದ ಮೂಡಿನಲ್ಲಿದ್ದೀರಿ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗೇನಿಲ್ಲ, ನಾನು ನಿಮಗೆ ಕಾಂಪ್ಲಿಮೆಂಟ್ಸ್ ಕೊಡುತ್ತಿದ್ದೇನೆ. ನಾಲ್ಕೂವರೆ ವರ್ಷಗಳಲ್ಲಿ ನಮಗೆ ಬೇಕಾದಷ್ಟು ನೀವು ಎನ್‌ಕರೇಜ್ ಮಾಡಿದ್ದೀರಿ. ಅವಕಾಶ ಕೊಟ್ಟಿದ್ದೀರಿ. Iam grateful to you. - - ಇನ್ನು ಐದು ನಿಮಿಷದಲ್ಲಿ ನಾನು ಭಾಷಣ ಮುಗಿಸಿಬಿಡುತ್ತೇನೆ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು. ಬೇಗ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, The Government work has come to a grinding halt. rrowed and assistance-World Bank assistance and borrowed money ಇವನ್ನು ಬಿಟ್ಟರೆ ನಿಮ್ಮ ಇಂಟರ್ನಲ್ ರಿಸೋರ್ಸ್‌ನಿಂದ ಆಗುತ್ತಾ ಇರತಕ್ಕಂಥ ಎಲ್ಲಾ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಮಾನ್ಯ ಧರ್ಮಸಿಂಗ್ ಮತ್ತು ಹೌಸಿಂಗ್ ಮಿನಿಸ್ಟರ್, ಇವರಿಬ್ಬರೂ ಇಲ್ಲದೇ ಹೋಗಿದ್ದರೆ ನೀವು ವಿಧಾನಸೌಧದಿಂದ ಆಚೆಗೆ ಎಲೆಕ್ಷನ್ ಕ್ಯಾಂಪೈನ್‌ಗೆ ಹೋಗುವುದಕ್ಕೆ ಆಗುತ್ತಿರಲಿಲ್ಲ It has come to a grinding halt. ಬರಗಾಲದ ಕೆಲಸಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಸರ್ಕಾರದ ಅಭಿವೃದ್ಧಿ ಕೆಲಸಗಳು ಆಗಿವೆ. ಈಗೇನು ಮಾಡಿದ್ದಾರೆಂದರೆ ಕಳೆದ ನಾಲ್ಕು ವರ್ಷಗಳಲ್ಲಿ ಆಗದೇ ಇರುವುದು ಇರುವಾಗ ಇನ್ನೂ ನಾಲ್ಕು

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ತಿಂಗಳುಗಳಲ್ಲಿ ಕತ್ತರಿಸಿಬಿಡುತ್ತೇವೆ ಎಂದು ಬಜೆಟ್‌ನಲ್ಲಿ ಹೇಳಿಕೊಂಡಿದ್ದೀರಿ. ಅಲ್ರೀ, ನೀವು ನಾಲ್ಕು ವರ್ಷಗಳಲ್ಲಿ. **XX** ಆಗದೇ ಇರುವುದನ್ನು ಇನ್ನು ನಾಲ್ಕು ತಿಂಗಳುಗಳಲ್ಲಿ ಮಾಡಿಬಿಡುತ್ತಾರೆ? ಆ ರೀತಿ ಇವರು ಹೇಳಿ ಕೊಂಡಿರುತ್ತಾರೆ. ಇನ್ನು 15 ಲಕ್ಷ ಸ್ತ್ರೀ ಸಂಘಗಳ ಬಗ್ಗೆ ಹೇಳುತ್ತಾ ಇವುಗಳಿಗೆ ಇಂದಿರಾರಾಜ್ಯೋತಿ ಯೋಜನೆಯನ್ನು ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ. ಪಾಪ ಇಂದಿರಾಗಾಂಧಿ ಸತ್ತು ಸ್ವರ್ಗದಲ್ಲಿ ಇದ್ದಾರೆ ಆ ಮಹಾತಾಯಿ. ಆಕೆಗೆ ಅವಮಾನ ಮಾಡಿದ್ದಿರಿ. ಇಂದಿರಾಜ್ಯೋತಿ ಯೋಜನೆ ಮಾಡುತ್ತೇವೆಂದು ಹೇಳಿದ್ದಾರೆ. ಬರೀ ಸುಳ್ಳು! ನೀವು ಸ್ವಲ್ಪ ಯೋಚನೆ ಮಾಡಿ. ನಾನು ಹೀಗೆ ಹೇಳುತ್ತೇನೆ ಎಂದು ತಿಳಿದುಕೊಳ್ಳಬೇಡಿ. ಕಾವೇರಿಯಲ್ಲಿ...

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಉಪಯೋಗಿಸುವ ಆ ಪದ ಉಪಯೋಗಿಸಿದ್ದಾರೆ. ಅದು ಕಡತದಿಂದ ಹೋಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಆ ಪದವನ್ನು ತೆಗೆದುಬಿಡಿ ಸ್ವಾಮಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇವೊತ್ತು ಎಲ್ಲಾ ಶಬ್ದಗಳನ್ನು ಉಪಯೋಗಿಸಲು ಫ್ರೀಯಾಗಿ ಬಿಟ್ಟಿದ್ದೀರಿ.

ಅಧ್ಯಕ್ಷರು : ಆಯಿತು. ಅವರು ಅನುಭವ ಹೊಂದಿರುವ ಸಂಸದೀಯ ಪಟು. ಅದ್ದರಿಂದ ಯಾವ ರೀತಿ ಮಾತನಾಡಬೇಕು ಎಂದು ಅವರೇ ತಿಳಿದುಕೊಳ್ಳಬೇಕು. ಅವರು ನನ್ನ ಕೈಯಲ್ಲಿ ಹೇಳಿಸಿ ಕೊಳ್ಳುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಥ್ಯಾಂಕ್‌ಯು. ಇವರು ಹೇಳುವುದೆಲ್ಲಾ ಬರೀ ಸುಳ್ಳು ಎಂದು ಹೇಳುವುದಕ್ಕೆ ಹೆಚ್ಚು ನಿದರ್ಶನ ಕೊಡಬೇಕಿಲ್ಲ. ಒಂದೇ ಒಂದು ನಿದರ್ಶನ ಸಾಕು. ಏಕೆಂದರೆ ಕಾವೇರಿ ವಿಚಾರದಲ್ಲಿ ಕನ್ನಡದ ಅಣೆ, ಕರ್ನಾಟಕದ ಅಣೆಗೂ ನಿರು ಬಿಡುವುದಿಲ್ಲವೆಂದರು. ಆದರೆ ನೀರು ಬಿಟ್ಟು ಬಿಟ್ಟರಿ. ಯಾವುದೇ ಕಾರಣದಿಂದ ತೆಲಗಿ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ನಾವು ಕೊಡುವುದಿಲ್ಲ ಎಂದರು. ಆದರೆ ಸಿ.ಬಿ.ಐ. ತನಿಖೆಗೆ ಕೊಟ್ಟುಬಿಟ್ಟರು. ಎಲೆಕ್ಷನ್ ಮಾಡುವುದಿಲ್ಲ, ನಾವು ಏಕೆ ಇಲೆಕ್ಷಾಮನ್ ಮಾಡಬೇಕು ಎಂದು ನಿನ್ನೆಯೂ ಕೂಡ ಹೇಳುತ್ತಿದ್ದಾರೆ. ಆದರೆ ವಿಸರ್ಜನೆಗೆ ಬೇಕಾದ ಎಲ್ಲಾ ತಯಾರಿ ನಡೆಸಿದ್ದಾರೆ. ಇನ್ನು ಇದಕ್ಕಿಂತ ವಂಚನೆ ಬೇಕೇ? ಇದು ಸುಳ್ಳಲ್ಲವೇ? ಸತ್ಯಕ್ಕೆ ಬಹಳ ಹತ್ತಿರವಾಗಿರುವ ವಿಚಾರಗಳು ಇವೆಲ್ಲಾ. ನಾವು ಹೇಳಿದ ನಿಮಗೆ ತೊಂದರೆ ಆಗುತ್ತದೆ. ಆದ್ದರಿಂದ ಕೊನೆಯದಾಗಿ ಈ ಸರ್ಕಾರದ ಕೆಲವೊಂದು ಬೋನಸ್ ಕಾರ್ಯಕ್ರಮಗಳು ಬಜೆಟ್ ಮಂಡನೆ ಮಾಡಿದ್ದಾರೆ. ಅದರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿ ಭಾಷಣ ಮುಗಿಸುತ್ತೇನೆ. ಇಂದಿರಾ ಜ್ಯೋತಿ ಯೋಜನೆಯಲ್ಲಿ 15 ಲಕ್ಷ ಜನರಿಗೆ ಮುಂದಿನ ಮುರು ವರ್ಷಗಳೊಳಗೆ ಸಿಲಿಂಡರ್‌ಗಳನ್ನು ಕೊಟ್ಟುಬಿಡುತ್ತಾರಂತೆ. ಮುರು ವರ್ಷದ್ದು ಹೇಳುವುದಕ್ಕೆ ನೀವ್ಯಾರು? ನಿಮಗೆಲ್ಲಾ ಇನ್ನು ನೂರು ದಿನದ ಅವಧಿ ಮಾತ್ರ ಇರತಕ್ಕಂಥದ್ದು. ಇದು ಒಮದು ವಿಚಾರವಾದರೆ. ನೀವು ಹೇಳಿರತಕ್ಕಂಥ ವಿಚಾರಗಳನ್ನೇ ನಾನು ಹೇಳುತ್ತಿದ್ದೀನೆ. ಮಾನ್ಯ ಅಧ್ಯಕ್ಷರೇ, ಈ ಪಂಪ್‌ಸೆಟ್‌ಗಳ ವಿಚಾರದಲ್ಲಿ 600 ಕೋಟಿ ರೂಪಾಯಿ ಬಾಕಿ ಇದೆಯಂತೆ. ಪ್ಯಾಕೇಜ್‌ಗೆ ಅಡ್ವರ್ಟೈಸ್‌ಮೆಂಟ್ ತೆಗೆದುಕೊಂಡರು. 800 ಕೋಟಿ ಪ್ಯಾಕೇಜ್‌ನಲ್ಲಿ 2002 ಡಿಸೆಂಬರ್ ವರೆಗೂ ಎಂದು ಹೇಳಿ ಎಲ್ಲವನ್ನೂ ನಾವು ಮನ್ನಾ ಮಾಡಿದ್ದೇವೆ ಎಂದರು. ಅದಕ್ಕೆ ಪ್ರಚಾರ ತೆಗೆದುಕೊಂಡರು. ಅಮೇಲಿ 2003ರಲ್ಲಿ ಜನವರಿ, ಫೆಬ್ರವರಿ, ಮಾರ್ಚ್, ಈ ಮೂರು ತಿಂಗಳಲ್ಲಿ 600 ಕೋಟಿ ರೂಪಾಯಿ ಬಾಕಿಯಂತೆ ಏನ್ ಸ್ವಾಮಿ ಇದು? ಸುಳ್ಳು ಹೇಳುವುದಕ್ಕೂ ಒಂದು ಇತಿಮಿತಿ ಬೇಡವೇ? ಅದಕ್ಕೊಂದು ದೊಡ್ಡ ಪ್ರಚಾರ. ಇನ್ನು ನಿನ್ನೆ

(XX ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.)

ಸೋಮಶೇಖರ್‌ರವರೂ ಒಂದು ವಿಚಾರವನ್ನು ಬಹಳ ನೊಂದು ಹೇಳಿದರು. ನಮ್ಮ ಸರ್ಕಾರವಿದ್ದಾಗ ಪ್ರತಿ ಕ್ಷೇತ್ರದಲ್ಲೂ 50 ರಿಂದ 100 ಬೋರ್‌ವೆಲ್‌ಗಳನ್ನು ಎಸ್.ಸಿ.ಎಸ್.ಟಿ ಜನಗಳಿಗೆ ನಾವು ತೋಡಿಸಿ ಕೊಟ್ಟಿದ್ದೆವು. ಇವೊತ್ತು ನೀವು ಎಂ.ಎಲ್.ಎ.ಗಳನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿ ನಿಮ್ಮ ಸರ್ಕಾರಕ್ಕೆ ಬೈಯ್ಯುತಕ್ಕಂಥದ್ದನ್ನು ನಮ್ಮ ವಿರುದ್ಧ ನೀವು ಎತ್ತಿಕಟ್ಟಿಬಿಟ್ಟಿದ್ದೀರಿ. ಏನು ನೀವು ಮಾಡಿದ್ದೀರೆಂದರೆ ಒಂದು ಕ್ಷೇತ್ರಕ್ಕೆ ಎರಡು ಬೋರ್‌ವೆಲ್, ಮೂರು ಬೋರ್‌ವೆಲ್. ಅದರಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಒಂದು, ಎಸ್‌ಸಿ:ಎಸ್‌ಟಿಗೆ ಒಂದು ಮೈನಾರಿಟಿಗೆ ಒಂದು ಎಂದಿದ್ದಾರೆ. ಡೀಸೋಟಿಫಿಕೇಶನ್ ಮಾಡುವುದು ಕಂಪ್ಯೂಟರ್ ಕಂಪನಿಯವರಿಗೆ ಜಮೀನು ಕೊಡುವುದು. ಅದಕ್ಕೆ ನಿಮ್ಮ ಹತ್ತಿರ ದುಡ್ಡು ಇದೆ. ಇದಕ್ಕೆ ಮಾತ್ರ ನಿಮ್ಮ ಹತ್ತಿರ ದುಡ್ಡಿಲ್ಲ. ಏಕೆಂದರೆ ಇದು ಎಸ್‌ಸಿ:ಎಸ್‌ಟಿ ಮತ್ತು ಬ್ಯಾಕ್ ವರ್ಡ್‌ಕ್ಲಾಸ್‌ನವರ ಪ್ರೋಗ್ರಾಂ ಅಲ್ಲವೇ. ಅದಕ್ಕೋಸ್ಕರ ಇವರಿಗೆ ನೀವು ಸುಳ್ಳು ಹೇಳತಕ್ಕಂಥ ಕೆಲಸವನ್ನು ನೀವು ಮಾಡಿದರೆ ಒಳ್ಳೆಯದಲ್ಲ. ಇನ್ನೊಂದು ಸುಳ್ಳನ್ನು ಇವರು ರಾಜೀವ್‌ಗಾಂಧಿಯವರ ಹೆಸರಿನಲ್ಲಿ ಹೇಳಿದ್ದಾರೆ. ಅದೇನೋ ಗೊತ್ತಿಲ್ಲ ಕಾಂಗ್ರೆಸ್‌ನವರಿಗೆ ರಾಜೀವ್‌ಗಾಂಧಿ, ಇಂಧಿರಾಗಾಂಧಿಯವರು ಎಂದರೆ ಬಹಳ ಪ್ರೀತಿ ಎಂದು ಕಾಣುತ್ತದೆ. ಅವರು ಸತ್ತ ಮೇಲೂ ಅವರು ನಿರಾತಂಕವಾಗಿ ಇರುವುದಕ್ಕೆ ಬಿಡುವುದಿಲ್ಲ ಇವರು. ಅವರ ಹೆಸರಿನಲ್ಲಿ...

ಶ್ರೀಮತಿ ಮೋಟಮ್ಮ : ಅವರು ದೇಶಕ್ಕೆ ಬಹಳ ತ್ಯಾಗ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಯಾರು ಇಲ್ಲ ಎಂದು ಹೇಳಿದವರು?

ಅಧ್ಯಕ್ಷರು : ಮೋಟಮ್ಮನವರೇ, ಮಧ್ಯ ಮಾತನಾಡಬೇಡಿ. ಸ್ವಲ್ಪ ದಯವಿಟ್ಟು ಸುಮ್ಮನಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಯಾರು ಸ್ವಾಮಿ ಇಲ್ಲ ಎಂದು ಹೇಳಿದ್ದು? ನೋಡಿ, ಅವರುಗಳಿಗೆ ಹೇಗೆ ಅವಮಾನ ಮಾಡಿದ್ದೀರಿ ಎಂದು ಹೇಳುವುದಕ್ಕೆ ನಾನು ಹೇಳುತ್ತಿರುವುದು. ಮೋಟಮ್ಮನವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ನಾನು ಆರೋಗ್ಯ ಮಂತ್ರಿಯಾಗಿದ್ದೆ. ಗುಂಡುರಾಯರು ಸಂಜಯಗಾಂಧಿ ಹೆಸರಿನಲ್ಲಿ ಆಸ್ಪತ್ರೆಯನ್ನು ಓಪನ್ ಮಾಡಿದ್ದರು. ನಾನು ಆ ಹೆಸರನ್ನು ಚೇಂಜ್ ಮಾಡಬಹುದಿತ್ತು. ಆದರೆ ಆ ರೀತಿ ಮಾಡುವುದಕ್ಕೆ ನಾನು ಹೋಗಲಿಲ್ಲ. ಏಕೆಂದರೆ ಆಕಸ್ಮಿಕವಾಗಿ ಸೋತರು ನಮ್ಮ ಪ್ರಧಾನಿಗಳ ಮಗ ಎಂದು ಹೇಳಿ. ಅಷ್ಟೊಂದು ಸಣ್ಣ ಮನುಷ್ಯರಲ್ಲ ನಾವು. ಆದರೆ ಬಜೆಟ್‌ನಲ್ಲಿ ಬರೆದಿದ್ದೀರಲ್ಲಾ. ಒಂದೊಂದು ಗ್ರಾಮ ಪಂಚಾಯತಿಗೂ ಒಂದೊಂದು ಲಕ್ಷ ರೂಪಾಯಿಯನ್ನು ಕೊಟ್ಟುಬಿಟ್ಟರೆ ಒಂದೊಂದು ಕ್ರೀಡಾಂಗಣ ಆಗಿ ಬಿಡುತ್ತದಂತೆ! ಅದಕ್ಕೆ ರಾಜೀವ್‌ಗಾಂಧಿ ಹೆಸರನ್ನು ಬಜೆಟ್‌ನಲ್ಲಿ ಬರೆದುಬಿಟ್ಟಿದ್ದಾರೆ. ಬರೆ ಪೇಂಟ್‌ಗೆ 50 ಸಾವಿರ ರೂಪಾಯಿ ಆಗುತ್ತದೆ. ಏನಾದರೂ ಅರ್ಥ ಬೇಡವೇ ಅದನ್ನು ಬರೆಯುವುದಕ್ಕೆ. ಇದಾದ ಮೇಲೆ ಇನ್ನೊಂದು ವಿಚಾರವನ್ನು ಹೇಳಿಕೊಂಡಿದ್ದಾರೆ. ರೇಷ್ಮೆ ಬಗ್ಗೆ. ರೇಷ್ಮೆ ವ್ಯವಸಾಯ ಇವೊತ್ತು ಸರ್ವನಾಶವಾಗಿರತಕ್ಕಂಥ ಕಾಲವಾಗಿದೆ. ಆ ಕೆ.ಎಸ್.ಐ.ಸಿ. ಫ್ಯಾಕ್ಟರಿಯನ್ನು ಮುಚ್ಚಿ ಫ್ಯಾಕ್ಟರಿ ವರ್ಕರ್ಸ್‌ಗಳನ್ನು ಮನೆಗೆ ಕಳುಹಿಸಿಬಿಟ್ಟಿರಿ. ಆ ರೈತರುಗಳೆಲ್ಲರೂ ಆತ್ಮಹತ್ಯೆ ಮಾಡಿಕೊಂಡು ಸತ್ತರು. ಪೋಲೀಸರ ಲೆಕ್ಕಾಚಾರದ ಪ್ರಕಾರ 800 ಜನ ರೈತರು ಸತ್ತರು. ಇದಕ್ಕೆ ಏನೂ ಪರಿಹಾರ ಈ ಬಜೆಟ್‌ನಲ್ಲಿ ಇಲ್ಲ. ಏನು ಪರಿಹಾರ ಇದೆ ಇದಕ್ಕೆ? ಏನಾದರೂ ಪರಿಹಾರ ಇದೆಯೆಂದು ನೀವು ಹೇಳಿದ್ದೀರಾ? ಅದರ ಬದಲಾಗಿ 50 ಸಾವಿರ ಎಕರೆಯಷ್ಟು ವಿಸ್ತೀರ್ಣದ ತೋಟಗಾರಿಕೆ ರೇಷ್ಮೆ ಫಾರ್ಮ್‌ಗಳನ್ನು ಉದ್ಯಮಶೀಲ ನಿರುದ್ಯೋಗಿ ಯುವಕರುಗಳಿಗೆ ವೈಯಕ್ತಿಕವಾಗಿ ಕೊಡಲಾಗುವುದು. ಆ ತಲಘಟ್ಟಪುರದ ಹತ್ತಿರ ಒಂದು ಇನ್‌ಸ್ಟಿಟ್ಯೂಟ್ ಇದೆ, ನಾನು ರೇವಣ್ಣನವರ ಹತ್ತಿರ ಹೋಗಿ ಕೇಳಿ ಕೊಂಡೆ, ದಯವಿಟ್ಟು ಒಂದಷ್ಟು ದುಡ್ಡು ಕೊಡಿ, ಸಂಬಳ ಇಲ್ಲದೇ

ಮುಚ್ಚಿಹಾಕಿಬಿಡುತ್ತಿದ್ದಾರೆ ಎಂದು ಹೇಳಿದೆ. ಅದನ್ನು ಮುಚ್ಚಹಾಕುತ್ತಿದ್ದಾರೆ. ಸುಮ್ಮನೆ ಬಂಡವಾಳವಿಲ್ಲದೇ ಬಡಾಯಿ ಬಿಡುತ್ತಿದ್ದಾರೆ. ಇನ್ನು ಗ್ರಾಮ ಪಂಚಾಯತಿ ಸ್ಥಿತಿ ಬಗ್ಗೆ ಹೇಳಬೇಕು. ಇವರು ಐದೂವರೆ ಲಕ್ಷ ರೂಪಾಯಿಗಳು ಎಂದು ಮಾಡಿರುವುದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಆದರೆ Where is the money? ಒಂದು ಲಕ್ಷ ರೂಪಾಯಿ ಒಂದೊಂದು ಪಂಚಾಯತಿಗೆ ಬರುತ್ತಿದೆ. ಇವೊತ್ತು ಗ್ರಾಮ ಪಂಚಾಯತಿ ಯಾವ ಸ್ಥಿತಿಗೆ ಬಂದಿದೆಯೇಂದರೆ ಮಿನಿ ವಾಟರ್ ಸಪ್ಲೈನಲ್ಲಿ ನೀರು ಬಿಡುತ್ತಾನಲ್ಲಾ ಅವನಿಗೆ ಸಂಬಳ ಕೊಡುವುದಕ್ಕೆ ಧುಡ್ಡಿಲ್ಲ. ಅಲ್ಲಿ ಕೆಲಸ ಮಾಡುವ ಕಾರಕೂನರಿಗೆ ದುಡ್ಡಿಲ್ಲ. ಹೀಗಿದ್ದರೆ ಏನು ಗ್ರಾಮ ಪಂಚಾಯತಿಯನ್ನು ನಡೆಸುವುದು? ಆದ್ದರಿಂದ ನಾನು ಹೇಳುವುದೇನೆಂದರೆ ಈ ಆಯವ್ಯಯ ಏನಿದೆ ಇದು ಕಾಂಗ್ರೆಸ್‌ನ ಚುನಾವಣೆ ಪ್ರಣಾಳಿಕೆಯಾಗಿದೆ. ನಯವಂಚನೆಯ ಮಾತುಗಳಿವು. ಜನಗಳಿಗೆ ಮೋಸ ಮಾಡುವುದಕ್ಕೆ ಈ ಒಂದು ಸದನವನ್ನು ಈ ಸ್ಥಾನವನ್ನು ಮತ್ತು ನಮ್ಮ ಸಮಯವನ್ನೂ ಸಹಿತ ವ್ಯರ್ಥ ಮಾಡಿದ್ದಾರೆ. ಇಷ್ಟು ಮಾತುಗಳನ್ನು ಹೇಳಿ ಕೊನೆಯದಾಗಿ ಸರ್ಕಾರಕ್ಕೆ ನಾನು ಒಂದು ಅಪೀಲ್ ಮಾಡಿಕೊಳ್ಳುತ್ತೇನೆ. ಇದನ್ನು ನೀವು fervent appeal ಎಂದೇ ನೀವು ತಿಳಿದುಕೊಳ್ಳಬಹುದು. ಏಕೆಂದರೆ ಈ ಸದನಕ್ಕೆ ಬರಲು ಮತ್ತೆ ನಾವು ಜನಗಳ ಮುಂದೆ ಅವಕಾಶ ಮಾಡಿಕೊಡಿ ಎಂದು ಕೇಳಲು ನಾವು ಮತ್ತು ನೀವು ಹೋಗುತ್ತಿದ್ದೇವೆ. ಅವೆಲ್ಲವನ್ನೂ ಮುಂದೆ ಮಾಡೋಣ. ಈಗಾಗಲೇ ಎನ್.ಜಿ.ಇ.ಎಫ್. ಸೇರಿದಂತೆ ಸಾರ್ವಜನಿಕ ವಲಯದಲ್ಲಿದ್ದ ಹಲವಾರು ಫ್ಯಾಕ್ಟ್ರಿಗಳನ್ನು ಮುಚ್ಚಿಬಿಟ್ಟರು. ಈಗ ನೀವು ಕೆ.ಎಸ್.ಆರ್.ಟಿ.ಸಿ.ಯನ್ನು ಮುಚ್ಚುವುದಕ್ಕೆ ಹೊರಟಿದ್ದೀರಿ. ಒಂದು ದಿನಕ್ಕೆ 70 ಲಕ್ಷದಿಂದ ಒಂದು ಕೋಟಿ ಜನರು ಪ್ರಯಣ ಮಾಡುತ್ತಾರೆ. 30 ಸಾವಿರ ಜನ ಕಾರ್ಮಿಕರಿದ್ದಾರೆ. ಅದನ್ನು ಮುಚ್ಚುವುದಕ್ಕೆ ನೀವು ಹೊರಟಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಯಾವಾಗ ಆ ರೀತಿ ಹೇಳಿದ್ದೇವೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಯಾವಾಗ ಅಂತ ನಾನು ಹೇಳುತ್ತೇನೆ. ನೀವೇನು ಮಾಡಿದ್ದೀರಿ ಎಂದರೆ; ತಾವು ವಿರೋಧ ಪಕ್ಷದಲ್ಲಿದ್ದವರು, ಗೋಪಾಲಗೌಡರ ಹೆಸರಿನಲ್ಲಿ ನೀವು ಭಾಷಣ ಮಾಡುತ್ತಿದ್ದವರು. ಸಮಾಜವಾದಿ ಚಳುವಳಿಯಲ್ಲಿ ಬಂದಂಥವರು. ಕಂಟ್ರ್ಯಾಕ್ಟ್ ಕ್ಯಾರಿಯೇಜ್ ಆ್ಯಕ್ಟ್‌ನ್ನು ಏಕೆ ತಂದಿದ್ದರು ಅರಸುರವರು, ಅದನ್ನು ಅಬಾಲಿಶ್ ಮಾಡಿದಿರಿ. ಆ ಕ್ಯಾಬಿನೆಟ್‌ಗೆ ನೀವೂ ಒಬ್ಬರು ಮೆಂಬರ್ ಆಗಿದ್ದೀರಿ. ಹೋಗಲಿ, ಆದಾದರೂ ಹಾಳಾಗಿಹೋಗಲಿ, ಎಲ್ಲಾ ಟೌನ್‌ನ ಸುತ್ತಮುತ್ತ 20 ಕಿ.ಮಿ. ವ್ಯಾಪ್ತಿಯೊಳಗೆ ಖಾಸಗಿ ಬಸ್‌ಗಳು ಓಡಾಡುವುದಕ್ಕೆ ಅವಕಾಶ ಮಡಿಸಕೊಟ್ಟಿದ್ದೀರಿ. ಹೀಗಾದರೆ How the K.S.R.T.C. will survive? ಈ ಬಗ್ಗೆ ಮಾನ್ಯ ದೇವರಾಜ್‌ರವರು ಹೇಳಬೇಕು. ಅವರು ಸದನದ ಸದಸ್ಯರು ಮತ್ತು ಕೆಎಸ್‌ಆರ್‌ಟಿಸಿ ಅಧ್ಯಕ್ಷರು ಕೂಡ ಆಗಿದ್ದಾರೆ. Please, I beg this government. ಮಾನ್ಯ ಅಧ್ಯಕ್ಷರೆ, ದಯಮಾಡಿ ಆ ಕೆ.ಎಸ್.ಆರ್.ಟಿ.ಸಿ.ಯನ್ನು ಡೆಸ್ಟ್ರಾಯ್ ಮಾಡುವುದಕ್ಕೆ ಹೋಗಬೇಡಿ. That is the only public sector company which is making profit, which is making profit. I am repeating it. ಆ 70 ಸಾವಿರ ಕಾರ್ಮಿಕರ ಹೊಟ್ಟೆಗೆ ಹೊಡೆದು ಹಾಳು ಮಾಡುವುದರ ಜೊತೆಗೆ ಬಡಬಗ್ಗರು, ವಿದ್ಯಾರ್ಥಿಗಳು ಕುರುಡರು, ಕುಂಟರು, ಕಾರ್ಮಿಕರು ಪ್ರಯಾಣ ಮಾಡುವಂಥ ಬಸ್‌ಗಳನ್ನು ಸಂಪೂರ್ಣವಾಗಿ ನಿಲ್ಲಿಸಿ ಎಲ್ಲಿ ರಸ್ತೆ ಚೆನ್ನಾಗಿರುತ್ತದೆ, ಎಲ್ಲಿ ಹೈಕ್ಲಾಸ್ ಪ್ಯಾಸೆಂಜರ್ ಬರುತ್ತಾರೆ ಅಲ್ಲಿ ಮಾತ್ರ ಪ್ರೈವೇಟ್ ಬಸ್‌ಗಳನ್ನು ಓಡಿಸತಕ್ಕಂಥದ್ದು. ಆದ್ದರಿಂದ ತಾವೇನು ಕೆ.ಎಸ್.ಆರ್.ಟಿ.ಸಿ. ಯನ್ನು ಪ್ರೈವೆಟೈಸ್ ಮಾಡಲು ಹೊರಟಿದ್ದೀರಿ ನಿಮ್ಮದು ಲಾಸ್ಟ್ ಕ್ಯಾಬಿನೆಟ್ 16ನೇ ತಾರೀಖೋ ಅಥವಾ 17ನೇ ತಾರಿಖೋ ಕರೆದು

ಆಮೇಲೆ ಡಿಸಾಲ್ವ್ ಮಾಡುವುದಕ್ಕೆ ಹೊರಟಿದ್ದೀರಿ ಎಂದು ನಾನು ಕೇಳಿದ್ದೇನೆ. ಆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ತಾವೇನು ಡಿಸಿಶನ್ ತೆಗೆದುಕೊಂಡಿದ್ದೀರಿ ದಯವಿಟ್ಟು ಅದನ್ನು ರಿವರ್ಸ್ ಮಾಡಿ. ನೀವೆಲ್ಲಾ ಸೋಷಿಯಲಿಸ್ಟ್ ಚಳುವಳಿಯಲ್ಲಿ ಬಂದಿರುವುದು ಎಂದು ಹೇಳಿಕೊಳ್ಳುತ್ತೀರಿ. ನೀವ್ಯಾಕೆ ಸುಮ್ಮನೆ ಕುಳಿತುಕೊಂಡಿದ್ದಿರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಹಿಂದುಳಿದವರಿಗೆ ಮೋಸ, ದಲಿತರಿಗೆ ಮೋಸ, ನಿಮಗೆ ಓಟು ಕೊಟ್ಟವರಿಗೆ ಮೋಸ, ರೈತರುಗಳಿಗೆ ಅನ್ಯಾಯ. ಹೀಗೆ ಇಷ್ಟೆಲ್ಲಾ ಮಾಡಿ ಕೆ.ಎಸ್.ಆರ್.ಟಿ.ಸಿ.ಯನ್ನು ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದೀರಲ್ಲಾ ಅದು ಸರಿಯಲ್ಲ. ದಯವಿಟ್ಟು ಇದನ್ನು ಮಾಡಬೇಡಿ ಎಂದು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ತಾವು ಇವೊತ್ತು ನಮ್ಮ ಬಗ್ಗೆ ಸ್ವಲ್ಪ ಬೇಸರ ಮಾಡಿಕೊಂಡಿದ್ದೀರಿ. ನನಗೆ ಗೊತ್ತು

ಅಧ್ಯಕ್ಷರು : ಇಲ್ಲ. ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬೇಸರ ಮಾಡಿಕೊಂಡಿದ್ದಾರೆ ನಿಮ್ಮಲ್ಲಿ ನಾನು ಕ್ಷಮೆ ಕೇಳುತ್ತೇನೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಸಂಯುಕ್ತ ಜನತಾ ದಳದ 19 ಶಾಸಕರ ನಾಯಕನಾಗಿದ್ದಂಥ ಸಂದರ್ಭದಲ್ಲಿ ನನಗೆ ತಾವು ಸದನದಲ್ಲಿ ಕೊಟ್ಟಿರತಕ್ಕಂಥ ಸಹಕಾರವನ್ನು ಯಾವತ್ತೂ ಮರೆಯುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ಈ ಸದನದಲ್ಲಿ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮತ್ತು ಹಿರಿಯ ಮಂತ್ರಿಗಳು ಬಂದು ಕುಳಿತುಕೊಂಡು, ಎಷ್ಟು ಹೊತ್ತಾದರೂ ಕೂಡ ನಮ್ಮ ಮಾತುಗಳನ್ನು ಕೇಳಿದ್ದಾರೆ. ಅವರು ಕೆಲಸ ಮಾಡುವುದು ಬಿಡುವುದು ಅವರ ಕೈಯಲ್ಲಿ ಇಲ್ಲ. ಏಕೆಂದರೆ The whole power is centralised with one person in KArnataka, and his people around him. ಸುತ್ತಮುತ್ತ ಇರತಕ್ಕಂಥ ಜನಗಳು. ಇವರನ್ನು ನೀವು ಏನಂಥ ಬೇಕಾದರೂ ಕರೆದುಕೊಳ್ಳಿ. ಕೋಟರಿ ಅಂತ ಕರೆದುಕೊಳ್ಳಿ, ರಿಲೆಟಿವ್ಸ್ ಎಂದು ಕರೆದುಕೊಳ್ಳಿ, ಫ್ರೆಂಡ್ಸ್ ಎಂದು ಕರೆದುಕೊಳ್ಳಿ. ಇನ್ನೇನು ಬೇಕಾದರೂ ಕರೆದುಕೊಳ್ಳಿ. ನನ್ನದೇನೂ ತಕರಾರು ಇಲ್ಲ. ಅದು ಸೆಂಟ್ರಲೈಜ್ ಆಗಿದೆ. ಅದು ಓಕೆ, ಆದರೆ ಬಂತು ನೀವು ಕೇಳಿದ್ದೀರಿ. ಬೆಳಿಗ್ಗೆ ತಾವು ಫೋಟೊ ಸೆಷನ್ ಮಾಡಿ ಉಪಕಾರ ಮಾಡಿದಿರಿ. ನಾವೆಲ್ಲಾ ಈ ಅಸೆಂಬ್ಲಿಯಲ್ಲಿ ಇದ್ದೆವು ಎನ್ನುವುದಕ್ಕೆ ಅದೊಂದು ಸಾಕ್ಷಿ. ಶಾಸಕರ ದಿನಾಚರಣೆ ಆಯಿತು. ಅದು ಶಾಸ್ತ್ರ ಅಷ್ಟೆ. ಅದನ್ನೂ ಕೂಡ ಮಾಡುವುದಕ್ಕೆ ಆಗಲಿಲ್ಲ. ನೀವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ ನೀವು ಬಹಳ ಪ್ರಾಮಾಣಿಕವಾಗಿ ಶಾಸಕರ ಸೌಲಭ್ಯಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದಿರಿ. ಈ ಸರ್ಕಾರದಲ್ಲಿ ಹಣ ಇಲ್ಲದೆ ಹೋದರೂ ಕೂಡ ನೀವು ಶಾಸಕರ ಸವಲತ್ತುಗಳಿಗೆ ಪ್ರಯತ್ನ ಮಾಡಿ ಮಾಡಿದಿರಿ. ಈ ಸಂದರ್ಭದಲ್ಲಿ ನಿಮ್ಮ ಉಪಕಾರವನ್ನು ನೆನೆಸಿಕೊಳ್ಳುತ್ತೇನೆ. ಮತ್ತು ಇವತ್ತು ಮಾತನಾಡುವುದಕ್ಕೆ ಅವಕಾಶ ಇಲ್ಲದೆ ಇದ್ದರೂ ಕೂಡ ನನಗೆ ಬೆಲ್ ಹೊಡೆಯದೆ ಮುಕ್ಕಾಲು ಘಂಟೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಯಾವತ್ತು ಇದನ್ನು ನೆನಪಿಸಿಕೊಳ್ಳುತ್ತೇನೆಂದು ಹೇಳುತ್ತಾ ನಿಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸಿತ್ತೇನೆ.

ಅಧ್ಯಕ್ಷರು : ಮಾನ್ಯ ಬಿ.ಬಿ. ಶಿವಪ್ಪನವರು ತಾವು ಮಾತನಾಡಿ, ಈಗ ಸಿ.ಎಂ ಬಂದು ಬಿಡುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ನನಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ತಾವು ಕೊಟ್ಟಂತಹ ಸಮಯದಲ್ಲಿ ನನ್ನ ಮಾತನ್ನು ಮುಗಿಸುವಂತಹ ಒಂದು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇನೆ. ಈ ವರ್ಷ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಆಯವ್ಯಯ ಪಟ್ಟಿಯಲ್ಲಿ

ಕಾಫಿ ಬೆಳೆಗಾರರಾದ ನಮಗೆ ಕೆಲವು ರಿಯಾಯಿತಿ ತೋರಿಸಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಕಾಫಿ ಉದ್ಯಮ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಟ್ಟಿರುವುದು. ಆದರೂ ಕೂಡ ರಾಜ್ಯಸರ್ಕಾರ ತನ್ನ ಇತಿಮಿತಿಯನ್ನು ಅರಿತು ನೂರು ಕೋಟಿ ರೂಪಾಯಿಗೂ ಮಿಗಿಲಾಗಿ ಒಂದು ಸಹಾಯವನ್ನು ಒದಗಿಸಿದ್ದಾರೆ. ಆದರೆ ನಮ್ಮ ಮಾನ್ಯತೆ ಪಡೆದಂತಹ ವಿರೋಧ ಪಕ್ಷದವರು ಇದರ ಬಗ್ಗೆ ಗಮನ ಹರಿಸಲಿಲ್ಲ. ಮಾನ್ಯ ಕಾನೂನು ಮಂತ್ರಿಗಳು....

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಈಗಾಗಲೇ ಕಾಫಿ ಬಗ್ಗೆ ಒಂದು ಪ್ಯಾಕೇಜ್ ಪ್ರಕಟ ಮಾಡಿ ಎಲ್ಲಾ ವ್ಯವಸ್ಥೆಗಳನ್ನು ಕಾಫಿ ಬೆಳೆಗಾರರಿಗೆ ಸಿಗುವಂತಹ ರೀತಿಯಲ್ಲಿ ಮಾಡಿದ್ದಾರೆ. ಜಸ್ವಂತ್‌ಸಿಂಗ್‌ರವರು ಕ್ಲಿಯರ್ ಆಗಿ ಹೇಳಿದ್ದಾರೆ. ಆದರೂ ಏನೂ ಮಾಡಲಿಲ್ಲವೆಂದು ಹೇಳುವಂತಾದ್ದು ಸರಿಯಲ್ಲ, ಅದನ್ನು ಕಡತದಿಂದ........

ಶ್ರೀ ಬಿ.ಬಿ. ಶಿವಪ್ಪ : ಏನೂ ಒದಗಿಸಲಿಲ್ಲ, ಅಲ್ಲಿ ಏನೇನೂ ಒದಗಿಸಲಿಲ್ಲ.

ಶ್ರೀ ಮೋಟಮ್ಮ : ಚಿಕ್ಕಮಗಳೂರಿನಲ್ಲಿ ಒಂದು ಲಕ್ಷ ಕಾಫಿ ಬೆಳೆಗಾರರು ಸಂಕಷ್ಟದಲ್ಲಿ ಇದ್ದೇವೆಂದು ಎಲ್ಲಾ ಸೇರಿಕೊಂಡು ನಿಮ್ಮ ರಕ್ಷಣಾ ಸಚಿವರು, ಹಣಕಾಸಿನ ಸಚಿವರು ಬಂದಾಗ ಬೇಡಿಕೊಂಡರು ಆದರೆ ಏನೂ ಆಗಲಿಲ್ಲ. ನಾವೂ ಡೆಲಿಗೇಷನ್ ಹೋಗಿದ್ದೆವು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಯೇಲ್ಡ್ ಆಗುವುದಿಲ್ಲ. ಮಧ್ಯದಲ್ಲಿ ಏನಾದರೂ ಸಮಯ ಹೋದರೆ ಅದಕ್ಕೆ ಅವರೇ ಜವಾಬ್ದಾರಿ. ನನ್ನ ಸಮಯ ಕಟ್ ಮಾಡಬೇಡಿ.

(ಗೊಂದಲ)

ಶ್ರೀ ಬಿ.ಬಿ. ಶಿವಪ್ಪ : ನನ್ನ ಸಮಯ ಕಳೆಯಬೇಡಿ ಮಾನ್ಯ ಅಧ್ಯಕ್ಷರೆ, ನೀವು ಕೊಟ್ಟಂತಹ ಸಮಯವನ್ನು ಅಷ್ಟರಲ್ಲೇ ಉಪಯೋಗಿರುವಂತಹ ಪ್ರಯತ್ನವನ್ನು ಮಾಡುತ್ತೇನೆ. ಮಾನ್ಯ ಕಾನೂನು ಮಂತ್ರಿಗಳು ಒಂದು ಸಲಹೆ ಕೊಟ್ಟರು. ಈ ಕಾಫಿ ಉದ್ಯಮದ ಬಗ್ಗೆ ಚರ್ಚೆಯಾಗಬೇಕಾದರೆ, ಅದು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಬೇಕು, ಅಲ್ಲಿ ನಮ್ಮ ಪರವಾಗಿ ಮಾತನಾಡುವಂತಹ ಎಂಪಿಗಳು ಇರಬೇಕು. ಇದರ ಬಗ್ಗೆ ಒಂದು ಪ್ರಯತ್ನ ಮಾಡೋಣ ರಾಜ್ಯದಲ್ಲಿ ಕಾಫಿ ಬೆಳೆಯುವ ಏರಿಯಾ ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಇಲ್ಲಿಯ ಚುನಾಯಿತ ಪ್ರತಿನಿಧಿಗಳು ಎಂಎಲ್‌ಎ ಇರಬಹುದು, ಎಂಎಲ್‌ಸಿ ಇರಬಹುಸು ರಾಜ್ಯಸಭೆಯ ಮೆಂಬರ್ ಮತ್ತು ಎಂಪಿಗಳು ಇಷ್ಟು ಜನ ಸೇರಿಸಿ ಒಂದು ಸಭೆ ನಡೆಸಬೇಕು ಎಂದು ಒಂದು ಪ್ರಯತ್ನವನ್ನು ಮಾಡಿದಾಗ ಒಳ್ಳೆಯ ರೀತಿಯಲ್ಲಿ ಸಹಕಾರ ನನಗೆ ಸಿಕ್ಕಿತು. ಸುಮಾರು ನೂರಕ್ಕಿಂತ ಹೆಚ್ಚಿಗೆ ಚುನಾಯಿತ ಪ್ರತಿನಿಧಿಗಳು ಆ ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿ ಉತ್ತಮವಾಗಿ ಚರ್ಚೆ ನಡೆಯಿತು, ಆಗ ಅಲ್ಲಿ ಕಾಫಿ ಟ್ರೇಡರ್ಸ್ ಇದ್ದರು. ಕಾಫಿ ಬೋರ್ಡ್ ಚೇರ್‌ಮನ್ ಇದ್ದರು. ಎಲ್ಲರೂ ಸೇರಿಕೊಂಡು ಅಲ್ಲಿ ಬಹಳ ಚೆನ್ನಾಗಿ ಚರ್ಚೆ ನಡೆಯಿತು. ಆ ಸಭೆಗೆ ಬಿಜೆಪಿಯಿಂದ ಆರಿಸಿ ಬಂದಂತಹ ಸದಸ್ಯರುಗಳು ಬಂದಿದ್ದಾರು. ಮಾನ್ಯ ಧನಂಜಯ ಕುಮಾರ್ ಅವರು ಅವತ್ತು ಆರ್ಥಿಕ ಮಂತ್ರಿಯಾಗಿದ್ದರು. ಅವರೂ ಕೂಡ ಅದರ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಈಗ ಏನು ನಮ್ಮ ಮಿತ್ರರು ಹೇಳುತ್ತಿದ್ದಾರೆ, ಆ ಮೀಟಿಂಗ್‌ಗೆ ಬಂದಂತಹ ಬಿಜೆಪಿ ಸದಸ್ಯರಿಗೆ ನೋಟೀಸ್ ಕೊಟ್ಟರು. ನೀವು ಏಕೆ ಆ ಮೀಟಿಂಗ್‌ಗೆ ಹೋದಿರಿ ಎಂದು. ಇವತ್ತು ನಾವೇನೋ ಮಾಡಿದ್ದೇವೆಂದು ಹೇಳುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : ಆ ನೋಟೀಸ್ ಕೊಟ್ಟಿರುವುದನ್ನು ಕ್ಲಾರಿಫೈ ಮಾಡಿ. ಸುಮ್ಮನೆ ಇಲ್ಲದ ಸಲ್ಲದನ್ನು ಹೇಳುತ್ತಾ, ಯಾರಿಗೋ ನೋಟೀಸ್ ಕೊಟ್ಟಿದ್ದಾರೆಂದು ಹೇಳುತ್ತಾರೆ. ಯಾರಿಗೆ

ಕೊಟ್ಟಿದ್ದಾರೆಂದು ಸ್ಪಷ್ಟಪಡಿಸಿ ನೀವು ಸುಮ್ಮನೆ ನೋಟೀಸ್ ಕೊಟ್ಟಿದ್ದಾರೆಂದು, ಸುಮ್ಮನೆ ಆರೋಪಗಳನ್ನು ಮಾಡುವುದು ಸರಿಯಲ್ಲ . ನಮಗೂ ಗೊತ್ತಾಗಿದೆ ಆಡಳಿತ ಪಕ್ಷದವರು ಶಾಮೀಲಾಗಿ ಇವತ್ತು ಇವರ ಬಾಯಿಯಿಂದ ಹೇಳಿಸುತ್ತಿದ್ದಾರೆ. ಕಾಫಿ ಬೆಳೆಗಾರರ ಬಗ್ಗೆ ಆಡಳಿತ ಪಕ್ಷದ ಕೆಲವು ಮಂತ್ರಿಗಳು ಶಿವಪ್ಪ ಅವರ ಬಾಯಿಯಿಂದ ಹೇಳಿಸಬೇಕೆಂದು ಹೇಳಿದ್ದಾರೆಂದು ಕೂಡ ಜನಜನಿತವಾಗಿದೆ. ಇದನ್ನು ನಾವೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಸದಾನಂದಗೌಡರು ಮಾತಿನಲ್ಲಿ ನಿಸ್ಸೀಮರಿದ್ದಾರೆ. ಅವರು ಏನೂ ಬೇಕಾದರೂ ಹೇಳುತ್ತಾರೆ. ಇವತ್ತು ಈ ಸದನದಲ್ಲಿ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಅವರ ಪಕ್ಷದ ಅಧ್ಯಕ್ಷರಿಂದ ಆ ಸಭೆಗೆ ಭಾಗವಹಿಸಿದಂತಹ ಸದಸ್ಯರಿಗೆ ಬಂದಂತಹ ನೋಟೀಸ್ ಅನದನು ಇಲ್ಲಿ ತೋರಿಸಿದರೆ ಮಾನ್ಯ ಸದಾನಂದಗೌಡರು ಏನು ಮಾಡುತ್ತಾರೆ? ಅದನ್ನು ಹೇಳಬೇಕು?

ಶ್ರೀ ಡಿ.ವಿ. ಸದಾನಂದಗೌಡ : ತೋರಿಸಿ.

ಶ್ರೀ ಬಿ.ಬಿ. ಶಿವಪ್ಪ : ನಾನು ಪೊಳ್ಳು ಭಾಷಣ ಅಥವಾ ಪೊಳ್ಳು ಆಶ್ವಾಸನೆಗಳನ್ನು ಮಾತನಾಡತಕ್ಕಂಥ ವ್ಯಕ್ತಿ ನಾನಲ್ಲ. ನಾನು ಈ ಸದನದಲ್ಲಿ ಇಲ್ಲಿಯವರೆಗೆ ಮಾತನಾಡಿಲ್ಲ. ಇವತ್ತು ಕೊನೆಯದಾಗಿ ಮಾತನಾಡುತ್ತಿದ್ದೇನೆ. ಶ್ರೀಮತಿ ಮೋಟಮ್ಮನವರು ಹೇಳಿದ ಹಾಗೆ ಅಲ್ಲಿ ಮಂತ್ರಿಗಳ ತಂಡವೇ ಬಂತು. ಚಿಕ್ಕಮಗಳೂರು ಮತ್ತು ಕೊಡಗಿನಲ್ಲಿ ಭಾಷಣ ಎಂದರೆ ಹರಿದಿದ್ದು, ಹರಿದಿದ್ದೇ. ಕಾಫಿ ಬೆಳೆಗಾರರ ಬಗ್ಗೆ ಏನೇನು ಮಾಡಬೇಕೆಂದು ಹರಿಸಿದರು. ಅದು ಹರಿದು ಹರಿದು ಹೋಗಿ ಕೊನೆಗೆ ಅರಬ್ಬಿ ಸಮುದ್ರ ಸೇರಿತೇ ವಿನಃ ಆ ನೀರು ಪ್ಲಾಂಟರ್ಸ್ ಕಡೆ ಹರಿಯಲಿಲ್ಲ. ಇವತ್ತು ಈ ಕಾರ್ಯಕ್ರಮದಲ್ಲಿ ಯಾವತ್ತು ರೈತರ ಬಗ್ಗೆ ಮಾತನಾಡತಕ್ಕಂಥ ನಮ್ಮ ಮಿತ್ರರು, ಕಾಫಿ ಬೆಳೆಗಾರರೂ ಕೂಡ ರೈತರು ಎನ್ನುವುದನ್ನು ಮರೆತು ಬಿಟ್ಟರು. ಇವತ್ತು ಅವರ್ಯಾರೋ ಹೇಳಿದವರ ಮಾತನ್ನು ಕಟ್ಟಿಕೊಂಡು ನಾನು ಮಾತನಾಡುತ್ತೇನೆ ಎಂದು ಏನು ಸದಾನಂದಗೌಡರು ಹೇಳುತ್ತಿದ್ದಾರೆ ಅದು ಸತ್ಯಕ್ಕೆ ದೂರವಾದುದು. ನಾನೂ ಕಾಫಿ ಬೆಳೆಗಾರ, ನಮ್ಮ ಅಪ್ಪ ಕಾಫಿ ಬೆಳೆಗಾರ, ನಮ್ಮ ಅಜ್ಜ ಕಾಫಿ ಬೆಳೆಗಾರ ನಮ್ಮ ಇಡೀ ಕುಟುಂಬವೇ ಕಾಫಿ ಬೆಳೆಗಾರರು. ಅಂದಮೇಲೆ ಇನ್ನೊಬ್ಬರ ಮಾತನ್ನು ಕೇಳಿ ಹೇಳಬೇಕಾದಂತಹ ಅವಶ್ಯಕತೆ ಇಲ್ಲ. ನಮ್ಮ ಸಂಕಟವನ್ನು ರಾಜ್ಯಸರ್ಕಾರದ ಇತಿಮಿತಿಯೊಳಗೆ ಅವರಿಗೆ ಏನು ಮಾಡುವುದಕ್ಕೆ ಸಾಧ್ಯವಿದೆ ಅಷ್ಟನ್ನೂ ಮಾಡಿದ್ದಾರೆ ಎನ್ನುವುದಕ್ಕೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಇವರು ಮಾಡಲಿಲ್ಲವೆನ್ನುವುದನ್ನು ಹೇಳುತ್ತಿದ್ದೇನೆ. ತಪ್ಪೇನಿಲ್ಲ. ಏಕೆಂದರೆ ಸಂಪೂರ್ಣವಾಗಿ ಈ ವ್ಯವಹಾರ ಕೇಂದ್ರಸರ್ಕಾರಕ್ಕೆ ಸಂಬಂಧಪಟ್ಟದ್ದು. ನನ್ನ ಕ್ಷೇತ್ರದಲ್ಲಿ ಹೇಮಾವತಿ ಡ್ಯಾಂ ವಿಚಾರದಲ್ಲಿ ಮಾನ್ಯ ಮಂತ್ರಿಗಳ ಜೊತೆ ಅನೇಕ ಸಂದರ್ಭದಲ್ಲಿ ಮಾತನಾಡಿದ್ದೇನೆ. ಈ ಹೇಮಾವತಿ ಡ್ಯಾಂ ಮಾಡಿದಾಗ ಸುಮಾರು 46 ಗ್ರಾಮ ಸೇರಿದಂತೆ ಒಟ್ಟು 8,500 ಹೆಕ್ಟೇರ್ ಜಾಗ ಮುಳುಗಡೆಯಾಯಿತು. ಅಲ್ಲಿ ಮುಳುಗಡೆಯಾದವರಿಗೆ ಪರಿಹಾರ ಕೊಡಬೇಕಾಗಿತ್ತು. ಅದಕ್ಕೆ ಅಲ್ಪಸ್ವಲ್ಪ ಪರಿಹಾರ ಕೊಟ್ಟರು. ಇನ್ನು ಸ್ವಲ್ಪ ಬಾಕಿ ಇದೆ. ಆದರೆ ಏನು ಒಂದು ತೀರ್ಮಾನ ತೆಗೆದುಕೊಂಡರು ಎಂದರೆ ಮುಳುಗಡೆ ಏನು ಆಗುತ್ತದೆ ಅದರ ಪಕ್ಕದಲ್ಲಿ ಇರುವಂತಹ ಹಳ್ಳಿಗಳು ಏನಿದೆ ಅವುಗಳನ್ನು ಸೀಪೇಜ್ ಎಂದರೆ ಶೀತಪೀಡಿತ ಪ್ರದೇಶ ಎಂದು ಹೇಳಿ ಒಂದು ಕಾನೂನು ಮಾಡಿ ಅದಕ್ಕೆ ಸರ್ವೇ ಮಾಡಿ ಸುಮಾರೂ 17 ಹಳ್ಳಿಗಳನ್ನು ಗುರುತು ಮಾಡಿ ಹತ್ತು ಕೋಟಿ ರೂಪಾಯಿಗಳನ್ನು ತೆಗೆದಿಡಲಾಯಿತು. ಆದರೆ ಅದಕ್ಕೆ ಇವತ್ತಿನವರೆಗೂ ಪರಿಹಾರ ಸಿಕ್ಕಿಲ್ಲ. ಈಗಾಗಲೇ ಇದು 26 ವರ್ಷವಾಯಿತು. 26 ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡುತ್ತಿದ್ದರೂ ಕೂಡ ರೈತರಿಗೆ ಪರಿಹಾರ ಸಿಗಲಿಲ್ಲ. ಈಗ ತೊಂದರೆ ಏನಾಗಿದೆ ಎಂದರೆ ಹಿಂದೆ ಆಡಳಿತ ಮಾಡುತ್ತಿದ್ದ

ದಳ ಸರ್ಕಾರ ಇವತ್ತು ಡ್ಯಾಂ ಕಟ್ಟೆ ಮುಳುಗಡೆ ಅದರಲ್ಲಿ ಆಗಿರುವವರು ನಾವು. ಚಾನಲ್ ಕೆಳಗಡೆ ಹರಿದು ಹೋಗುತ್ತದೆ. ಚಾನಲ್ ಹರಿದು ಹೋಗತಕ್ಕಂಥ ಕಡೆಯವರಿಗೆ ನೀರಾವರಿ ಅನುಕೂಲವಾಯಿತು. ಅವರಿಗೆ ವಸತಿಯಾಗಿದೆ. ಅಲ್ಲಿ ಚಾನಲ್ ಹೋದಾಗ ಅಲ್ಲಿಯವರಿಗೆ ಶೀತಪೀಡಿತರು ಎಂದು ಹಣ ಕೊಟ್ಟರು. ಆದರೆ ನಾವು ಸಂಪೂರ್ಣವಾಗಿ ಮಾಡದೆ ಇರುವ ತಪ್ಪಿಗೆ ಯಾರಿಗೋ ಉಪಕಾರ ಮಾಡಿ ಮುಳುಗಡೆಯಾಗಿರುವಂತಹ 46 ಹಳ್ಳಿಯ ಜನ ಇವತ್ತು ಪರಿತಪಿಸುತ್ತಿದ್ದಾರೆ. ಅವರಿಗೆ ಈ ಹಣವನ್ನು ಕೊಡುವುದಕ್ಕೆ ಏನು ತೊಂದರೆ ಇದೆ? ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮೊನ್ನೆ ಒಬ್ಬರು ರೆವಿನ್ಯೂ ಇಲಾಖೆಯಿಂದ ಇನ್ಸ್‌ಪೆಕ್ಟ್ ಮಾಡುವುದಕ್ಕೆ ಹೋಗಿದ್ದಾರೆ. ಈಗಾಗಲೇ ಮೂರು ವರ್ಷದಿಂದ ಮಳೆಯಿಲ್ಲ. ಡ್ಯಾಂ ಭರ್ತಿಯಾಗಲಿಲ್ಲ. ಈಗ ಅದನ್ನು ಸಮೀಕ್ಷೆ ಮಾಡಿ ಬಂದಂತಹ ಪುಣ್ಯಾತ್ಮರು ದೇವಮಾನವರು ಇರಬೇಕು, ಆ ರೆವಿನ್ಯೂ ಇಲಾಖೆಯ ಒಬ್ಬ ಕಾರ್ಯದರ್ಶಿಯವರು ಒಂದು ವರದಿ ಕೊಟ್ಟಿದ್ದಾರೆ ಎನ್ನುವಂತಹ ವದಂತಿ ಇದೆ. ಅವರು ವರದಿ ಏನು ಕೊಟ್ಟಿದ್ದಾರೋ ಗೊತ್ತಿಲ್ಲ. ಆದರೆ ನನಗೆ ತಿಳಿದು ಬಂದಿರುವುದು ಅಣೆಕಟ್ಟು ಕಟ್ಟಿದ್ದೇ ದಂಡ. ಇಲ್ಲಿಯವರೆಗೆ ನೀರು ಬರುವುದಿಲ್ಲವೆಂದು ಹೇಳಿದ್ದಾರೆಂದು ಇದೆ. ಮೂರು ವರ್ಷಗಳು ಬರಗಾಲ ಪೀಡಿತರಾಗಿ ನೀರು ಬಂದಿಲ್ಲದೆ ಇರುವುದರಿಂದ, ಮಳೆ ಬಂದು ನೀರು ಬಂದಂಥ ಸಂದರ್ಭದಲ್ಲಿ ಅಥವಾ 26 ವರ್ಷಗಳಲ್ಲಿ ನೀರು ಬರದಂತಹ ಸಂದರ್ಭಗಲ್ಲಿ ಅವರು ಸಮೀಕ್ಷೆ ಮಾಡಿ ಹೇಳಿಕೆ ಕೊಟ್ಟಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತಿದೆ. ಇವತ್ತು ಆ ಹೇಳಿಕೆ ಏನಿದೆ ಅದನ್ನು ಸರ್ಕಾರ ತರಿಸಿ ಅದರ ಬಗ್ಗೆ ಗಮನ ತೆಗೆದುಕೊಳ್ಳಬೇಕೆಂದು ಹೇಲುತ್ತಾ, ಇನ್ನು ಇನ್ಸೂರೆನ್ಸ್ ಬಗ್ಗೆ ದೊಡ್ಡ ಗೊಂದಲ ಇಡೀ ರಾಜ್ಯದಲ್ಲಿ ಪ್ರಾರಂಭವಾಗಿದೆ. ನನ್ನ ತಾಲ್ಲೂಕಿನಲ್ಲಿ ಅಸಾಧ್ಯ ಗೊಂದಲ ಪ್ರಾರಂಭವಾಗಿದೆ. ಅದು ಎಲ್ಲಿ ಹೋಗಿ ತಲುಪುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ನಾನು ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಯಾವುದಾದರೂ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ನಾವು ಚುನಾವಣೆ ಹೋಗುವಂತಹ ಸಂದರ್ಭದಲ್ಲಿ ಇದು ದೊಡ್ಡ ಇಶ್ಯೂ ಆಗಿ ಬರುವಂತಹ ಒಂದು ವಾತಾವರಣ ನಿರ್ಮಾಣವಾಗಿರುವುದರಿಂದ ಕೊನೇಪಕ್ಷ 5 ಸಾವಿರ ಎಕರೆಗೆ ಎನ್ನುವ ರೀತಿಯಲ್ಲಿ ತಾವು ಇನ್ಸೂರ್ ಕೊಟ್ಟರೆ ಬಹುಶ ರೈತರಿಗೆ ಅನುಕೂಲ ಆಗಬಹುದು. ಹಾಗೂ ಈ ಗೊಂದಲದಿಂದ ಹೊರಗೆ ಬರಬಹುದು ಎಂದು ಹೇಳುತ್ತಾ, ಕೊನೆಯದಾಗಿ ದಿ: 31.3.99 ರಲ್ಲಿ ಈ ಸದನದಲ್ಲಿ ಮುಳುಗಡೆಯಾದ ಬಗ್ಗೆ ಮಾತನಾಡಿದೆ.

11.40 ಎ.ಎಂ

ಕೊನೆಯದಾಗಿ ದಿ: 31.3.1999ರಂದು ಸದನದಲ್ಲಿ ಮುಳುಗಡೆಯ ವಿಚಾರವಾಗಿ ಮಾತನಾಡಿದ್ದೆ, ಆಗಿನ ನೀರಾವರಿ ಸಚಿವರಾಗಿದ್ದಂತಹ ದಿವಂಗತ ಶ್ರೀ ಕೆ.ಎನ್. ನಾಗೇಗೌಡರು ಒಂದು ಹೇಳಿಕೆಯನ್ನು ಕೊಟ್ಟರು. ಈಗ ಸಭೆಯಲ್ಲಿ ಆ ಹೇಳಿಕೆಯನ್ನು ಓದಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

"**ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಮಂತ್ರಿ)** : ಮಾನ್ಯ ಉಪಾಧ್ಯಕ್ಷರೇ, ನಮ್ಮ ಹಿರಿಯ ಸದಸ್ಯರಾದ ಶ್ರೀ ಬಿ.ಬಿ.ಶಿವಪ್ಪನವರು ಏನು ಹೇಳಿದ್ದಾರೆ, ಸರ್ಕಾರದ ಆದೇಶವನ್ನು ನಾವು ಕೊಟ್ಟಿದ್ದು ನಿಜ. ಮುಖ್ಯಮಂತ್ರಿಗಳು ಬರೆದಿರುವುದು ನಿಜ. ಅದಕ್ಕೆ ಹಣವನ್ನು ನಾವು ಸೀಮಿತವಾಗಿ ಮಾಡಿರಲಿಲ್ಲ. ಈಗ ಹೋದ ಕ್ಯಾಬಿನೆಟ್‌ನಲ್ಲಿ ಹೇಮಾವತಿ ಜಲಾಶಯದಲ್ಲಿ ಮುಳುಗಡೆಯಾಗಿರತಕ್ಕಂಥ ಅಥವಾ ಸೀಪೇಜ್ ಇರತಕ್ಕಂಥ ಹಳ್ಳಿಗಳನ್ನು ಗುರುತಿಸಿ ಈ ವರ್ಷ 5 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಬೇಕು ಎಂದು ಹೇಳಿ ಹೋದ ಬಜೆಟ್‌ನಲ್ಲಿ ಎನ್‌ಮಾರ್ಕ್ ಮಾಡಿದ್ದೇವೆ. ಆದ್ದರಿಂದ ಆ

5 ಕೋಟಿ ಜೊತೆಗೆ ನಮಗೆ ದುಡ್ಡು ಇರತಕ್ಕಂಥಾದ್ದರಲ್ಲಿ ನಮ್ಮ ನಾಲೆ ಕೆಲಸ ಎಲ್ಲಾ ಮಾಡಬೇಕಾಗಿರುವುದರಿಂದ ಒಂದು ಮೀಟಿಂಗ್ ಮಾಡಿ ಕೂಡಲೇ ಕಂದಾಯ ಮಂತ್ರಿಗಳು ನಾನು ಇಬ್ಬರೂ ಜಾಯಿಂಟ್ ಮೀಟಿಂಗ್ ಮಾಡಿ, ಮಾನ್ಯ ಶಿವಪ್ಪನವರನ್ನೂ ಕರೆಸಿ, ಬಹಳ ಅವಶ್ಯಕವಾಗಿ ಪುನರ್ ವ್ಯವಸ್ಥೆ ಮಾಡತಕ್ಕಂಥ ಹಳ್ಳಿಗಳಿಗೆ ಮಾಡತಕ್ಕಂಥ ಕೆಲಸ ಯಾವುದು ಎಂದರೆ ರಸ್ತೆ ಮಾಡಿಕೊಡುವಂಥಾದ್ದು ಮತ್ತು ಕುಡಿಯುವ ನೀರು ಕೊಡತಕ್ಕಂಥಾದ್ದು. ಇವೆರಡಕ್ಕೆ ನಾವು ಬಹಳ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ಅವರದ್ದೊಂದು ಮೀಟಿಂಗ್ ಕರೆಸಿ ಯಾವ್ಯಾವ ಹಳ್ಳಿಗಳು ಮುಳುಗಡೆಯಾಗಿದ್ದಾವೆ, ಎಲ್ಲಿ ಪರಿಹಾರ ಕೊಟ್ಟಿಲ್ಲ, ಎಲ್ಲಿ ಕೆಲಸ ಆಗಿಲ್ಲ. ಅದರ ಎಸ್ಟಿಮೇಟ್ ಏನಿದೆ, ನೋಡಿ ಅವರನ್ನು ಕೂರಿಸಿಕೊಂಡು, ನಾನು ಅಧಿಕಾರಿಗಳನ್ನೆಲ್ಲಾ ಕರೆಸಿ ಕೂತು ಮಾತನಾಡಿ ಎಷ್ಟು ನಮ್ಮ ಗ್ರಾಂಟ್ ಇದೆ, ಅಷ್ಟರೊಳಗ ಪ್ರತಿ ವರ್ಷ ಎಷ್ಟು ಮಾಡಬಹುದು, ಮುಂದಿನ ವರ್ಷ ಎಷ್ಟು ಮಾಡಬಹುದು ಎಂದು ನೋಡುತ್ತೇನೆ. ಇದು ನಿಧಾನವಾಗಿರುವುದಕ್ಕೆ ನಾನು ಕ್ಷಮೆ ಯಾಚಿಸುತ್ತೇನೆ. ಇದು 96–97ರಲ್ಲಿ ಆಗಿದೆ. ನೀವು ಎರಡು–ಮೂರು ಸಲ ನನಗೆ ಹೇಳಿದ್ದೀರಿ. ನಮ್ಮ ಇಲಾಖೆಯಿಂದ ತಪ್ಪಾಗಿದೆ ನಾನು ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇನೆ ಮತ್ತು ಇನ್ನು ಒಂದು ವಾರದಲ್ಲಿ ನಿಮಗೆ ಫಲಿತಾಂಶ ಕೊಡುತ್ತೇನೆ. ಕೆಲವು ಗ್ರಾಮಗಳನ್ನು ಕೈಗೊಳ್ಳುವ ವ್ಯವಸ್ಥೆ ಮಾಡಬೇಕು. ಕೂಡಲೇ ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ಅವರಿಗೆ ಕೊಡುತ್ತೀರಾ? ಇದಕ್ಕೋಸ್ಕರ ಈಗ ತಾವು ಕೊಟ್ಟಂಥ ಹಣ ಇದೆ. ಕೈಗೆತ್ತಿಕೊಳ್ಳುವುದಕ್ಕೆ ಅವರಿಗೆ ಹೇಳುತ್ತೀರಾ?

ಶ್ರೀ ಕೆ.ಎಸ್. ನಾಗೇಗೌಡ : ನಾನು ಹೇಳುತ್ತೇನೆ. ಅದು ಬಹಳ ಜೆನ್ಯೂನ್ ಕೇಸ್ ಇದೆ. ಅದು ಸ್ವಲ್ಪ ನಮ್ಮ ಕಡೆಯಿಂದ ತಪ್ಪಾಗಿದೆ. ಅದಕ್ಕಾಗಿ ನಾನು ಅಕ್ಸೆಪ್ಟ್ ಮಾಡಿಕೊಂಡಿದ್ದೇನೆ. ನಾನು ಖಂಡಿತವಾಗಿಯೂ ಡೈರೆಕ್ಷನ್ ಕೊಡುತ್ತೇನೆ.” ಈ ಸದನದಲ್ಲಿ ಇಷ್ಟನ್ನು ಹೇಳಿದ್ದಾರೆ, ಇದು 1999ರಲ್ಲಿ ಕೊಟ್ಟಿರುವಂಥದ್ದು ಈಗ 2004ನೇ ಇಸವಿ, ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ, ಈಗಲಾದರೂ ಇದರ ಬಗ್ಗೆ ಗಮನವರಿಸಬೇಕೆಂದು ಕೇಳುತ್ತೇನೆ, ಇನ್ನು ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಯವರು, ತಮ್ಮ ಇತಿಮಿತಿಯಲ್ಲಿ ಕಾಫಿ ಬೆಳೆಗಾರರಿಗೆ ಅಂದಾಜು ನೂರು ಕೋಟಿರೂಗೂ ಮಿಗಿಲಾಗಿ ಸಹಾಯವನ್ನು ಮಾಡಿದ್ದಾರೆ, ಇಲ್ಲಿ ಕೆಲವೊಂದು ಸಣ್ಣ ಬದಲಾವಣೆಗಳನ್ನು ನಾನು ಕೇಳಲಿಚ್ಛಿಸುತ್ತೇನೆ. ಇಲ್ಲಿ ಕಾಲಂನಲ್ಲಿ ಸಣ್ಣ ಮತ್ತು ಅತಿ ಸಣ್ಣ ಎಂಬ ಎರಡು ಶಬ್ದಗಳನ್ನು ಸೇರಿಸಿದ್ದಾರೆ, ಅದನ್ನು ತೆಗೆದು “ಕಾಫಿ ಬೆಳೆಗಾರ” ಎಂದು ಮಾಡಿದರೆ, ಎಲ್ಲಾ ರೀತಿಯಲ್ಲೂ ಅನುಕೂಲವಾಗುತ್ತದೆ, ಈ ಮಧ್ಯೆ ಕೆ.ಎಸ್.ಟಿ. ಆ್ಯಕ್ಟ್ ಪ್ರಕಾರ ಏಲಕ್ಕಿ ಮೇಲೆ ಸೆಸ್ ಅನ್ನು ಹಾಕಿದ್ದಾರೆ ಸೆಕ್ಷನ್ 6(ಡಿ) ಮತ್ತು 6(ಇ) ಇದರಲ್ಲಿ ರೋಡ್ ಸೆಸ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಎಂದು, ಹಾಕಬೇಕು ಇದನ್ನು ವಜಾ ಮಾಡಬೇಕು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು 10ನೇ ಮತ್ತು 12ನೇ ದಿವಸದಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಅದನ್ನೂ ಕೂಡ ಇದರಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಏನು ಬಜೆಟ್ ಅನ್ನು ಮಂಡಿಸಿದ್ದಾರೆ, ಆ ಆಯವ್ಯಯ ರೈತರ ಪರ, ಸಾರ್ವಜನಿಕ ಪರ ಹಾಗೂ ಅತ್ಯಂತ ಉತ್ತಮವಾದಂತಹ ಆಯವ್ಯಯವನ್ನು ಮಂಡಿಸಿದ್ದಾರೆ, ರವಿರೋಧಪಕ್ಷದವರು ವಿರೋಧ ಮಾಡಲೇ ಬೇಕು. ಇಲ್ಲಿ ಮಾಡಿದ್ದನ್ನೆಲ್ಲಾ ಸರಿ ಎಂದು ಹೇಳುವುದಕ್ಕೆ ಬರುವುದಿಲ್ಲ, ಆ ರೀತಿಯಲ್ಲಿ ವಿರೋಧಪಕ್ಷದವರೆಲ್ಲಾ ವಿರೋಧ ಮಾಡಿದ್ದಾರೆ, ಏಕೆಂದರೆ ಈ ಬಜೆಟ್ ಅನ್ನು ನೋಡಿ ವಿರೋಧಪಕ್ಷದವರಿಗೆಲ್ಲಾ ಸ್ವಲ್ಪ ಗಾಬರಿಯಾಗಿ ಬಿಟ್ಟಿದೆ, ಇಂತಹ ಬಜೆಟ್ ಅನ್ನು ಸದನದ ಮುಂದಿಟ್ಟು ಚುನಾವಣೆ ಹೊರಡಿದ್ದಾರಲ್ಲಾ, ಎಂದು ಅವರು ಸ್ವಲ್ಪ ಮಾತನಾಡುತ್ತಾರೆ, ಚಿಂತೆ ಇಲ್ಲ, ನಾನು ಇಷ್ಟು

ಮಾತನಾಡಲು ಅವಕಾಶ ಕೊಟ್ಟಂತಹ, ತಮಗೆ ನನ್ನ ಧನ್ಯವಾದಗಳನ್ನರ್ಪಿಸಿ ಮಾನ್ಯ ಡಿ.ವಿ. ಸದಾನಂದ ಗೌಡರು ಏನು ಹೇಲಿದ್ದಾರೆ, ಆ ಪತ್ರಗಳನ್ನು ತರಿಸಿ ಅವರ ಕಚೇರಿಗೆ ಕಳುಹಿಸಿ ಕೊಡುತ್ತೇನೆ.

†**ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ, ಈ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ, ಇದರಲ್ಲಿ ಏನಿದೆ, ಎಂಬ ಬಗ್ಗೆ. ನಮ್ಮ ನಾಯಕರುಗಳು ಸಾಕಷ್ಟು ಚರ್ಚೆ ಮಾಡಿದ್ದಾರೆ, ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರದವರು ಇಲ್ಲಿ ಒಂದು ಬುದ್ಧಿವಂತಿಕೆಯನ್ನಂತೂ ಮಾಡಿದ್ದಾರೆ, ಇಲ್ಲ ಸರ್ಕಾರಿ ಖರ್ಚಿನಲ್ಲಿ ಈ ಒಂದು ಪಕ್ಷದ ಸಲಕರಣೆಗಳನ್ನು ಮುದ್ರಣ ಮಾಡಿದ್ದಕ್ಕಾಗಿ, ಅವರನ್ನು ಈ ರಾಜ್ಯದ ಜನರು ಅಭಿನಂದಿಸಬೇಕಾಗುತ್ತದೆ, ಅವರ ಚಾಣಾಕ್ಷತನಕ್ಕೆ, ಈಗಾಗಲೇ ಈ ಹಣಕಾಸಿನ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ, ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮೊನ್ನೆ ಮೊನ್ನೆಯವರೆಗೂ ಈ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿದ್ದಂತಹ ಶ್ರೀ ಬಿ.ಎಸ್.ಪಾಟೀಲ್‌ರವರು ಪತ್ರಿಕೆಗಳಲ್ಲಿ ಒಂದು ಹೇಳಿಕೆಯನ್ನು ಇವರು ದೆಹಲಿಯಲ್ಲಿ ಅಧಿಕಾರವನ್ನು ವಹಿಸಿಕೊಳ್ಳುವಾಗ, ಈ ಹೇಳಿಕೆಯೇ ಸಾಕಾಗುತ್ತದೆ, ಇಲ್ಲಿ ಸರ್ಕಾರ ಏನು ಮಾಡಿದೆ? ಯಾವ ರೀತಿಯಲ್ಲಿ ಹಣವನ್ನು ಬಳಕೆ ಮಾಡಿಕೊಳ್ಳುತ್ತದೆ, ಎಂಬುದಕ್ಕೆ 400ಕೋಟಿ ರೂಪಾಯಿಗಳನ್ನು ಕಳೆದ ಸಾರಿ, ಕೇಂದ್ರಸರ್ಕಾರ ಏನು ಕೊಟ್ಟಿದೆ, ಅದನ್ನು ಇನ್ನು ಬಳಕೆ ಮಾಡಿಕೊಂಡಿಲ್ಲವೆನ್ನುವಂಥಾದ್ದನ್ನು ಇವರು ಹೇಳಿದ್ದಾರೆ, ಇದಕ್ಕಿಂತ ಬೇರೆ ಏನೂ ಬೇಡ, ಬೋರ್ಡ್, ಸಾಕ್ಷಾಸಧಾರಗಳು ಬೇಕಾಗಿಲ್ಲವೆಂದು ನನಗನ್ನಿಸುತ್ತದೆ. ಇವರ ಹತ್ತಿರ ಹಣವಿಲ್ಲ, ಇವರ ಖಜಾನೆಯಲ್ಲಿದ್ದಂತಹ ಹಣವನ್ನು ತೆಲಗಿ ಕಂಪನಿ ತಿಂದು, ಅದೆಲ್ಲಾ ಸಾಕಷ್ಟು ಆಗಿ ಹೋಗಿದೆ. ಅವರನ್ನು ಹಿಡಿದು ಜೈಲಿನಲ್ಲಿಟ್ಟು ರಕ್ಷಣೆ ಕೊಡುವಂತಹ ಮಹತ್ ಕಾರ್ಯವನ್ನು ಈ ಸರ್ಕಾರದವರು ಮಾಡಿದ್ದಾರೆ, ಕಳಂಕ ಹೊತ್ತಿರುವಂತಹ ಮಂತ್ರಿಯನ್ನು ಕ್ಯಾಬಿನೆಟ್‌ನಲ್ಲಿ ಕೂರಿಸಿಕೊಂಡು, ಸರ್ಕಾರಿ ಸಿಕ್ರೇಟ್ ಅನ್ನೂ ಕೂಡ ಮಾಯ ಮಾಡಿದ್ದಾರೆ. ಇಂತಹ ಕೆಲಸವನ್ನು ಮಾಡಿಕೊಂಡು ರಾಜ್ಯದ ಖಜಾನೆಯನ್ನು ಲೂಟಿ ಮಾಡಿದಂತಹವರಿಗೆ ರಕ್ಷಣೆ ಮಾಡಿ, ಇವರ ಹತ್ತಿರ ದಮಡಿ ಪೈಸೆ ಇಲ್ಲದೆ, ಇವತ್ತು ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಕೇಂದ್ರ ಸರ್ಕಾರದ ಹಣವನ್ನು ಸದ್ ಬಳಕೆ ಮಾಡಿ ಕೊಂಡಿರುವಂಥಾದ್ದನ್ನು ನಾವು ನೋಡಿದ್ದೇವೆ, ಮಾನ್ಯ ಬಿ.ಬಿ. ಶಿವಪ್ಪನವರು ಕಾಫಿ ಬೆಳೆಗಾರರ ಬಗ್ಗೆ ಹೇಳಿದ್ದಾರೆ, ಇವರಿಗೆ ಮೊನ್ನೆ ಮೊನ್ನೆ ಕೊಟ್ಟಂತಹ ಪ್ಯಾಕೇಜ್ ಇವರಲ್ಲಿ ಸಣ್ಣ ಬೆಳೆಗಾರರು 10ಎಕರೆಗಿಂತ ಒಳಗೆ ಇರುವಂತಹ ಕಾಫಿ ಬೆಳೆಗಾರರ ಬಡ್ಡಿಯನ್ನು ಕೇಂದ್ರ ಸರ್ಕಾರ ಮನ್ನಾ ಮಾಡಿದೆ, ಇದಕ್ಕೆ ಮಾನ್ಯ ಶಿವಪ್ಪನವರಂಥ ಒಬ್ಬ ಕಾಫಿ ಬೆಳೆಗಾರರು ಎದ್ದು ನಿಂತು ಅಭಿನಂದನೆಯನ್ನು ಸಲ್ಲಿಸಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಕೇಂದ್ರ ಸರ್ಕಾರ ಮಾಡಿದೆಯಾ?

ಶ್ರೀ ಆರಗ ಜ್ಞಾನೇಂದ್ರ : ಹೌದು, ಬಡ್ಡಿ ಮನ್ನಾದ ಬಗ್ಗೆ ಅನೌನ್ಸ್ ಮಾಡಿದ್ದಾರೆ. ಅದನ್ನು ನೀವು ನೋಡಲಿಲ್ಲ, ಕಾಫಿ ಬೆಳೆಗಾರರಿಗೆ ಮಾಡಿದಂತಹ ಪಾಕೇಜ್ ಅನ್ನು ಅನೌನ್ಸ್ ಮಾಡಿದ್ದಾರೆ,

ಶ್ರೀ ಡಿ.ಬಿ. ಚಂದ್ರೇಗೌಡ : ನಾವೆಲ್ಲರೂ ಕಾಫಿ ಬೆಳೆಗಾರರು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಮೊನ್ನೆ ಪ್ಯಾಕೇಜ್‌ನಲ್ಲಿ 10 ಎಕರೆಗಿಂತ ಕಡಿಮೆ ಬರುವ ಕಾಫಿ ಬೆಳೆಗಾರರಿಗೆ ಕೇಂದ್ರ ಸರ್ಕಾರ ಬಡ್ಡಿ ಮನ್ನಾ ಮಾಡುವಂಥಾದ್ದನ್ನು ಮಾಡಿದ್ದಾರೆ, ಕಾಫಿ ತೋಟದಲ್ಲಿ ಬರುವಂತಹ ಕಾರ್ಮಿಕರನ್ನು ಬಿಪಿಎಲ್ ಪಟ್ಟಿಯ ವ್ಯಾಪ್ತಿಯಲ್ಲಿ ತಂದು, ಅವರಿಗೆ ಬೇಕಾದಮತಹ ಎಲ್ಲಾ ಸವಲತ್ತುಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ, ಇದು ಹೌದೋ, ಅಲ್ಲವೋ, ಎಂಬುದನ್ನು ತಾವು ಹೇಳಿ?

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಶ್ರೀ ಡಿ.ಬಿ. ಚಂದ್ರೇಗೌಡ : ನನಗೆ ಗೊತ್ತಿರುವ ಹಾಗೆ, ಈ ಸದನದ ದಾಖಲೆಗೆ ಹೋಗುವಾಗ ಏನಾದರೂ ಮಾಹಿತಿ ಬೇಕಲ್ಲಾ?

ಶ್ರೀ ಡಿ.ವಿ. ಸದಾನಂದ ಗೌಡ : ನನಗೆ ಗೊತ್ತಿರುವಂತಹದ್ದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅದರ ಕಾಪಿಯೊಂದನ್ನು ಕೊಡಿ.

ಶ್ರೀ ಡಿ.ವಿ. ಸದಾನಂದ ಗೌಡ : ಖಂಡಿತ ಆ ದಾಖಲಾತಿಗಳನ್ನು ಕೊಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ಅನೌನ್ಸ್ ಮಾಡಿರುವಂಥಾದ್ದನ್ನು ಗುಟ್ಟಾಗಿ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ ಇದನ್ನು ನಾವೇನು ಕ್ರಿಯೇಟ್ ಮಾಡಿ ಹೇಳುವಂಥಾದ್ದು ಅಲ್ಲ, ಆ ದಾಖಲಾತಿಗಳನ್ನು ನಾವು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇವೆ. ಇನ್ನು ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಡಿಕೆ ಬೆಳೆಯ ಬಗ್ಗೆ, ಈ ವಿಚಾರ ಮಾನ್ಯ ಚಂದ್ರೇಗೌಡರಿಗೆ ಗೊತ್ತಿದೆ, ಮತ್ತೆ ಮಲೆನಾಡು ಪ್ರದೇಶದಿಂದ ಬಂದಿರುವಂತಹ ಮಾನ್ಯ ಸದಸ್ಯರಿಗಳಿಗೂ ಗೊತ್ತಿದೆ. ಸಾಕಷ್ಟು ಅಡಿಕೆ ಬೆಳೆ ನೆಲವನ್ನು ಕಚ್ಚಿದೆ, ಕಮರ್ಷಿಯಲ್ ಕ್ರಾಪ್, ಬೇರೆ ಬೇರೆ ಬೆಳೆ, ಸರ್ಕಾರದವರು ಕೃಷಿಗೆ ಒತ್ತು ಕೊಟ್ಟಿದ್ದೇವೆಂದು ಬಹಳ ಸಾರಿ ಹೇಳಿದ್ದಾರೆ. ಇವರು ಒತ್ತು ಕೊಟ್ಟಿರುವಂಥಾದ್ದು ಎಷ್ಟರಮಟ್ಟಿಗೆ ಎಂದರೆ, ಇವತ್ತು ಐದು ನೂರು ಚಿಲ್ಲರೆ ಜನ ರೈತರು, ಆತ್ಮಹತ್ಯೆ ಮಾಡಿಕೊಳ್ಳುವಂತಹ ಕೃತ್ಯ, ಈ ಸರ್ಕಾರದಲ್ಲಿ ನಡೆದುಹೋಯಿತು. ಇದೇ ಈ ಸರ್ಕಾರದವರು ಕೊಟ್ಟಂಥಹ ಪ್ರೋತ್ಸಾಹಕ್ಕೆ ನಿದರ್ಶನವೆಂದು, ನಾನು ಭಾವಿಸುತ್ತೇನೆ. ಇವತ್ತು ಅಡಿಕೆಗಾರರ, ಅಡಿಕೆ ಬೆಳೆಯ ಬೆಲೆ, ಕುಸಿದು ನೆಲಕಚ್ಚಿದೆ, ಅಡಿಕೆ ಬೆಳೆಗಾರರೂ. ಸಹ ಆತ್ಮಹತ್ಯೆಯ ಹಾದಿಯನ್ನು ಹಿಡಿದಿದ್ದಾರೆ. ಇವತ್ತು ಏನಾದರೂ ಕನ್ಸೆಷನ್ ಅನ್ನು ಅಡಿಕೆ ಬೆಳೆಗಾರರಿಗೆ ಘೋಷಣೆ ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಅದು ಯಾವುದೂ ಮಾಡಿಲ್ಲ, ಕಳೆದ ಬಾರಿ ಸುಮಾರು 66 ಕೋಟಿ ರೂಪಾಯಿಗಳನ್ನು ಬೆಂಬಲ ಬೆಲೆಗೆ ರಿಲೀಜ್ ಮಾಡಬೇಕಾಗಿತ್ತು. ಆದರೆ ಕೇವಲ 12 ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಿ ಕೈ ತೊಳೆದುಕೊಂಡಿರುವಂಥಾದ್ದು ಬಿಟ್ಟರೆ ಏನೂ ಮಾಡಿಲ್ಲ. ಕೇಂದ್ರ ಸರ್ಕಾರದೊಡನೆ ಮಾತನಾಡಿ, ರಾಜ್ಯದ ಮೂಲಭೂತವಾಗಿರುವಂತಹ ಅಡಿಕೆ ಬೆಳೆಗಾರರನ್ನು, ರಕ್ಷಣೆ ಮಾಡಬೇಕಾಗಿತ್ತು, ಇವತ್ತು ಅಡಿಕೆ ಬೆಳೆ ಕೊಡಬೇಕಾದಂತಹ ಬೆಂಬಲಯನ್ನು ಕೊಡಲಿಲ್ಲ. ಇನ್ನು ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವಂಥಾದ್ದು ಏನೆಂದರೆ ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ರದ್ದು ಮಾಡಿರುವಂಥಾದ್ದು, ಅತ್ಯಂತ ಕಠೋರವಾದಂತಹ ಕ್ರಮ, ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು, ಉತ್ತರ ಕೊಡುವಂತಹ ಸಂದರ್ಭದಲ್ಲಿ ಇದನ್ನು ಪುನರ್ ಪರಿಶೀಲನೆ ಮಾಡಿ, ಇದಕ್ಕೆ ಜೀವ ಕೊಡುತ್ತಾರೆಂದು ನಾನು ಅಂದುಕೊಂಡಿದ್ದೇನೆ, ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚನೆ ಮಾಡುವ ಹಿನ್ನಲೆಯ ಮೂಲ ಉದ್ದೇಶವೇ ಬೇರೆ ಇದೆ, ಈಗ ಉದಾಹರಣೆಯಾಗಿ ಹೇಳುವುದಾದರೆ ಮಲೆನಾಡಿನ ಅಭಿವೃದ್ಧಿ ಬೋರ್ಡ್, ಇದಕ್ಕೆ ಸಾಕಷ್ಟು ಮಳೆ ಬೀಳುವಂತಹ ಪ್ರದೇಶ, ಸಾಕಷ್ಟು ಹಳ್ಳ, ಕೊಳ್ಳಗಳು ಇರುವಂತಹ ಊರುಗಳಿಗೆ, ಸಂಪರ್ಕ ಸಾಧನಗಳನ್ನು ಮಾಡಬೇಕೆನ್ನುವ ಉದ್ದೇಶದಿಂದ, ಒಂದು ವಿಶಿಷ್ಟವಾದಂತಹ ಭೂ ಭಾಗಬಿರುವಂತಹ ಪ್ರದೇಶ, ಇಲ್ಲಿ ಪ್ರತ್ಯೇಕವಾಗಿ ಪ್ಯಾಕೇಜ್ ಮೂಲಕ ಆಗಬೇಕೆನ್ನುವಂಥಾದ್ದು ಅವತ್ತಿನ ಕನಸು ಇತ್ತು, ಇದರ ಆಧಾರದ ಮೇಲೆ ಮಲೆನಾಡು ಅಭಿವೃದ್ಧಿ ಬೋರ್ಡ್‌ನ್ನು ತಯಾರು ಮಾಡಿರುವಂಥಾದ್ದು, ಇಂಥಾದ್ದನ್ನು ತಮ್ಮ ಕಾಲದಲ್ಲಿ ರದ್ದು ಮಾಡಿರುವಂಥಾದ್ದು ಇದಕ್ಕೆ ನಾನು ಹೇಳುವುದೇನೆಂದರೆ ತಾವು ಮಲೆನಾಡಿನ ಅಳಿಯಂದಿರಾಗಿ, ನಿಮ್ಮ ಕಾಲದಲ್ಲಿ ಇದಕ್ಕೆ ಗದಾ ಪ್ರಹಾರವಾಗಬಾರದು, ಇದನ್ನು ಮಾನ್ಯ ಮುಖ್ಯಮಂತ್ರಿಯವರು ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ, ನೀವು ನಮ್ಮ ಮಲೆನಾಡಿನ

ಅಳಿಯಂದಿರು, ಸಾರ್ವಜನಿಕರ ಜೀವನಕ್ಕೆ ಸ್ಫೂರ್ತಿಯನ್ನು ಕೊಟ್ಟಿರುವಂತಹ ಈ ಮಲೆನಾಡು, ಇದರ ಅಭಿವೃದ್ಧಿಯನ್ನು ನೀವು ಕಡೆಗಾಣಿಸಬಾರದು, ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಅದನ್ನು ನಿಮ್ಮ ಸರ್ಕಾರ ಬಂದ ದಿವಸದಿಂದಲೂ ಅದರ ಕತ್ತನ್ನು ಹಿಚುಕುವಂತಹ ಕೆಲಸವಾಯಿತು, ನಡೆಯಿತು. ಅದಕ್ಕೆ ಹಣವನ್ನೇ ಬಿಡುಗಡೆ ಮಾಡಲಿಲ್ಲ. ಇವತ್ತು ಅನೇಕ ಆನ್-ಗೋಯಿಂಗ್ ವರ್ಕ್ಸ್‌ಗಳಿವೆ, ಬಿಲ್‌ಗಳನ್ನು ಪಾವತಿ ಮಾಡುವಂಥಾದ್ದು ಬಾಕಿ ಇದೆ. ಬಿಲ್ ಪಾವತಿ ಮಾಡುವಂಥ ವ್ಯವಸ್ಥೆ ಹೇಗಿದೆ ಎನ್ನುವುದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಯಾರ ಮೇಲಾದರೂ ಹಠ ತೀರಿಸಿಕೊಳ್ಳಬೇಕು ಎಂದು ಹೇಳಿದರೆ, ಅವನಿಗೆ ಸರ್ಕಾರದ ಒಂದು ಕಾಂಟ್ರಾಕ್ಟ್ ಕೊಡಿಸಿದರೆ ಸಾಕು, ಅದರಲ್ಲೂ ಎಂ.ಎ ಡಿ.ಬಿ.ಯ ಕಾಂಟ್ರಾಕ್ಸ್ ಕೊಡಿಸಿದರೆ ಸಾಕು. ಅವನ ಮನೆತನ ಹಾಳಾಗುತ್ತದೆ. ಇಂಥ ಒಂದು ಪರಿಸ್ಥಿತಿಗೆ ಈ ಸರ್ಕಾರ ಬಂದು ಮುಟ್ಟಿದೆ. ಬಾಕಿ ಇರುವ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. 4-5 ವರ್ಷಗಳಿಂದ ಹಣ ಬಾಕಿ ಇದೆ. ಕೆಲಸಗಳು ಅರ್ಧಂಬರ್ಧವಾಗಿ ಉಳಿದುಕೊಂಡಿವೆ. ಅರ್ಧ ಸೇತುವೆಯಾಗಿದೆ, ಅರ್ಧ ಸೇತುವೆಯಾಗಿದೆ, ಅರ್ಧ ರಸ್ತೆಗಳಾಗಿವೆ, ರಸ್ತೆಗೆ ಜಲ್ಲಿ ಹಾಕಿದ್ದಾರೆ, ಟಾರ್ ಮಾಡಿಲ್ಲ, ಕಟ್ಟಡಗಳು ಅರ್ಧಂಬರ್ಧವಾಗಿವೆ, ಬಿಲ್ ಪಾವತಿ ಮಾಡದಿರುವುದರಿಂದ ಹಾಗೇ ಬಿಟ್ಟಿದ್ದಾರೆ. ಹಾಗಾಗಿ, ಬಾಕಿ ಹಣವನ್ನು ಪೂರ್ಣ ರಿಲೀಸ್ ಮಾಡಬೇಕು ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ತಾವು ಮುಂದುವರೆಸಿಕೊಂಡು ಹೋಗಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಕೊನೆಯದಾಗಿ ಒಮದು ಅಂಶವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವರ ಆದಾಯ ಹೇಗೆ ಸೋರಿಕೆಯಾಗುತ್ತಿದೆ ಎಂದರೆ ಇವರಿಗೆ ಎಕ್ಸ್‌ಸ್‌ನಲ್ಲಿ ಸಾಕಷ್ಟು ಹಣ ಬರಬೇಕಾಗಿದೆ. ನೀವು ಪಾನೀಯ ನಿಗಮವನ್ನು ಮಾಡಿದ್ದೀರಿ. ಇದು ಬಹಳ ಸ್ವಾಗತಾರ್ಹ ವಾಗಿರತಕ್ಕಂಥ ಕಾರ್ಯಕ್ರಮ. ಈ ವಿಚಾರದಲ್ಲಿ ನೀವು ಸಾಕಷ್ಟು ಬಂದೋಬಸ್ತ್ ಮಾಡಿದ್ದೇವೆ ಎಂದು ಹೇಳಿಕೊಂಡಿದ್ದೀರಿ. ಆದರೆ ನಿಮಗೆ ಇದರಿಂದ ಎಷ್ಟು ಹಣ ಬರಬೇಕಾಗಿತ್ತೋ ಅಷ್ಟು ಹಣ ಬರುತ್ತಿಲ್ಲ. ಬ್ರಾಂದಿ ಶಾಪ್‌ಗಳವರು ಢರ್ಡ್ಸ್, ಸೆಕೆಂಡ್ಸ್‌ಸೇಲ್ ಮಾಡುತ್ತಿದ್ದಾರೆ. ಅದನ್ನು ನೀವು ಹಿಡಿದಿದ್ದರೆ, ಆ ಬ್ರಾಂದಿ ಶಾಪ್‌ನ ಲೈಸೆನ್ಸ್ ರದ್ದಾಗುತ್ತಿತ್ತು. ಆದರೆ ನೀವು ಮಧ್ಯದಲ್ಲಿ ಒಂದು ಬಿಲ್ ತಂದು ಅವರಿಗೆ ರಕ್ಷಣೆ ಕೊಡುವಂಥ ಕೆಲಸ ಮಾಡಿದಿರಿ. ಇವತ್ತು ಇಡೀ ಬ್ರಾಂದಿ ಸಾಪ್‌ಗಳ ಸಮುದಾಯದಲ್ಲಿ ಡ್ರಗ್ಸ್ ಮಾಟವಾಗುತ್ತಿದೆ. ಫ್ಯಾಕ್ಟರಿಯಿಂದ ಬರುವ ಸೆಕೆಂಡ್ಸ್ ಹೋಯಿತು. ಯಾವುದೋ ಒಮದು ಸ್ಪರಿಟ್‌ಗೆ ಬಣ್ಣ ಹಚ್ಚಿ ಮಾರಾಟ ಮಾಡುವಂಥ, ವಿಷ ಕುಡಿಸಿ ಜನರನ್ನು ಸಾಯಿಸುವ ಕೆಲಸ ನಡೆದಿದೆ. ಮತ್ತು ಸಾರಾಯಿ ಎಷ್ಟು ಸೇಲ್ ಆಗಬೇಕಾಗಿತ್ತೋ ಅಷ್ಟು ಸೇಲನ್ನು ತೋರಿಸುತ್ತಿಲ್ಲ. ಇವತ್ತು ಸಾರಾಯಿಯಲ್ಲಿ ಸಾಕಷ್ಟು ಸೋರಿಕೆಯಾಗುತ್ತಿದೆ. ಅದರಿಂದಾಗಿ ಇವರಿಗೆ ಇವತ್ತು ಸಾರಾಯಿಯಲ್ಲಿ ಎಷ್ಟು ಹಣ ಬರಬೇಕಾಗಿತ್ತು, ಅದು ಬರುತ್ತಿಲ್ಲ. ಪಾನೀಯ ನಿಗಮವನ್ನು ಮಾಡಿ ಅದಕ್ಕೆ ಒಬ್ಬ ಒಳ್ಳೆಯ ಅಧಿಕಾರಿಯನ್ನು ಕೂರಿಸಿದ್ದೀರಿ. ಅದು ಬೇರೆ ಪ್ರಶ್ನೆ. ಆದರೆ ನೀವು ಸರಿಯಾದಂಥ ಒಂದು ಕಾನೂನನ್ನು ತಂದು ಹದ್ದುಬಸ್ತಿನಲ್ಲಿಟ್ಟು, ಎಷ್ಟು ಆದಾಯ ಸಂಗ್ರಹವಾಗಬೇಕಾಗಿತ್ತೋ ಅಷ್ಟು ಸಂಗ್ರಹ ಮಾಡಲಿಲ್ಲ. ಅಷ್ಟು ಮಾತ್ರವಲ್ಲ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಗುತ್ತಿಗೆದಾರರ ಜೊತೆಗೆ ಅಧಿಕಾರಿಗಳು ಶಾಮೀಲಾಗಿ, ಅವರು ಇವತ್ತು ಗುತ್ತಿಗೆದಾರರ, ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ಇವತ್ತು ಸರ್ಕಾರಕ್ಕೆ ಇದರಿಂದ ಏನು ಆದಾಯ ಬರಬೇಕಾಗಿತ್ತು, ಅದು ಬರಲಿಲ್ಲ. ಕಾಂಟ್ರಾಕ್ಟುದಾರರಿಗೆ ಕೊಡಬೇಕಾದಂಥ ಬಾಕಿ ಹಣವನ್ನು ಕೊಟ್ಟಿಲ್ಲ. ಇವರು ಅಧಿಕಾರ ವಹಿಸಿಕೊಂಡಾಗ ಇವರ ಮುಂದೆ ಐದು ಸವಾಲುಗಳಿದ್ದವು ಎಂದು ಹೇಳಿದ್ದಾರೆ. ಅವುಗಳೆಂದರೆ, ಕೃಷಿ ಬಲವರ್ಧನೆ, ನೀರಾವರಿಗೆ ಬಂಡವಾಲ, ಮೂಲಕ ಸೌಕರ್ಯಗಳ ವಿಸ್ತರಣೆ, ಪ್ರಗತಿಪರ ಕೈಗಾರಿಕಾ ನೀತಿ, ಉತ್ತಮ ಆಡಳಿತ, ಕುಳಲ ಆರ್ಥಿಕ ನಿರ್ವಹಣೆ. ಈ ಐದಾರು ಆದ್ಯತಾ

ವಲಯಗಳು ಇವರ ಎದುರಿಗಿದ್ದು, ಈ ಸವಾಲುಗಳ ಬಗ್ಗೆಯೇ ಇವರಿಗಿರತಕ್ಕಂಥ ಒಂದು ತಾತ್ಸಾರ ನೀತಿಯಿಂದ ಇವತ್ತು ಇಡೀ ಸರ್ಕಾರ ಕಳಾಹೀನವಾಗಿದೆ. ಕಾಂಗ್ರೆಸ್ ಪಕ್ಷದ ಸಭೆಗಳನ್ನು ನಡೆಸಬೇಕು, ಜನಾಕರ್ಷಣೆ ಮಾಡಬೇಕೆಂದರೆ ಕ್ಯಾಬರೆಯವರನ್ನು ಕರೆದುಕೊಂಡು ಹೋಗಬೇಕಾಗಿದೆ, ನೃತ್ಯ ಮಾಡುವವರನ್ನು ಕರೆದುಕೊಂಡು ಹೋಗಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರಾಜ್ಯ ಎಷ್ಟರ ಮಟ್ಟಿಗೆ ಮುಂದೆ ಹೋಗಬೇಕಾಗಿತ್ತೋ, ಅಷ್ಟು ಪ್ರಮಾಣದಲ್ಲಿ ಹೋಗಲಿಲ್ಲ. ಈ ಬಜೆಟ್‌ನಲ್ಲಿ ಏನೂ ಇಲ್ಲ. ಇಂಥ ಒಂದು ಬಜೆಟ್ ಜನಪರವಾಗಿರತಕ್ಕಂಥ ಬಜೆಟ್ ಅಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಶ್ರೀನಿವಾಸಗೌಡರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ಗೌಡರೇ ಈ ಬೇಡ. ಕ್ಲಾರಿಫಿಕೇಷನ್ ಕೇಳುವಾಗ ನೀವು ಕೇಳಿ, ಉತ್ತರ ಕೊಡುತ್ತಾರೆ. ಈಗ ದಯವಿಟ್ಟು ಬೇಡ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನ ಹಳ್ಳಿ) : ಐದು ನಿಮಿಷ ಮಾತ್ರ ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಾನು ಪ್ರಾರ್ಥನೆ ಮಾಡುತ್ತೇನೆ, ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ ಬಿಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಶ್ರೀನಿವಾಸಗೌಡರಿಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಅಧಿವೇಶನದ ಕೊನೆಯ ದಿವಸ. ನಾವು ಇಲ್ಲಿ ಇದನ್ನು ಅಂಗೀಕರಿಸಿ, ನಂತರ ಇದು ಆ ಸದನಕ್ಕೆ ಹೋಗಿ ಅಲ್ಲಿ ಅಂಗೀಕಾರವಾಗಿ ಮತ್ತೆ ಇಲ್ಲಿಗೆ ಮೆಸೇಜ್ ಬರಬೇಕು. ಆಮೇಲೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಇದೆ. ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಮೇಲೆ ತಾವು ಮಾತನಾಡಿ.

ಅಧ್ಯಕ್ಷರು : ಈಗ ತಾವು ಉತ್ತರವನ್ನು ಪ್ರಾರಂಭ ಮಾಡಿ.

†ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಆಯವ್ಯಯವನ್ನು ಮಂಡಿಸಿದ ಮೇಲೆ, ಅದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿದೆ ಎಂದು ಹೇಳಿದರೆ ಅದು ತಪ್ಪಾಗುತ್ತದೆ, ಮೂರು ದಿವಸಗಳ ಕಾಲ ಚರ್ಚೆ ನಡೆದಿದೆ. ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಇದರ ಬಗ್ಗೆ ತಮ್ಮ ಪ್ರಸ್ತಾಪವನ್ನು ಈ ಸದನದ ಮುಂದೆ ವಿರೋಧ ಪಕ್ಷಗಳ ಪರವಾಗಿ ಮಂಡಿಸಿದರು. ಅವರಿಗೆ ಎಸ್.ಎಸ್. ಪಾಟೀಲರು ಬಹಳ ಪ್ರಬಲವಾದಂಥ ಬೆಂಬಲವನ್ನು ಕೊಟ್ಟಿದ್ದಾರೆ, ಹಾಗೆಯೇ, ಶ್ರೀ ಚೆನ್ನಿಗಪ್ಪನವರು, ಶ್ರೀ ರಾಮದಾಸರವರು, ಶ್ರೀ ಡಿ.ಸಿ. ತಮ್ಮಣ್ಣ ನವರು, ಶ್ರೀ ದೊಂಗರಗಾಂ, ಶ್ರೀ ಸೋಮಶೇಖರ್, ಶ್ರೀ ಚೆಲುವರಾಯಸ್ವಾಮಿ, ಶ್ರೀ ಜಯಪ್ರಕಾಶ ಹೆಗಡೆ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಯುವ ಸದಸ್ಯರಾದ ಕೃಷ್ಣಬೈರೇಗೌಡ, ಸದಾ ಚರ್ಚೆಯಲ್ಲಿ ಭಾಗವಹಿಸತಕ್ಕಂಥ ಶ್ರೀ ಎಸ್.ಯೋಗೀಶ್ ಭಟ್, ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಈಗ ಆರಗದ ಜ್ಞಾನೇಂದ್ರ ಇವರೆಲ್ಲರು ಮಾತನಾಡಿದ್ದಾರೆ. ತಮ್ಮ ಭಾಷಣಗಳೆಲ್ಲವನ್ನೂ ಕೇಳಲು ನಾನು ಇಲ್ಲಿ ಇರಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ನಿಮ್ಮ ಭಾಷಣದ ಒಟ್ಟಾರೆ ಸಾರಾಂಶವನ್ನು ನಾನು ಸಂಗ್ರಹಣೆ ಮಾಡಿಕೊಂಡಿದ್ದೇನೆ ಮತ್ತು ಅವುಗಳ ಬಗ್ಗೆ ನಾನು ಮೆಲುಕು ಹಾಕಿದ್ದೇನೆ. ಆದರೆ ನೀವು ಮಾತನಾಡಿದ ಆ ನಿಮ್ಮ ಸ್ಪಿರಿಟ್‌ಅನ್ನು ನಾನು ಅಳತೆ ಮಾಡಲಿಕ್ಕೆ ಈ ನಿಸ್ತೇಜ ಕಾಗದ ಪತ್ರಗಳಿಂದ ಆಗುವುದಿಲ್ಲ. ಏಕೆಂದರೆ, ನಿಮ್ಮ ಬಾಯಿಗಳಿಂದ ಬಂದಂಥ ಆ ಉದ್ಗಾರಗಳು, ಆ ಮಾತುಗಳು, ಆ ತೀಕ್ಷ್ಣತೆ ಅರ್ಥವಾಗತಕ್ಕಂಥಾದ್ದನ್ನು ಅದನ್ನು

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ನಾವು ಕೇಳಿದಾಗ ಮಾತ್ರ. ಅದು ಈ ಸಾರಿ ನನಗೆ ಲಭಿಸಲಿಲ್ಲ. ಅದಕ್ಕಾಗಿ ನಾನು ವಿಷಾದಿಸುತ್ತೇನೆ. ಕಳೆದ ಐದು ವರ್ಷಗಳಿಂದ ನೀವು ಹೇಳಿಕೊಂಡು ಬರುತ್ತಲೇ ಇದ್ದೀರಿ. ಏನೆಂದರೆ, ಈ ಸರ್ಕಾರ ಸಾಲವನ್ನು ನಮ್ಮ ಜನಗಳ ಮೇಲೆ ಹೇರುತ್ತಿದೆ, ಈ ಸರ್ಕಾರ ಸಾಲದಲ್ಲಿ ನಡೆಯುತ್ತಿದೆ, ಈ ಸರ್ಕಾರದವರಿಗೆ ಹಣಕಾಸಿನ ವ್ಯವಹಾರಗಳನ್ನು, ಆ ವಹಿವಾಟುಗಳನ್ನು ನಿರ್ವಹಿಸತಕ್ಕಂಥ ಶಕ್ತಿ ಇಲ್ಲ, ಅದು ಅಸ್ತವ್ಯಸ್ತವಾಗಿ ಹೋಗಿದೆ, ಎಕಾನಮಿ ಡೀ-ರೈಲ್ ಹೋಗಿದೆ ಎಂದೆಲ್ಲಾ ಹೇಳಿದ್ದೀರಿ. ಪ್ರೊಫೆಸರ್ ಚೆಲುವರಾಯಸ್ವಾಮಿಯವರು, ಸರ್ಕಾರ ದಿವಾಳಿಯಾಗಿದೆ ಎಂದು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರು ಪ್ರೊಫೆಸರ್ ಅಲ್ಲ.

ಶ್ರೀ ಎಸ್.ಎಂ. ಕೃಷ್ಣ : ಆಯಿತು, ಸನ್ಮಾನ್ಯ ಗೌರವಾನ್ವಿತ ಸದಸ್ಯರು, ನಮ್ಮ ಜಿಲ್ಲೆಯಿಂದ ಬರುತ್ತಿರತಕ್ಕಂಥ ಮಾನ್ಯ ಚೆಲುವರಾಯಸ್ವಾಮಿಯವರು, ನನ್ನ ಆಪ್ತ ಸ್ನೇಹಿತರು ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಶ್ರೀ ಕೆ.ಬಿ. ಶಂಕರೇಗೌಡರು ಎಂದು ಒಬ್ಬರು ಪ್ರತಿಷ್ಠಿತ ಮುಖಂಡರು ಇದ್ದರು. ಅವರ ಮಾವನವರು, ಶ್ರೀ ಸಿಂಗ್ರಿಗೌಡರು ಎಂದು ಇದ್ದರು. ಅವರ ಎದುರಿಗೆ ಯಾರಾದರೂ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಸಿಕ್ಕಿದರೆ, ಅವರನ್ನು ಕುರಿತು, 'ನಮಸ್ಕಾರ, ಸರ್ಕಲ್‌ಗೆ ಎಂದು ಹೇಳುತ್ತಿದ್ದರು. ಅದಕ್ಕವರು, 'ಅಯ್ಯೋ ಗೌಡರೇ ನಾನಿನ್ನೂ ಸಬ್ ಇನ್ಸ್‌ಪೆಕ್ಟರ್ ಆಗಿಯೇ ಇದ್ದೇನೆ, ನೀವು ಸರ್ಕಲ್, ಸರ್ಕಲ್ ಎಂದು ನನ್ನನ್ನು ಮೇಲೆ ಹತ್ತಿಸುತ್ತಿದ್ದೀರಿ' ಎಂದಾಗ 'ಯಾವತ್ತಾದರೂ ಒಂದು ದಿವಸ ನೀವು ಆಗುತ್ತೀರಿ ಎಂದು ಹೇಳುತ್ತಿದ್ದರು. ಇದು ನಿಜ, ನನ್ನ ಅನುಭವಕ್ಕೆ ಬಂದಂಥ ವಿಚಾರ. ಶಂಕರೇಗೌಡರಿಗೂ, ನಮಗೂ ರಾಜಕೀಯವಾಗಿ ಅತ್ಯಂತ ವ್ಯತ್ಯಾಸಗಳಿದ್ದರೂ ಕೂಡ, ಸಿಂಗರಿಗೌಡರು ಅವರ ಮಾವನವರು, ಒಮದು ಒಳ್ಳೆಯದಕ್ಕೆ, ಒಂದು ಕೆಟ್ಟದ್ದಕ್ಕೆ ಯಾವಾಗಲೂ ಬರುತ್ತಿದ್ದರು. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಅವರು, ಅವರ ರುಮಾಲು, ಅವರ ಛತ್ರಿ ಇವುಗಳೆಲ್ಲವೂ ಕೂಡ ಬಹಳ ಫೇಮಸ್ ಆಗಿದ್ದವು. ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಸಿಕ್ಕಿದರೆ, ' ನಮಸ್ಕಾರ, ಸೂಪರಿಂಟೆಂಡೆಂಟ್ ಸಾಹೇಬರಿಗೆ' ಎಂದು ಹೇಳುತ್ತಿದ್ದರು. 'ಎಲ್ಲಿ ಸ್ವಾಮಿ, ಮೂರು ವರ್ಷವಾಯಿತು, ಇಲ್ಲೇ, ನಿಮ್ಮಲ್ಲೇ ಕೊಳೆಯುತ್ತಿದ್ದೇನೆ' ಎಂದು ಹೇಳಿದರೆ' ಎಂದಾದರೂ ಆಗುತ್ತೀರಿ, ಯೋಚನೆ ಮಾಡಬೇಡಿ, ಆಗುತ್ತೀರಿ' ಎಂದು ಹೇಳುತ್ತಿದ್ದರು' ಅದೇ ರೀತಿ, ಇವರೂ ಒಂದು ದಿವಸ ಪ್ರೊಫೆಸರ್ ಆಗುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ : ಪ್ರೊಫೆಸರ್ ಆಗುವುದಿಲ್ಲ, ಬೇರೆ ಏನಾದರೂ ಆಗಬಹುದು. ಪ್ರೊಫೆಸರ್ ಆಗುವಂಥ ಕ್ವಾಲಿಫಿಕೇಷನ್ ನನ್ನಲ್ಲಿ ಇಲ್ಲ. ಅಲ್ಲ ಅಲ್ಲ, ಪ್ರೀತಿಗೆ ಹೇಳುತ್ತಿರುವುದು ನಾನು. ಈಗ ಪ್ರೊಫೆಸರ್ ಒಬ್ಬರು ಏನು ಹೇಳಿದರು ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ. Prog.Thapas Sen, Times of India, New Delhi dated... article. The author is a senior fellow at the National Institute of Public Finance and Policy, New Delhi ಅವರು ಅದೃಷ್ಟವಶಾತ್ ನಮ್ಮ ಬಜೆಟ್ ಅನ್ನು ಈ ಸದನದ ಮುಂದೆ ಮಂಡಿಸಿದ ಮೇಲೆ ನಮ್ಮ ಈ ಬಜೆಟ್ ಅನ್ನು ಮಿಕ್ಕ ಬಜೆಟ್‌ಗಳಿಗೆ ಕಂಪೇರ್ ಮಾಡಿ view point ಅನ್ನತಕ್ಕಂಥದ್ದರಲ್ಲಿ ತಮ್ಮ ಅನಿಸಿಕೆಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಮಾನ್ಯ ಸಿಂಧ್ಯಾರವರು ಅದರಲ್ಲಿ ಬಹಳ ಚುರುಕು. ಇದನ್ನೆಲ್ಲಾ ನೀವು ಓದುತ್ತೀರಿ. ಅವರು ಓದಿರಲಿಕ್ಕಿಲ್ಲ. ಏಕೆಂದರೆ ನಾನೂ ಓದಿರಲಿಲ್ಲ. ನಮ್ಮ Finance Department ನವರು ಇದನ್ನು ನೋಡಿದಿರಾ ಎಂದು ಕೇಳಿದರು. ನೋಡಲಿಲ್ಲ ಎಂದಾಗ ಇದನ್ನು ಓದಬೇಕು ನೀವು ಎಂದು ಹೇಳಿದರು. ಅದರ ಪ್ರಾರಂಭ ಹೀಗಿದೆ. ಮಾನ್ಯ ಅಧ್ಯಕ್ಷರು, ಇದನ್ನು

ನಾನ್ನು ಕೋಟ್ ಮಾಡಿ ರೆಕಾರ್ಡ್‌ಗೆ ಬರಬೇಕೆನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿದ್ದೇನೆ.

``The Centre laid out its interim budget and Karnataka has its regular budget. Orissa has lead its vote on account for four months for the next fiscal year. The contrasts are starred. While both the Orissa vote on account and the Central budget are prompted by a desire for early elections, the former is devoid of sops. The Union budget(in the earlier mini budget) has only sops. The Karnataka budget is a much more serious one with a vision and a long-term perspective. Jaswanth Singh obviously was thinking of politics only whereas Krishna has been deeply influenced by economic considerations."

ಶ್ರೀ ಬಿ. ಸೋಮಶೇಖರ್ : ಕೇಂದ್ರದಲ್ಲಿ ಯಾರು ಇದ್ದರು economist, expert in economics ಅವರು ಒಂದು ವರದಿ ಕೊಟ್ಟಿದ್ದು ಜ್ಞಾಪಕಕ್ಕೆ ತರುತ್ತಿದ್ದೀರಿ. ಇನ್ನೊಂದು ನನಗೆ ಜ್ಞಾಪಕಕ್ಕೆ ಬಂತು ಜೊತೆಗೆ ನನಗೆ ನಗೂ ಕೂಡ ಬಂತು. ಆಡಳಿತದಲ್ಲಿ highest ಸ್ಥಾನಕ್ಕೆ ಹೋಗಿದ್ದಂಥವರು Union Defence Secretary ಯವರು UPSC ಮೆಂಬರ್ ಕೂಡ ಅವರಾಗಿದಾರೆ. ಇಲ್ಲಿಗೆ ಬಂದು ಒಂದು IAS ಸೆಲೆಕ್ಷನ್ ಮಾಡಿ ಅದೇ Supreme Court ನಲ್ಲಿ notice ಬಂದಿದೆಯಲ್ಲಾ, ಆ ರೀತಿ ಎಂದು ನನಗೆ ಜ್ಞಾಪಕಕ್ಕೆ ಬಂತು ಅಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಪ್ರೊ. ತಪಸ್ ಸೇನ್‌ರವರ ಬಗ್ಗೆ ನಮಗೆಲ್ಲಾ ಬಹಳ ಗೌರವ ಇದೆ, ಮಾನ್ಯ ಮುಖ್ಯಮಂತ್ರಿಗಳು ಅವರ ಆರ್ಟಿಕಲ್ ಅನ್ನು ಓದಿದರು. But ನಿಮ್ಮ ರಿಪ್ಲೈ ತಯಾರು ಮಾಡುವಾಗ ನಿಮ್ಮ ಸೆಕ್ರೆಟರಿಯವರು ಇನ್ನೂ ಸ್ವಲ್ಪ ಜಾಸ್ತಿ ಹೋಂವರ್ಕ್ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ಕಾಣುತ್ತದೆ. ನಿನ್ನೆ Deccan Herald ನಲ್ಲಿ ಪ್ರೊ. ತಿಮ್ಮಯ್ಯನವರು ಆರ್ಟಿಕಲ್ ಬರೆದಿದ್ದರೆ ಅದನ್ನೂ ಸ್ವಲ್ಪ ಓದಿ.

ಶ್ರೀ ಎಸ್.ಎಂ.ಕೃಷ್ಣ : ಅದನ್ನು ನೀವು ಓದಬೇಕಾದವರು, ನೀವು ಓದಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಅಲ್ಲವೇ ಸ್ವಾಮೀ ಅದನ್ನು ಓದಬೇಕಾಗಿರುವುದು. ಏಕೆ ಅದನ್ನು ನೀವು ಓದುವುದಿಲ್ಲ? ಅದರಲ್ಲಿ ಟೀಕೆ ಮಾಡಿದ್ದಾರೆಂದರೂ ಓದುವುದಿಲ್ಲವೇ?

ಶ್ರೀ ಎಸ್.ಎಂ. ಕೃಷ್ಣ : ನಾನು ಓದಿಕೊಂಡಿದ್ದೇನೆ. ಅದನ್ನು ನೀವು ಉದಾಹರಿಸಬೇಕಾಗಿತ್ತು. ಆಗ ನಿಮ್ಮದೂ ರೆಕಾರ್ಡ್‌ಗೆ ಹೋಗಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾಡಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಹಾಗಾದರೆ ಸರಿ ಮತ್ತೆ. By economic consideration.ಇವರು ಯಾವತ್ತೂ ನಮಗೆ ಕೆಲಸ ಮಾಡಿದವರಲ್ಲ. ಪ್ರೊ. ತಪಸ್‌ಸೇನ್ ಎನ್ನುವವರು ಯಾರೂ ಎನ್ನುವುದು ನನಗೆ ಗೊತ್ತಿಲ್ಲ. ಆದರೆ. I have the greatest respect for the organization ಅವರು

ಎಲ್ಲಿ ಕೆಲಸ ಮಾಡುತ್ತಿದ್ದಾರೆ, The National Institute of Public Finance and Policy. ಅವರ ಕಸುಬೇ ಇದು. Analyzing economic issues, analyzing fiscal sector.

> ``Karnataka is different. Consecutive droughts have damaged revenue growth and the growth of the State economy is not as good as hoped for except in the services sector. The Centre's fiscal deficit for the current year is estimated to end up at at 4.8% of the GDP despite the denominator helping the reduction from the budget estimates presented last year. Karnataka's fiscal deficit is at less than 4.3% of the Gross State Domestic Product. Thsi proportion is much lower in Karnataka implying a higher level of capital expenditure and therfore a better quality of fiscal deficit. Thus the fiscal performance of the State despite a far more difficult situation is on the whole better than at the Centre. No wonder the State feels aggrieved bout the denial of the perform linked loan. Then the next significant aspect. Karnataka's spending in the sector is a combination of relief measures and infrasrtuctual expenditure, the later largely to reduce the impact of future jobs. Karnataka has taken a bold step in rationalising the stamp duty structure and administration. The Centre on its parft have the duties on instruments in the central list. Altogether, the stamp duty system in Karnatak is now much closer to a conceptually ideal system than anywhere else."

ಇದು ಪ್ರೊ. ತಪಸ್‌ಸೇನ್‌ರವರು ಹೇಳತಕ್ಕಂಥ ಅಭಿಪ್ರಾಯ. ಇದಕ್ಕೆ ಭಿನ್ನವಾದಂಥ ಅಭಿಪ್ರಾಯಗಳು ಬರಬಹುದು. ಅದನ್ನು ನಾವು ಎದುರು ನೋಡುತ್ತೇವೆ. ಆದರೆ ನನ್ನ ಮುಂದಿರತಕ್ಕಂಥದನ್ನು ತಮ್ಮ ಮುಂದೆ ಈ ಸದನದ ಮುಂದೆ ತರಲಿಕ್ಕೆ ಬಯಸುತ್ತನೆ, ಏಕೆಂದರೆ ಇದು Delhi edition, ನಮ್ಮ ಬೆಂಗಳೂರು Times of India ಅನ್ನು ನಾವು ಓದುತ್ತೇವೆ. But Delhi edition, Times of India ಅನ್ನು ನಾವು ಓದಲಿಕ್ಕೆ ಸಾಧ್ಯವಿಲ್ಲ. Unless it appears in Bangalore the next day or three days later. This is a Government of India Institution, National Institute of Policy Planning ಕೇಂದ್ರ ಸರ್ಕಾರ ನಡೆಸುತ್ತಾ

12.30 ಪಿ.ಎಂ

ಇರತಕ್ಕಂತಹ ಸಂಸ್ಥೆ. ಇವರು ಕೇಂದ್ರ ಸರ್ಕಾರಕ್ಕೆ ಕೆಲಸ ಮಾಡುತ್ತಿರುವವರು. ನನ್ನ ಭಾಷಣದಲ್ಲಿ ಹೇಗೆ ತಾರತಮ್ಯ ಮಾಡುತ್ತಿದ್ದಾರೆ ಕೇಂದ್ರ ಸರ್ಕಾರದವರು ಎನ್ನುವ ವಿಚಾರದಲ್ಲಿ ಸಾಧಾರಣವಾಗಿ ನಾವು ಬಜೆಟ್ ಡಾಕ್ಯಮೆಂಟ್‌ನಲ್ಲಿ ಅದನ್ನು ತರುವುದಿಲ್ಲ. ಏಕೆಂದರೆ, ಇವುಗಳೆಲ್ಲವೂ ಕೂಡ bilateral issues between Central and State Governments. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದೇ ಎಂದು. ಆದರೆ ತಾರತಮ್ಯ ತಡೆಯಲಿಕ್ಕೆ ಸಾಧ್ಯವಾಗದೇ ಇದ್ದಾಗ ಭರಿಸಿಕೊಳ್ಳಲಿಕ್ಕೆ ಸಾಧ್ಯವಾಗದೇ ಇದ್ದಾಗ ನಾವು ವಿಧಿ ಇಲ್ಲದೆ ಈ ವಿಚಾರವನ್ನು ಈ ಸಭೆಯ ಗಮನಕ್ಕೆ ತಂದು ಕೊಡಬೇಕಾಗಿರತಕ್ಕಂಥದ್ದು ನೊಂದ ನಮ್ಮ ಕರ್ತವ್ಯ ಎನ್ನತಕ್ಕಂಥ ದೃಷ್ಟಿಯಿಂದ ಆ ಪಾರ್‍ಯಾವನ್ನು ನಾವು ಬಜೆಟ್‌ನಲ್ಲಿ ಮನಸ್ಸಿನಿಂದ ಮನಸ್ಸಿನಿಂದ ನಾವು ಸೇರಿದೆವು. ಏಪ್ರೀಲ್, ಮೇ, 2003, The World Bank mission assesses Karnataka as a state closer to fiscal substantiality. ಇದು ಏಪ್ರಿಲ್, ಮೇ ಆಗಸ್ಟ್ 2003ಕ್ಕೆ ಪುನ: ಬರುತ್ತಾರೆ, revised policy matrix finalised to bring Karnataka economic restructuring programme in tune with the revised SAL guidelines of Government of India. ಗೌರ್ನಮೆಂಟ್ ಆಫ್ ಇಂಡಿಯಾದವರು ಏನು ಗ್ಯಡ್‌ಲೈನ್ಸ್ ಕೊಟ್ಟಿದ್ದಾರೆ ಆ ಗೈಡ್‌ಲೈನ್ಸ್ ಚೌಕಟ್ಟಿನೊಳಗೆ ಇದನ್ನು ತರಲಿಕ್ಕೆ ನಮಗೆ ಇನ್‌ಸ್ಟ್ರಕ್ಷನ್ ಕೊಟ್ಟರು ಅದನ್ನು ನಾವು ತಂದಯಿತು. ಅಕ್ಟೋಬರ್ 2003, – Following a satisfactory project appraisal by the World Bank, the country Director, World Bank extends invitation to Government of India and Government of Karnataka to negotiate a 200 million loan to be passed on to the State in a grant-cum-loan ratio of 30:70. Request for negotiations in Coorg on 19th and 20th November, extended to officials of the Government of India. ಇದನ್ನು ಕೂರ್ಗ್‌ನಲ್ಲಿ ಏರ್ಪಾಡು ಮಾಡಿದೆವು ಏಕೆಂದರೆ, ಗೌರ್ನಮೆಂಟ್ ಆಫ್ ಇಂಡಿಯಾ ರೆಪ್ರೆಜೆಂಟ್‌ಟಿವ್ಸ್ ಮತ್ತು ವರ್ಲ್ಡ್ ಬ್ಯಾಂಕ್‌ನವರು ಎಲ್ಲಾ ಆ ಸುಂದರವಾದ ತಾಣವನ್ನು ನೋಡಬೇಕು ಎಂದು, ಏಕೆಂದರೆ ನಮ್ಮ ಕೂರ್ಗ್‌ನಿಂದ ಬಂದ ಸದಸ್ಯರು ಹೇಳುತ್ತಾರೆ, ಕೂರ್ಗ್‌ನ್ನು ನೀವು ಕಡೆಗಾಣಿಸಿದ್ದಿರಿ ಎಂದು ಹೇಳುತ್ತಾರೆ, ಅದಕ್ಕಾಗಿ ಕೂರ್ಗ್‌ಗೂ ಒಂದು ಆಧ್ಯತೆ ಕೊಡಬೇಕೆಂದು ಇದನ್ನು ನಾವು ಕೂರ್ಗ್‌ನಲ್ಲಿ ಏರ್ಪಾಡು ಮಾಡಿದೆವು. ಕೆಲವು ಕ್ಲಾರಿಫಿಕೇಷನ್ಸ್‌ನ್ನು ಗೌರ್ನಮೆಂಟ್ ಆಫ್ ಇಂಡಿಯಾದವರು ಕೇಳಿದರು. ಅದನ್ನು 14–11–2003 ರಂದು ನಾವು ನಮ್ಮ ಕ್ಲಾರಿಫಿಕೇಷನ್ಸ್‌ಗಳನ್ನೂ ಕೂಡ ಅವರಿಗೆ ಕಳುಹಿಸಿದೆವು. 14–11–2003 ರಂದು ಓನ್ ಲೈನ್ ಫ್ಯಾಕ್ಸ್ ಮೇಸೇಜ್ ನಮಗೆ ಬಂದಿದ್ದು Received from Government of India ``calling off negotiations" without assigning any reasons whatsoever.

ನಮ್ಮ ನಮ್ಮ ಪರ್ಸ್‌ನಲ್ ವ್ಯವಹಾರಗಳಲ್ಲಿ ನಾವು ಬರುತ್ತೇವೆಂದು ಹೇಳಿ ಬರಲಿಕ್ಕೆ ಆಗದೇ ಇದ್ದರೆ, ಕಾರಣಗಳು, ಅದು ಸಕಾರಣಗಳು ಆಗಿರಬಹುದು, ಅಥವಾ ಬೇರೆ ಇನ್ನಾ ಯಾವುದೇ ಕಾರಣ ಇರಬಹುದು. ಕಾರಣಗಳನ್ನಾದರೂ ನಮೂದು ಮಾಡಿ, ಏನು ನಾವು ಮತ್ತು ನೀವು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇಬ್ಬರೂ ಪಾರ್ಟ್‌ನಸ್‌ರ. ನಾವಿಬ್ಬರೂ ಏನು ನೆಗೋಷಿಯೇಟ್ ಮಾಡಬೇಕು, ಅದಕ್ಕೆ ಈ ಒಂದು, ಎರಡು, ಮೂರು, ನಾಲ್ಕು, ಕಾರಣಗಳಿಗೋಸ್ಕರ ಈಗ ಆಗುತ್ತಿಲ್ಲ, ಅದನ್ನು ನಾವು

ಮುಂದಕ್ಕೆ ಹಾಕಿದ್ದೇವೆ ಎನ್ನುವ ಸಮಜಾಸಯಿಷಿಯನ್ನು ಹೇಳತಕ್ಕಂಥ ಹಕ್ಕು, ಕೇಳತಕ್ಕಂಥ ಸ್ವಾತಂತ್ರ್ಯ, ಕೇಳಸಸತಕ್ಕಂಥ ಸ್ವಾಭಿಮಾನ ಕನ್ನಡಿಗರಿಗೆ ಎರಬೇಕೆ ಬೇಡವೇ ಎನ್ನತಕ್ಕಂಥ ಪ್ರಶ್ನೆ. ಕೇಂದ್ರ ಸರ್ಕಾರದವರು ಅಲ್ಲಲ್ಲಿ ಹಾಡಿ ಹೊಗಳುತ್ತಾರೆ, ಅಲ್ಲಿ ಕರ್ನಾಟಕದಲ್ಲಿ ನೋಡಿ ಹೇಗೆ ಮಾಡುತ್ತಿದ್ದಾರೆ, ಇದು ಸ್ಟ್ಯಾಂಪ್ ಡ್ಯೂಟಿ ರೀಫಾರ್ಮ್ಸ್ ಎಂದು, ಕೇಂದ್ರ ಸರ್ಕಾರದವರು ಎಲ್ಲರಿಗೂ ಹೇಲುತ್ತಿದ್ದಾರೆ, ಕರ್ನಾಟಕದಲ್ಲಿ ಒಳ್ಳೆಯ ರೀಫಾರ್ಮ್ಸ್, ತಂದಿದ್ದಾರೆ ಅದೇರಿತಿ ನೀವು ತೆಗೆದುಕೊಂಡು ಬನ್ನಿ. ಎಂದು ಹೇಳುತ್ತಿದ್ದಾರೆ. ವಿಶ್ವಬ್ಯಾಂಕ್‌ನವರು ದೇಶಕ್ಕೆಲ್ಲಾ ಸಾರಿಕೊಂಡು ಬರುತ್ತಿದ್ದಾರೆ. ಹೋದ ಹೋದ ಕಡೆಗೆಲ್ಲಾ ಪೆರು, ಚಿಲಿ ಕೊಲಂಬಿಯಾ, ಇಲ್ಲಿ ಎಲ್ಲಾ ಹೇಳುತ್ತಿದ್ದಾರೆ, ರಿಫಾರ್ಮ್‌ಂಗ್ ಸ್ಟೇಟ್‌ನಲ್ಲಿ Karnataka and Andhra Pradesh they are doing extremely well. ಹಾಗೆ ಎಂದು ಅವರು ಹೇಳಿಕೊಂಡು ಬರುತ್ತಿದ್ದಾರೆ. ಆದರೆ ನಾವು ಏನು ತಪ್ಪು ಮಾಡಿದೆವು? ಕರ್ನಾಟಕ ಜನ ಏನು ತಪ್ಪು ಮಾಡಿದರು ಎಂದು ಹೇಳಿದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರು, ಅದಕೋಸ್ಕರ ನಮಗೆ ಈ ಶಿಕ್ಷೆ ಎನ್ನಂಥದ್ದನ್ನು ಜನಗಳು ಆ ರೀತಿ ಇಂಟರ್ ಪ್ರಿಟೇಷನ್ ಮಾಡಿದರೆ ನಾವು ಇಲ್ಲ ಇಲ್ಲ ಎಂದು ಹೇಳಲಿಕ್ಕೆ ನಮಗೆ ಬಾಯಿ ಇಲ್ಲ. ಅಂತಿಮವಾಗಿ ಅವರು ಏನು ಇಂಟರ್ ಪ್ರಿಟೇಷನ್ ಮಾಡುತ್ತಾರೆ ಅದರ ಮೇಲೆ ನಿಮ್ಮ ಭವಿಷ್ಯ, ನಮ್ಮ ಭವಿಷ್ಯ, ಅವರ ಭವಿಷ್ಯ ಇಲ್ಲವೂ ನಿರ್ಣಯವಾಗುತ್ತದೆ. ಇದನ್ನು ಹೇಳುವಾಗ ಬಹಳ ಉದ್ವೇಗ ಬರುತ್ತಿದೆ ಆದರೆ ಬಹಳ ಸಂಕಟವೂ ಕೂಡ ಆಗುತ್ತದೆ. ಬಾಬ ಸಾಹೇಬ್ ಅಂಬೇಡ್ಕರ್ ಅವರ ರಾಜ್ಯಂಗದ "federal set up" ಅನ್ನು ಒಪ್ಪುತ್ತೇವೆ, Even though if is federal in character, but unitary in nature ಎನ್ನತಕ್ಕಂಥ ಇಂಟರ್ ಪಿಟೇಷನ್ ಅನ್ನು ಒಪ್ಪುತ್ತೇವೆ. ಕೇಂದ್ರ ಸರ್ಕಾರ has assumed commanding heights. ಎಲ್ಲಾ ರಾಜ್ಯಗಳ ಮೇಲೆ, ರಾಜ್ಯಗಳ ಅಧಿಕಾರಗಳನ್ನು ಮೊಟುಕು ಮಾಡಬೇಕು ಎಂದು, ಯಾವ ತತ್ವಗಳಿಗೋಸ್ಕರ, ಯಾವ ಸಿದ್ಧಾಂಥಗಳಿಗೋಸ್ಕರ ರಾಮಕೃಷ್ಣ ಹೆಗಡೆಯವರು ಇದೇ ಸ್ಥಳದಿಂದ ಕುಳಿತು ಈ ಸದನದಲ್ಲಿ ಅಟಾನಾಮಿ ರಾಜ್ಯಗಳಿಗೆ ಹೆಚ್ಚು ಆಗಬೇಕು ಎನ್ನುವ ಪ್ರತಿಪಾದನೆಯನ್ನು ಮಾಡಿದಾಗ, ನೀವು ಎಲ್ಲಾ ಇಲ್ಲಿ ಕುಳಿತಿದ್ದೀರಿ, ನಿಮ್ಮನ್ನೂ ಸೇರಿಸಿ 83–84ನೇ ಇಸ್ವಿಯಲ್ಲಿ ಅಲ್ಲಿ ಕುಳಿತು ಸಪೋರ್ಟ್ ಮಾಡುತ್ತಿದ್ದಿರಿ. ಈವತ್ತು ಅದೆಲ್ಲಾ ಹೇಗೆ ತಲೆಕೆಳಗೆ ಆಗಿದೆ? ಇದು ಏಕೆ? ಇನೊಂದು ರಾಜ್ಯ ಆಂಧ್ರಪ್ರದೇಶಕ್ಕೆ, ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಅವರು ಇನ್ನೂ ರೆಡಿಯಾಗಿರಲಿಲ್ಲ, ಅವರಿಗೆ ಈ ಸೌಲಭ್ಯವನ್ನು ಕಲ್ಪಿಸಿ ಕೊಟ್ಟಿದ್ದೀರಿ, ಇದನ್ನು ನಾವು ಏನು ಅನ್ನಬೇಕು? ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರು ಇದಕ್ಕೆ ಏನು ಅನ್ನಬೇಕು ಎಂಬುದನ್ನು.... ಫೋಟೋಗೋಸ್ಕರ ಕೋಟ್ ಹಾಕಿಕೊಂಡು ಬಂದಿದ್ದಾರೆ ಚೆನ್ನಾಗಿ ಕಾಣುತ್ತಿದ್ದಾರೆ.. ನಾನು ನಾಲ್ಕು ಬಜೆಟ್ ಸ್ಪೀಚ್‌ಗಳಲ್ಲಿ ಈ ಸಾಲದ ಸುಳಿಯಲ್ಲಿ ಈ ರಾಜ್ಯವನ್ನು ಸಿಕ್ಕಿಸಿದ್ದಾರೆಂದು ನನ್ನ ಮೇಲೆ ನೀವು ಪ್ರಭಲವಾದಂಥ ಧಾಳಿಯನ್ನು ಮಾಡಿದಿರಿ, ನಿಮ್ಮ ಭತ್ತಳಿಕೆಯಲ್ಲಿ ಇದ್ದಂಥ ಎಲ್ಲಾ ಅಸ್ತ್ರವನ್ನು ನನ್ನ ಮೇಲೆ ಹಾಗೂ ಸರ್ಕಾರದ ಮೇಲೆ ಪ್ರಯೋಗ ಮಾಡಿದಿರಿ. ಆದರೆ ವಸ್ತುಸ್ಥಿತಿ ಏನು? ಅದನ್ನು ನಾನು ತಮಗೆ ಅಗಿಂದಾಗ್ಗೆ ಹೇಳುತ್ತಿದ್ದೇನೆ. ಗುಜರಾತ್‌ನಲ್ಲಿ ಎಷ್ಟು ಇದೆ? ಕರ್ನಾಟಕದಲ್ಲಿ ಎಷ್ಟು ಇದೆ? ಆಂಧ್ರಪ್ರದೇಶದಲ್ಲಿ ಎಷ್ಟು ಇದೆ? ಮಹಾರಾಷ್ಟ್ರದಲ್ಲಿ ಎಷ್ಟು ಇದೆ? ಹೀಗೆ ನಾನು ಎಲ್ಲವನ್ನೂ ಹೇಳಿದರೂ ಕೂಡ ನೀವು ಅದನ್ನೇ ಪುನ: ಪುನ: ಪ್ರತಿಪಾದನೆ ಮಾಡುತ್ತಿದ್ದೀರಲ್ಲಾ ಇದು ಏಕೆ? ಮತ್ತು ಇದನ್ನೂ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾವು ಯಾವ್ಯಾವ ಸಾಲಗಳನ್ನು ಮಾಡಿದ್ದೇವೆ ಸಾಲಗಳ ಡೆಟ್ ಸರ್ವೀಸ್‌ಸ್ ಅನ್ನು ನಾವು ಮಾಡಿದ್ದೇವೆ, ಪೂರೈಸಿದ್ದೇವೆ. ಆದರೂ ಕೂಡ ನಮ್ಮನ್ನು ಸಾಲದ ಸುಳಿಯಲ್ಲಿ ನೀವು ಸಿಗಿಸುತ್ತಿದ್ದೀರೆಂದು ಮತ್ತು ಖಜಾನೆ ಬರಿದಾಗಿದೆ ಎಂದು

ಹೇಳುತ್ತಿದ್ದೀರಿ. All-India average debt-serviving as percentage of total revenue-29.7 ಪರ್ಸೆಂಟ್ ಇದೆ. ಈ ಅಂಶವನ್ನು ನಾನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ನೀಡಿರತಕ್ಕಂಥ ರಿಪೋರ್ಟ್‌ನಿಂದ ಕೋಟ್ ಮಾಡುತ್ತಿದ್ದೇನೆ. ಇದರಲ್ಲಿ ಯಾರಿಗಾದರೂ ಅನುಮಾನ ಇದ್ದರೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನೀಡಿರತಕ್ಕಂಥ ರಿಪೋರ್ಟ್‌ನ್ನು ಕಳುಹಿಸಿಕೊಡುತ್ತೇನೆ. ಅದನ್ನು ತಾವುಗಳು ಪರಾಂಭರಿಸಬಹುದು. ಇವತ್ತಿನದಿವಸ ಆಂಧ್ರಪ್ರದೇಶ ರಾಜ್ಯದ್ದು 30.5 ಪರ್ಸೆಂಟ್ ಇದೆ. ಗುಜರಾತ್ ರಾಜ್ಯದ್ದು 31.5 ಪರ್ಸೆಂಟ್ ಮತ್ತು ಮಹಾರಾಷ್ಟ್ರ ರಾಜ್ಯದ್ದು 25 ಪರ್ಸೆಂಟ್ ಮತ್ತು ತಮಿಳುನಾಡು ರಾಜ್ಯದ್ದು 24.5 ಪರ್ಸೆಂಟ್ ಇದೆ. ಕರ್ನಾಟಕ ರಾಜ್ಯದ್ದು 22.00 ಪರ್ಸೆಂಟ್ ಇದೆ. ನಮ್ಮ ಹಣಕಾಸಿನ ನಿರ್ವಹಣೆಯ ಸಾಮರ್ಥ್ಯಕ್ಕೆ ಇದು ಹಿಡಿದ ಕನ್ನಡಿಯೇ ಅಥವಾ ಅದರ ಅಸಮಾರ್ಥ್ಯಕ್ಕೆ ಹಿಡಿದಿರತಕ್ಕಂಥ ಕನ್ನಡಿಯೇ ಎನ್ನತಕ್ಕಂಥದ್ದರ ಬಗ್ಗೆ ನೀವು ಮೌಲ್ಯಯುತವಾದ ನಿರ್ಧಾರವನ್ನು ಮಡಬೇಕಾಗುತ್ತದೆ. ಮಾನ್ಯ ಎಸ್.ಎಸ್. ಪಾಟೀಲ್‌ರವರು ಯಾವಾಗಲೂ ಕೂಡ ಮೌಲ್ಯಯುತವಾದ ನಿರ್ಧಾರಗಳನ್ನು ಮಾಡುತ್ತಾರೆ. ಈ ವಿಷಯವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರೇ ಹೇಳಿದ ಮೇಲೆ ಪುನ: ಆ ಪ್ರಶ್ನೆಯನ್ನು ಕೇಳುತ್ತಿದ್ದೀರಿ. ಗೌರ್ನಮೆಂಟ್ ಆಫ್ ಇಂಡಿಯಾದವರು ಮಾಡಿರತಕ್ಕಂಥ ಸಾಲದ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾನೂ ಕೂಡ ಸ್ವಲ್ಪ ಎಕ್ನಾಮಿಕ್ಸ್‌ನ್ನು ಕಲಿತಿದ್ದೇನೆ. ಮತ್ತೆ ಪ್ರೊ. ವೆಂಕಟಗಿರಿಗೌಡರೂ ಕೂಡ ಮಹಾರಾಜ ಕಾಲೇಜಿನಲ್ಲಿ ಎಕ್ನಾಮಿಕ್ಸ್‌ನ ಬೇಸಿಕ್‌ನ್ನು ನಮಗೆ ಹೇಳಿಕೊಟ್ಟರು. ಆನಂತರ ಅಲ್ಲಿ, ಇಲ್ಲ, ಓದಿ ಸ್ವಲ್ಪ ತಿಳಿದುಕೊಂಡಿದ್ದೇನೆ. ಇವತ್ತಿನದಿವಸ ಸಾಲವನ್ನು ತೆಗೆದುಕೊಳ್ಳದ ಯಾವ ರಾಜ್ಯವೂ ಕೂಡ ಇಲ್ಲ. ಕೇವಲ ಅವರ ಸಂಪನ್ಮೂಲಗಳಿಂದ ಮತ್ತು ತೆರಿಗೆಯಿಂದ ಬರತಕ್ಕಂಥ ಹಣದಿಂದ ಮಾತ್ರ ಇವತ್ತಿನದಿವಸ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸಲಿಕ್ಕೆ ಸಾಧ್ಯವಿಲ್ಲ. ನಾವು ಯಾವ ಕಾರ್ಯಕ್ರಮಗಳನ್ನು ಈ ಸದನದ ಮುಂದೆ ಆಗಿಂದಾಗ್ಗೆ ಸಾದರಪಡಿಸುತಿದ್ದೆವೆಯೋ, ಅದಕ್ಕೆ ಪೂರಕವಾದಂಥ ಒತ್ತಾಸೆಯನ್ನು ನಾವು ಕೊಟ್ಟಿದ್ದೇವೆ. ಅಲ್ಲೊಂದು ಇಲ್ಲೊಂದು ನಿಧಾನವಾಗಿರಬಹುದು. ಮತ್ತೆ ಹಣ ಬಿಡುಗಡೆ ಮಾಡುವುದುದರಲ್ಲಿ ನಿಧಾನವಾಗಿರಬಹುದು. ಆದರೆ, ಅಂತಿಮವಾದ ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನತಕ್ಕಂಥಕ್ಕೆ ಸಂಬಂಧಪಟ್ಟಂಥ ಅಂಕಿ–ಅಂಶಗಳನ್ನು ರುಜುವಾತುಪಡಿಸುವುದಕ್ಕೆ ನನ್ನ ಹತ್ತಿರ ಪುರಾವೆಗಳಿವೆ. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಮುಚ್ಚತಕ್ಕಂಥದ್ದು ಸರಿಯಲ್ಲವೆಂದು ಹಲವಾರು ಟೀಕೆಗಳು ಬಂದವು. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಒಟ್ಟಾರೆ ಉದ್ದೇಶ ಏನು ಇತ್ತೆಂದರೆ, ಇವುಗಳಿಗೆ ಕೊಡತಕ್ಕಂಥ ಮೊತ್ತವನ್ನು ಒಟ್ಟಿಗೆ ಸೇರಿಸಿ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಅದನ್ನು ಪೂಲ್ ಮಾಡಬೇಕೆಂಬ ಸದುದ್ದೇಶ ಇತ್ತು. ಆದರೆ, ಇಂಥ ಉದ್ದೇಶಗಳ ಬಗ್ಗೆ ನಾವು ಕ್ಯಾನ್‌ವಾಸ್ ಮಾಡಿ ಅಥವಾ ಪ್ರತಿಪಾದನೆ ಮಾಡಿ ಆ ಭಾಗದ ಸದಸ್ಯರುಗಳ ಮನವೊಲಿಸಿಕೊಳ್ಳುವುದಕ್ಕೆ ಕಾಲ ಬೇಕಾಗುತ್ತದೆ. ಆದರೆ, ಇದಕ್ಕೆ, ಪ್ರಯತ್ನಗಳನ್ನು ಮುಂದುವರಿಸುತ್ತೇನೆ. ಸದ್ಯಕ್ಕೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಏನ್ನೊಂದು ಹಣವನ್ನು ನಮೂದಿಸಿದ್ದೇವೆಯೋ ಅದಕ್ಕಿಂತ ಹೆಚ್ಚು ಹಣ ಕೊಡುವುದಲ್ಲದೆ ಈ ಬೋರ್ಡ್‌ನ್ನು ಮತ್ತೆ ಮುಂದುವರಿಸುವುದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. ಹಾಗೆಯೇ ಮಲೆನಾಡು ಅಭಿವೃದ್ಧಿ ಮಂಡಳಿಗೆ ಕೊಡತಕ್ಕಂಥ ಅಲೋಕೇಶನ್‌ನ್ನೂ ಕೂಡ ಜಾಸ್ತಿ ಮಾಡಿ ಮತ್ತೆ ಇದನ್ನು ಮುಂದುವರಿಸುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಶಿವಾನಂದ ಪಾಟೀಲ್ : ಬಯಲು ಸೀಮೆಯವರು ಏನು ತಪ್ಪು ಮಾಡಿದ್ದಾರೆ?

ಶ್ರೀ ಜಗದೀಶ್ ಶೆಟ್ಟರು : ಇದನ್ನು ಮಾನ್ಯ ಅಧ್ಯಕ್ಷರೇ ಕೇಳಬೇಕು.

ಶ್ರೀ ಎಸ್.ಎಂ. ಕೃಷ್ಣ : ಆದ್ದರಿಂದಲೇ ನಾನು ಅಧ್ಯಕ್ಷರ ಕಡೆ ತಿರುಗಿ ಮಾತನಾಡುತ್ತಿಲ್ಲ. ನಿಮ್ಮ ಕಡೆ ನೋಡಿಕೊಂಡು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು : ಈ ವಿಷಯವನ್ನು ನಾನೇ ಕೇಳಬೇಕೆಂದು ಇದ್ದೆ. ಅಷ್ಟರೊಳಗೆ ಅವರೇ ಕೇಳಿದರು.

ಶ್ರೀ ಎಸ್.ಎಂ. ಕೃಷ್ಣ : ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇವತ್ತಿನದಿವಸ ಹಲವಾರು ಭಾಗಗಳನ್ನು ಹಂಚಿಕೊಂಡು ಬಿಟ್ಟಿದೆ. ಉದಾಹರಣೆಗೆ ಹೇಳುವುದಾದರೆ, ಈಗ ಮಾಡಿರತಕ್ಕಂಥ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಬಯಲು ಸೀಮೆಯ ಬಹುಭಾಗ ಬರಲಿಕ್ಕೆ ಸಾಧ್ಯವಾಗಿದೆ. ಮತ್ತೆ ಕರ್ನಾಟಕ ನೀರಾವರಿ ನಿಗಮದ ಚೌಕಟ್ಟಿನಲ್ಲಿ ಕರ್ನಾಟಕ ರಾಜ್ಯದ ಯಾವುದೇ ಭಾಗವನ್ನು ತೆಗೆದುಕೊಳ್ಳಬಹುದಾಗಿದೆ. ಆದರೆ, ಮಲೆನಾಡು ಪ್ರದೇಶದ ಬೆಟ್ಟ ಗುಡ್ಡಗಳಿಂದ ಅಲ್ಲಿ ಸಂಪರ್ಕದ ಕೊರತೆಯಿರತಕ್ಕಂಥದ್ದನ್ನು ಗಮನಿಸಿ ಮಲೆನಾಡು ಅತ್ಯಂತ ಹಿಂದುಳಿದ ಭಾಗಗಳಾಗಿರತಕ್ಕಂಥ ಹೈದರಬಾದ್ ಕರ್ನಾಟಕದ ಅಭಿವೃದ್ಧಿಗೋಸ್ಕರ ಇವುಗಳ ಬಗ್ಗೆ ನಾವು ವಿಶೇಷವಾದಂಥ ಗಮನವಿಟ್ಟು ಮತ್ತೆ ಈ ಎರಡು ಬೋರ್ಡ್‌ಗಳನ್ನು ನಾನು ರೆಸ್ಟೋರ್ ಮಾಡುತ್ತಿದ್ದೇನೆ. ಮತ್ತೆ ಇವುಗಳಿಗೆ ಹೆಚ್ಚು ಹಣ ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ.

ಶ್ರೀ ಎಸ್. ಶಿವಾನಂದ ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಬಯಲು ಸೀಮೆ ಅಭಿವೃದ್ಧಿ ಮಂಡಳಿ ಬಗ್ಗೆ ಒಂದು ನಿರ್ಧಿಷ್ಟವಾದ ನಿಲುವನ್ನು ಈ ಸಂದರ್ಭದಲ್ಲಿ ಹೇಳಬೇಕು. ಏಕೆಂದರೆ, ಬಯಲು ಭಾಗದ ಸುಮಾರು 74 ಜನ ಶಾಸಕರು ಇಲ್ಲಿದ್ದೇವೆ. ನೀರಾವರಿ ನಿಗಮದಿಂದ ಬಯಲು ಸೀಮೆಗೆ ಬರುತ್ತದೆಂದು ತಾವು ಹೇಳಿದ್ದೀರಿ, ಆದರೆ, ಇದು ಬಯಲು ಸೀಮೆಗೆ ಬರುವುದಿಲ್ಲ. ರೈನ್ ಫೆಡ್ ಇರಿಗೇಶನ್ ಏರಿಯಾವನ್ನು ಮಾನದಂಡ ಇಟ್ಟುಕೊಂಡು ಬಯಲು ಸೀಮೆಯನ್ನು ಸೃಷ್ಟಿ ಮಾಡಲಾಗಿದೆ. ಆದರೆ, ನನಗೆ ತಿಳಿದ ಮಟ್ಟಿಗೆ ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ತೆಗೆದು ಒಂದೇ ಮಾಡಿರತಕ್ಕಂಥದ್ದು ಒಳ್ಳೆಯದು. ಆದರೆ, ಬಹುತೇಕ ಅವರೆಲ್ಲರೂ ತಮ್ಮ ಮೇಲೆ ಪ್ರೆಜರ್ ಮಾಡಿರುವುದರಿಂದ ಅದು ಒಂದನ್ನೇ ಮುಂದುವರಿಸಿ ಬಯಲು ಸೀಮೆ ಅಭಿವೃದ್ಧಿ ಬಗ್ಗೆ ತಾವು ನೆಗ್ಲೇಟ್ ಮಾಡಿದರೆ ತಪ್ಪಾಗುತ್ತದೆ.

ಅಧ್ಯಕ್ಷರು : ದಯವಿಟ್ಟು ಬಯಲು ಸೀಮೆ ಅಭಿವೃದ್ಧಿಯನ್ನು ಸಣ್ಣ ನೀರಾವರಿ ಇಲಾಖೆಗೆ ಸೇರಿಸಿದರೆ ಒಳ್ಳೆಯದು. ಏಕೆಂದರೆ ನಮ್ಮ ಕಡೆ ಹೆಚ್ಚಾಗಿ ಸಣ್ಣ ನೀರಾವರಿ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರುತ್ತಾರೆಂದು ನಾವು ತಿಳಿದುಕೊಂಡಿದ್ದೇವೆ. ಏಕೆಂದರೆ, ಇವತ್ತಿನದಿವಸ ಎರಡು ಅಭಿವೃದ್ಧಿ ಮಂಡಳಿಗಳನ್ನು ಮುಂದುವರಿಸಿ ಬರುಯಲು ಸೀಮೆ ಅಬಿವೃದ್ಧಿ ಮಂಡಳಿಯನ್ನು ಬಿಡುತ್ತಿದ್ದಾರೆ. ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ ಕೊಡಬೇಕೆಂದು ನಾವು ಮೊಲಿನಿಂದಲೂ ಕೂಡ ಒತ್ತಾಯ ಮಾಡುತ್ತಿದ್ದೇವೆ. ಆದ್ದರಿಂದ ಇದನ್ನು ಮುಂದುವರಿಸಿ ಇದಕ್ಕೆ ಹೆಚ್ಚಿನ ಹಣ ಕೊಡತಕ್ಕಂಥದ್ದು ಆಗಬೇಕು. ಆ ಎರಡು ಬೋರ್ಡ್‌ಗಳನ್ನು ಮುಂದುವರಿಸಿ ಇದನ್ನು ರದ್ದು ಮಾಡತಕ್ಕಂಥದ್ದು ಸರಿಯಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹೈದರಬಾದ್ ಅಭಿವೃದ್ಧಿ ಮಂಡಳಿಯನ್ನು ರದ್ದು ಮಾಡಿರತಕ್ಕಂಥದ್ದನ್ನು ತಾವು ಒಪ್ಪಿಕೊಳ್ಳುತ್ತೀರಾ ಎಂದು ನಾನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಕೇಳಿದ್ದಕ್ಕೆ ಅವರು ಸುಮ್ಮನೆ ಇದ್ದರು. ಆದರೆ, ಈಗ ಅದನ್ನು ಅವರು ಸರಿಮಾಡಿದ್ದಾರೆ.

ಶ್ರೀ ಎಸ್. ಶಿವಾನಂದ ಪಾಟೀಲ್ : ಅಂದರೆ, ಬಯಲು ಸೀಮೆಯವರಿಂದ ಹೆಚ್ಚಿನ ಒತ್ತಡ ಇಲ್ಲವೆಂದು ತಾವು ಹೇಳುತ್ತಿದ್ದೀರಾ?

ಶ್ರೀ ಎಸ್.ಎಸ್. ಪಾಟೀಲ್ : ಮತ್ತೆ ಮಲೆನಾಡು ಭಾಗದಲ್ಲಿಯೂ ಕೂಡ ಪ್ರಭಾವಿ ಮಂತ್ರಿಗಳಿದ್ದಾರೆ. ಆದರೆ, ಬಯಲು ಸೀಮೆಗೆ ಯಾರೂ ಇಲ್ಲ. ಇದು ಇಲ್ಲಿರತಕ್ಕಂಥ ಪರಿಸ್ಥಿತಿಯಾಗಿದೆ. ಮತ್ತೆ ಈ ಭಾಗದ ಶಾಸಕರೂ ಕೂಡ ಬಳೆ ಇಟ್ಟುಕೊಂಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಎಸ್.ಎಸ್. ಪಾಟೀಲ್‌ರವರು ಹಿರಿಯರು ಮತ್ತು ಅನುಭವಿಗಳಾಗಿದ್ದು ಈ ರೀತಿ ಹೇಳಿದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ : ನಾವೇನು ಹೇಳುವುದು? ನಾನು ಹಿರಿಯ ಸದಸ್ಯನಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ,

ಗೊಂದಲ

ಅಧ್ಯಕ್ಷರು : ಇದನ್ನು ಸಣ್ಣ ನೀರಾವರಿಗೆ ಸೇರಿಸಿದರೆ ಎಲ್ಲವೂ ಸರಿ ಹೋಗುತ್ತದೆ.

ಶ್ರೀಮತಿ ಮೋಟಮ್ಮ : ರಿಪ್ಲೈ ಆದ ಮೇಲೆ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ಇದೇರೀತಿ ಮುಂದುವರರೆಸಿಕೊಂಡು ಹೋಗುವ ಬದಲಾಗಿ ಮುಚ್ಚಿಬಿಡುವುದು ಒಳ್ಳೆಯದು, ಅದಕ್ಕೆ ಒಬ್ಬರು ಆಡಳಿತ ಪಕ್ಷದ ಅಧ್ಯಕ್ಷರಾಗುತ್ತಾರೆ, ಅವರ ಕಾರಿಗೆ, ಅವರ ಟಿಎ ಡಿಎ ಗೆ ಆಗುತ್ತದೆ, ಅದನ್ನು ಬಿಟ್ಟರೆ ಅದರಲ್ಲಿ ಏನೂ ಇಲ್ಲ, ಹಾಗೆ ಮಾಡುವುದಕ್ಕಿಂತ ಅದನ್ನು ಮುಚ್ಚುವುದೇ ಒಳ್ಳೆಯದು, ಇಲ್ಲದಿದ್ದರೆ ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಕೊಟ್ಟಂತ ಇದಕ್ಕೂ 50 ಕೋಟಿ ರೂ.ಗಳವರೆಗೆ ಹಣವನ್ನೇದಾರೂ ಕೊಡುವುದಿದ್ದರೆ ಅದನ್ನು ಇಡಿ, ಇಲ್ಲದಿದ್ದರೆ ಅದನ್ನು ಮುಚ್ಚಿ ಬಿಡಿ. ದಯಮಾಡಿ ತಿಳಿದುಕೊಳ್ಳಿ, ನಾವು 77 ಜನ ಎಂಎಲ್ಎ ಗಳು ಇದ್ದೇವೆ, ಅತಿ ಕಷ್ಟದಲ್ಲಿರುವ ಕ್ಷೇತ್ರ ಯಾವುದೆಂದರೆ, ಇವತ್ತು ಬಯಲುಸೀಮೆ ಕ್ಷೇತ್ರ. ಅದಕ್ಕೆ ತಮ್ಮ ಒತ್ತು ಇಲ್ಲ, ಅದರ ಬಗ್ಗೆ ತಮ್ಮ ಲಕ್ಷ್ಯವಿಲ್ಲವೆಂದರೆ ದುರ್ದೈವದ ಸಂಗತಿ, ಅದರ ಬಗ್ಗೆ ನಾವು ಏನು ಮಾತನಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಅದನ್ನು ಬೇಕಾದರೆ ಸಣ್ಣ ನೀರಾವರಿ ಇಲಾಖೆಗೆ ಸೇರಿಸಿ.

ಶ್ರೀ ಎ. ನಾಗರಾಜು : ಸನ್ಮಾನ್ಯ ಅಧ್ಯಕ್ಷರೆ, ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ಮುಂದುವರೆಸಿಕೊಂಡು ಹೋಗುಬೇಕಾಗುತ್ತದೆ. ಏಕೆಂದರೆ ದಿನೇ ದಿನೇ ಅಲ್ಲಿ ಅಂತರ್ಜಲ ಒಳಗಡೆ ಹೊಗುವುದರಿಂದ ಅದನ್ನು ದಯವಿಟ್ಟು ಮುಂದುವರೆಸಿಕೊಂಡು ಹೋದರೆ ಒಳ್ಳೆಯದಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಎರಡು–ಮೂರು ಕರಣಗಳಿಗೋಸ್ಕರ ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ನಾವು ತೆಗೆದು ಹಾಕಿದ್ದು, ಒಂದು ಕಾರಣವೇನೆಂದರೆ, ಕೃಷಿ ಅಭಿವೃದ್ಧಿ ನಿಗಮವನ್ನು ಸಾಪನೆ ಮಾಡಿರುತ್ತೇವೆ. ರಾಜ್ಯದಲ್ಲಿ ಬಯಲು ಸೀಮೆಯೂ ಸೇರಿರುತ್ತದೆ. ಕೃಷಿ ಅಭಿವೃದ್ಧಿ ನಿಗಮ ಒಂದುಕಡೆ, ಮತ್ತೊಂದು ಕಡೆ ಮೈನರ್ ಇರಿಗೇಶನ್‌ಗೆ ಒಂದು ಹೊಸ ಕಾರ್ಪೊರೇಶನ್‌ನ್ನು ಮಾಡುತ್ತಿದ್ದೇವೆ. ಇವತ್ತು ನಿಮಗೆ ಸೋಜಿಗವನ್ನುಂಟು ಮಾಡತಕ್ಕಂಥ ಬೆಳವಣಿಗೆ ಏನೆಂದರೆ, ಕಾವೇರಿ ನೀರಾವರಿ ನಿಗಮ ಮಾಡಿದ ಮೇಲೆ, ಕೃಷ್ಣ ಜಲಭಾಗ್ಯ ನಿಗಮ ಮಾಡಿದ ಮೇಲೆ 7333 ಕೋಟಿ ರೂ:ಗಳನ್ನು ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಾವು ಖರ್ಚು ಮಾಡಿದ್ದೇವೆ, ಇದಕ್ಕಾಗಿ ನಮ್ಮ ಸದಸ್ಯರು ಮೇಜು ಕುಟ್ಟುತ್ತಿದ್ದಾರೆ. 3 ಸಾವಿರ ಎಂದಿದ್ದರೆ ಅವರು ಅದನ್ನು ಮಾಡುತ್ತಿರಲಿಲ್ಲ. ತಾವು ಅಧಿಕಾರದಲ್ಲಿ ಇದ್ದಂಥ ಕಾಲದಲ್ಲಿ ನೀವು ಖರ್ಚು ಮಾಡಿದ್ದು ಎಷ್ಟು 3 ಸಾವಿರ. ನಾವು ಮಾಡಿರುವ 7333 ಕೋಟಿ ರೂ.ಗಳ ಖರ್ಚಿನ ಲೆಕ್ಕವನ್ನು ನಿಮಗೆ ಕೊಡುತ್ತೇನೆ. ಇದು ವಾದಕ್ಕೆ ವಾದ ಹೊರತು ಅಷ್ಟೆ, ಮಾನ್ಯ ಎಸ್.ಎಸ್. ಪಾಟೀಲ್‌ರೇ, ನಿಮ್ಮನ್ನು ಕಂಡರೆ ನನಗೆ ಬಹಳ ಗೌರವವಿದೆ.

ಶ್ರೀ ಎಸ್.ಎಸ್. ಪಾಟೀಲ್ : ,ಮಾನ್ಯ ಅಧ್ಯಕ್ಷರೆ, ನನಗೂ ನಿಮ್ಮ ಮೇಲೆ ಅಪಾರವಾದ ಗೌರವವಿದೆ ಎಂದು ಹೇಳುತ್ತೇನೆ, ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿ ಎಂದು ನೀವು ಮಾಡಿದ್ದು ಏನಿದೆ ಅದು ಸರಿಯಾಗಿದೆ. ಅದಕ್ಕೆ ನಮ್ಮ ವಿರೋಧವಿಲ್ಲ. ಜಂಜುಂಡಪ್ಪನವರ ವರದಿಯ ಪ್ರಕಾರ ಅದಕ್ಕೆ ಹೆಚ್ಚು ಒತ್ತು ಕೊಡಿ. ಇವುಗಳನ್ನೆಲ್ಲಾ ರದ್ದು ಮಾಡಿ, ರದ್ದು ಮಾಡಿದ್ದು ಸರಿಯಾಗಿತ್ತು, ಅವುಗಳನ್ನು ಮತ್ತೆ ಏಕೆ ಮಾಡಿದಿರಿ, ಇದು ನನ್ನ ವಾದ. ಇಲ್ಲದಿದ್ದರೆ ಅದಕ್ಕೆ ದುಡ್ಡು ಕೊಡಿ, ನಂಜುಂಡಪ್ಪರವರ ವರದಿಯ ಪ್ರಕಾರ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ 50 ಕೋಟಿ ರೂ.ಗಳನ್ನು ಕೊಡಿ.

ಗೊಂದಲ

ಶ್ರೀ ಎಸ್.ಎಂ. ಕೃಷ್ಣ : ಮಾಸನ್ಯ ಅಧ್ಯಕ್ಷರೆ, ನಿಮಗೆ ಇರುವಷ್ಟು ಕಳಕಳಿಯೇ ಶ್ರೀ ಎಸ್.ಎಸ್. ಪಾಟೀಲರಿಗೂ ಇದೆ, ಅವರು ಏನು ಗಮನಕ್ಕೆ ತರುತ್ತಿದ್ದಾರೆ ಆ ಅಂಶಗಳನ್ನು ನಾವು ಸಾರಾಸಗಟಾಗಿ ತಿರಸ್ಕಾರ ಮಾಡುವುದಕ್ಕಾಗುವುದಿಲ್ಲ, ಹಂಸಕ್ಷೀರ ನ್ಯಾಯದಂತೆ ಯಾವುದು ಬೇಕೋ ಅದನ್ನು ತೆಗೆದುಕೊಳ್ಳಬಹುದು ; ಧನ್ಯವಾದಗಳು.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಮ್ಮ ಒಂದು ಸಬ್‌ಮಿಷನ್ ಏನೆಂದರೆ, ಹೈದ್ರಾಬಾದ್–ಕರ್ನಾಟಕದಲ್ಲಿ ಅಪ್ಪರ್ ಮತ್ತು ಲೋಯರ್ ಮುಲ್ಲಾಮಾರಿ ಕಾರಂಜಾ ಯೋಜನೆಗಳು ಬರುತ್ತವೆ, ಯುಕೆಪಿ ಯ ಲೆಫ್ಟ್ ಅಂಡ್ ರೈಟ್ ಕೆನಾಲ್‌ದಿಂದ ಅವರು ನೀರಾವರಿಯನ್ನು ಮಾಡಿಕೊಳ್ಳುತ್ತಿದ್ದಾರೆ, ಬಯಲುಸೀಮೆಯಲ್ಲಿ ಉಳಿದವರು ಯಾರು ಎಂದರೆ, Where there is no total irrigation. ದಯಮಾಡಿ ಅವರಿಗೆ ಕೊಡುವಷ್ಟು ಹಣವನ್ನೇ ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಗೂ ಕೊಡಿ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲ್‌ರವರು ಹೇಳಿದ ಮೇಲೆ ಬಯಲುಸೀಮೆ ಅಭಿವೃದ್ಧಿ ಮಂಡಳಿಗೂ ಕೂಡ ಪುನ: ಅದಕ್ಕೆ ಒತ್ತು ಕೊಟ್ಟು ಹಣವನ್ನು ಕೊಟ್ಟು ಅದನ್ನು ಪುನರುಜ್ಜೀವನಗೊಳಿಸುತ್ತೇವೆ. ನೀವು ಹೇಳಿದ್ದೀರಿ ಎಂದು ಒಪ್ಪಿಕೊಂಡಿದ್ದೇನೆ ಅಷ್ಟೆ. ಇನ್ನು ಕ್ರಾಪ್ ಇನ್‌ಶ್ಯೂರೆನ್ಸ್ ವಿಚಾರವನ್ನು ಹೇಳಿದಿರಿ, ಎಲ್ಲಿ ಕೊಟ್ಟಿದ್ದೀರಿ ಎಲ್ಲಿ ಬಿಟ್ಟಿದ್ದೀರಿ ಎಂದು ಹೇಳಿದಿರಿ, ಟೋಟಲ್ ಕಾಂಪೆನ್‌ಶೆಷನ್ ಇದುವರೆಗೆ ಡಿಸ್‌ಪರ್ಸ್ ಆಗಿರುವುದು 268 ಕೋಟಿ ರೂಪಾಯಿಗಳು. ನಾವು ಕೊಡಬೇಕಾಗಿರುವ 103 ಕೋಟಿ ರೂ.ಗಳು ಅದರ ಪೂರ್ಣ ಪಾವತಿಯಾಗಿದೆ. ನಮ ನಕ್ಸ್ಟ್ ಇನ್‌ಸ್ಟಾಲೆಮೆಂಟ್ ಏನಿದೆ ಹನ್ನೆರಡೂವರೆ ಕೋಟಿ ರೂ.ಗಳು ಕ್ಲೆಮ್ಸ್ ಸೆಟ್ಲ್ ಆದ ತಕ್ಕಣ ಅದನ್ನು ಜಿಐ ಯವರಿಗೆ ಕೊಡುತ್ತೇವೆ. ಆದರೆ ಕ್ರಾಪ್ ಇನ್‌ಶ್ಯೂರೆನ್ಸ್ ಕೊಡಲಿಲ್ಲ, 103 ಕೋಟಿ ರೂ.ಗಳು ನಮ್ಮ ಖಜಾನೆಯಿಂದ ಹೋಗಿರುವುದಕ್ಕೆ ನಾವು ರಿಸೀತಿಯನ್ನು ತೋರಿಸಲೇ? ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ನಾವು ಕಂಟಿನ್ಯೂ ಮಾಡುತ್ತೇವೆ. ನಾನು ಕಳೆದ ಬಜೆಟ್‌ನಲ್ಲಿ ವೆವರ್ ಆಫ್ ಎಲೆಕ್ಟ್ರಿಸಿಟಿ ಡ್ಯನ್ (ವಿದ್ಯುಚ್ಛಕ್ತಿ ಬಾಕಿ) ಅದರ ಬಗ್ಗೆ ಒಂದು ದೊಡ್ಡ ಘೋಷಣೆಯನ್ನು ಮಾಡಿದ್ದೆ ಅದನ್ನು ತಾವೆಲ್ಲರೂ ಸ್ವಾಗತಿಸಿರುತ್ತೀರಿ.

ಶ್ರೀ ಕೆ. ಶ್ರೀನಿವಾದಗೌಡ ಕುಡುವನಹಳ್ಳಿ : ನೀವು ಬಾಕಿ ಮನ್ನಾ ಕೊಟ್ಟಿದ್ದೀರಿ, ಅದನ್ನು ಈ ಡಿಸೆಂಬರ್‌ವರೆಗಾದರೂ ಕೊಟ್ಟುಬಿಟ್ಟರೆ ರೈತರಿಗೆ ಇನ್ನೂ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಏಕೆಂದರೆ, ಒಂದೆ ಸಲಕ್ಕೆ ನಾವು ಮುಂದಿನ ಡಿಸೆಂಬರ್ ತಿಂಗಳವರೆಗೆ ಕೊಟ್ಟಿದ್ದೇವೆಂದು ಹೇಳುವುದಕ್ಕೆ ಬರುವುದಿಲ್ಲ. ಹೇಗೆ ಸಮಸ್ಯೆಗಳು

ಉದ್ಭವವಾಗುತ್ತವೆ ಆಗ ತಕ್ಷಣ ಒಂದು ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಒಂದು ಪ್ರಯತ್ನ, ಇದು ಸಣ್ಣ ಪ್ರಯತ್ನವಷ್ಟೆ, ನಾನು ದೊಡ್ಡ ಪ್ರಯತ್ನವೆಂದು ಹೇಳುತ್ತಿಲ್ಲ. 600 ಕೋಟಿ ರೂ.ಗಳ ಮನ್ನಾ ಮಾಡಿದ್ದೇವೆಲ್ಲಾ ಇದು ದೊಡ್ಡ ಪ್ರಯತ್ನವೆಂದು ನಾವೇನೂ ಹೇಳುವುದಿಲ್ಲ, ಆದರೆ ಜನಗಳು ಹೇಳಿದರೆ ಅದಕ್ಕೆ ನಾವು ಜವಾಬ್ದಾರರಲ್ಲ.

ಶ್ರೀ ಆರಗ ಜ್ಞಾನೇಂದ್ರ : ಪ್ರಾಮಾಣಿಕವಾಗಿ ಬಿಲ್‌ನ್ನು ಕಟ್ಟಿದವರಿಗೆ ಒಂದು ಕನ್‌ಸಿಷನ್ ಮಾಡಿ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ವಿಪರ್ಯಾಸವಿದೆ. ಮಲೆನಾಡು ಭಾಗದಲ್ಲಿ ಎಲ್ಲರೂ ಬಿಲ್‌ನ್ನು ಕಟ್ಟಿದ್ದೀರಿ, ಬಯಲಿಸೀಮೆಯವರು ಕಟ್ಟಲಿಲ್ಲ, ಮಲೆನಾಡು ಭಾಗದವರು ಕೇಳುತ್ತಾರೆ ನಮಗೆ ವಾಪಸ್ಸು ಕೊಡಿಸಿ ನಮಗೆ ವಜಾ ಮಾಡಿ ಎಂದು ಕೇಳುತ್ತಿದ್ದಾರೆ. ಆದರೆ ನೀವು ಕೇಳತಕ್ಕಂಥದ್ದರಲ್ಲಿ ಬಗ್ಗೆ ಇದನ್ನು ಅಶ್ಯೂರೆನ್ಸ್ ಎಂದು ಹೇಳಿ ಅಶ್ಯೂರೆನ್ಸ್ ಕಮಿಟಿಗೆ ಹಾಕಿಬಿಡಿ ಬೇಡಿ, ನಂತರ ಕೆಪಿಟಿಸಿಎಲ್ ಮ್ಯಾನೇಜಿಂಗ್ ಡೆರೆಕ್ಟರ್‌ರವರನ್ನು ಕಮಿಟಿಗೆ ಕರೆಸಿ ಕಟಕಟೆಯಲ್ಲಿ ನಿಲ್ಲಿಸಿ ನಿಮ್ಮ ಚೀಫ್ ಮಿನಿಸ್ಟರ್ ಏನು ಭರವಸೆ ಕೊಟ್ಟಿದ್ದರು ಅದರಂತೆ ಮಾಡಿ ಎಂದು ಹೇಳಬಾರದು, ಇದನ್ನು ಹೇಗೆ ಪರಿಶೀಲನೆ ಮಾಡಬೇಕು. ಏಕೆ ಹೀಗಾಯಿತು ಎಂದು.

ಶ್ರೀ ಆರಗ ಜ್ಞಾನೇಂದ್ರ : ಇದನ್ನು ಬಗೆಹರಿಸದಿದ್ದರೆ ಯಾರೂ ಕೂಡ ಪ್ರಾಮಾಣಿಕವಾಗಿ ಬಿಲ್ ಕಟ್ಟುವುದಿಲ್ಲ. ಪ್ರಾಮಾಣಿಕವಾಗಿ ಬಿಲ್ ಕಟ್ಟುವವರಿಗೆ ಇದರಿಂದ ದೊಡ್ಡ ಹೊಡೆತ ಬೀಳುವುದರ ಜೊತೆಗೆ ಅವರೂ ಕೂಡ ಮಾನಸಿಕವಾಗಿ ಅವರು ವ್ಯತ್ಯಾಸವಾಗುತ್ತಾರೆ. ಇದರಿಂದ ಡಿಪಾರ್ಟ್‌ಮೆಂಟ್ ಹಾಳಾಗುತ್ತದೆ ಅಷ್ಟೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಇದನ್ನು ಮುಂದುವರೆಸಿ, ಮತ್ತು ಇವರೆಲ್ಲರಿಗೂ ಕೂಡ ನಾವು ಒಂದು ಕಾಗದವನ್ನು ಕೊಟ್ಟು ಕಳುಹಿಸುತ್ತೇವೆ. ಇಷ್ಟು ದಿವಸ ನಾವು ಮಾಡುತ್ತಿರುವ ತಪ್ಪು ಏನೆಂದರೆ, ಇಲ್ಲಿಂದಲ್ಲೇ ನಾವು ತುಂಬಿಸಿಬಿಟ್ಟು ಇಷ್ಟು ಕೊಟ್ಟಿದ್ದೇವೆಂದು ನಾವು ನಿಮಗೆ ಬಜೆಟ್ ಮೂಲಕ ಹೇಳುತ್ತಿದ್ದೆವು. ಈಗ 600 ಕೋಟಿ ರೂ.ಗಳಿಗೆ ಯಾರೂ ಈ ರಿಯಾಯಿತಿಗೆ ಅರ್ಹರಾಗಿದ್ದಾರೆ ಅವರೆಲ್ಲರಿಗೂ ವೈಯಕ್ತಿಕವಾಗಿ ಕೆಪಿಟಿಸಿಎಲ್ ಸಂಸ್ಥೆಯವರು ನಿಮ್ಮ ಪರವಾಗಿ ಸರ್ಕಾರದವರು ನಮ್ಮ ಸಂಸ್ಥೆಗೆ ಇಷ್ಟು ಹಣವನ್ನು ಜಮಾ ಮಾಡಿದ್ದಾರೆ ಆ ಕಾರಣಕ್ಕಾಗಿ ನೀವು ಇಲ್ಲಿಯವರೆಗೆ ಯಾವ ಬಾಕಿಯನ್ನು ಕೊಡಬೇಕಾಗಿರುವುದಿಲ್ಲ ಎನ್ನುವಂಥ ತಿಳುವಳಿಕೆಯನ್ನು ನಾವು ಅವರಿಗೆ ಕೊಡುತ್ತಿದ್ದೇವೆ. ನಾವು ಮತ್ತು ನೀವುಗಳು ಜನರನ್ನು ಜಾಗೃತರನ್ನಾಗಿ ಮಾಡಬೇಕು; ಇಲ್ಲದೆ ಇದ್ದರೆ ಸರ್ಕಾರ ಇರುವುದೇ ಕೊಡಲಿಕ್ಕೆ, ನಾವು ಇರುವುದೇ ಕಟ್ಟದೆ ಇರುವುದಕ್ಕೆ ಎನ್ನುವುದಾದರೆ ಇದು ಯಾವುದೇ ಸರ್ಕಾರಕ್ಕೆ ಒಳ್ಳೆಯದಲ್ಲ. ಸ್ವಂತ ವಿದ್ಯುತ್‌ಪರಿವರ್ತಿತ ನಮ್ಮ ಟ್ರಾನ್ಸ್‌ಫಾರ್ಮರ್, ಅವುಗಳನ್ನು ಅವರು ಅಳವಡಿಸಿಕೊಂಡರೆ ಅದರ ಪ್ರಯೋಜನ ಪಡೆಯಲು ರೈತರು ನಿಡಬೇಕಾಗಿದ್ದ 35 ಸಾವಿರ ರೂಪಾಯಿಗಳಿಗೆ ಬದಲಾಗಿ ಈಗ 25 ಸಾವಿರ ರೂಪಾಯಿಗಳನ್ನು ನೀಡಿ ಸೌಲಭ್ಯವನ್ನು ಪಡೆಯಲು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಏಕೆಂದರೆ, ನಮ್ಮ ಟ್ರಾನ್ಸ್‌ಫಾರ್ಮರ್‌ನ್ನು ನಾವು ಹಾಕಿಕೊಂಡರೆ ಬಂದಷ್ಟು ಹೊತ್ತು ಗುಣಮಟ್ಟದ ವಿದ್ಯುತ್ ಬರುವುದಕ್ಕೆ ಆ ಟ್ರಾನ್ಸ್‌ಫಾರ್ಮರ್ ಸಹಾಯಕವಾಗುತ್ತದೆ ಎನ್ನತಕ್ಕಂಥದ್ದು ಫೀಲ್ಡ್ ಎಕ್ಸ್‌ಪರಿಮೆಂಟ್ಸ್‌ನ್ನು ನಾವು ಮಾಡಿದ ಮೇಲೆ ನಮಗೆ ಗೋಚರವಾಗಿರತಕ್ಕಂತಹ ವಿಚಾರ. ಇದರ ಸಂಪೂರ್ಣವಾದ ಪ್ರಯೋಜನವನ್ನು ನಮ್ಮ ರೈತಾಪಿ ಜನಗಳು, ಒಕ್ಕಲುತನವನ್ನು ಮಾಡತಕ್ಕಂತಹವರು ಪಡೆದುಕೊಳ್ಳಬೇಕೆಂದು ಅವರಿಗೆ ಸೂಚನೆಯನ್ನು ಮಾಡುತ್ತೇನೆ. ಮುಂದೆ

12.40 ಪಿ.ಎಂ

ನಾನು ಮಂಡ್ಯದಲ್ಲಿ ಸರ್ಕಾರಿ ನೌಕರರ ಸಮ್ಮೇಳನದ ಸಭೆಗೆ ಹೋಗಿದ್ದೆ. ಆಗ ನಾನು ಅಲ್ಲಿ ಘೋಷಣೆಯನ್ನು ಮಾಡಿದ್ದೆ, ಆ ಘೋಷಣೆಯ ಪ್ರಕಾರ ನಾವು ಈಗ ಒಂದು ವೇತನ ಆಯೋಗವನ್ನು ಮಾಡುತ್ತಿದ್ದೇವೆ. ಜಸ್ಟೀಸ್ ಚಿನ್ನಪ್ಪ ಅವರನ್ನು ಓನ್ ಮ್ಯಾನ್ ಕಮಿಷನ್ ಆಗಿ ನಾವು ನೇಮಕ ಮಾಡುತ್ತಿದ್ದೇವೆ. ಹಾಗೆಯೇ ಪೆನ್‌ಷನ್ ಕಮ್ಯೂಟೇಷನ್ ಎನ್ನತಕ್ಕಂತಹ ಹೊಸ ಒಂದು ತುರ್ತು ವಿಚಾರವನ್ನು ನಾವು ಘೋಷಣೆಯನ್ನು ಮಾಡಿದ್ದೆವು. ಆದರೆ ಅವರು ಮಾಡಿರತಕ್ಕಂತಹ ರೆಪ್ರಸೆಂಟೇಷನ್ಸ್ ಆಧಾರದ ಮೇಲೆ ಏನು ಆ ಒಂದು ಜಿ.ಓ. ಇತ್ತು ಆ ಗೌರ್ನಮೆಂಟ್ ಆರ್ಡರನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಈ ಎರಡು ಕ್ರಮಗಳಿಂದ ನಮ್ಮ ಕರ್ನಾಟಕ ರಾಜ್ಯದ ಮೌಲ್ಯ ಏನಿದೆ, ಇದು ಎಫೆಕ್ಟೀವಾಗಿ ನಡೆಸುತ್ತದೆ, ಇದು ರೆಸ್ಪಾನ್ಸಿಬಲ್ ಆಗಿ ನಡೆಯುತ್ತದೆ, ಅನ್ನತಕ್ಕಂಥದ್ದು ಏನು ಒಟ್ಟಾರೆ ಇಂಪ್ರೆಷನ್‌ಗೆ ಕೊಂಚಮಟ್ಟಿಗೆ ಕಳಂಕವನ್ನು ತರಬಹುದು, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಯಾವುದೇ ಸರ್ಕಾರ ಸರ್ಕಾರಿ ಕಾರ್ಯಕರ್ತರನ್ನು, ಎಂಪ್ಲಾಯಿಸ್‌ನ್ನು we cannot take them for granted. ಅವರ ಸಮಸ್ಯೆಗಳಿಗೂ ಕೂಡ ನಾವು ಸ್ಪಂದಿಸಬೇಕಾಗುತ್ತದೆ. ಕೇಂದ್ರಸರ್ಕಾರ ಏನು ಮಾಡಿದೆ ಎಂದರೆ ಅಲ್ಲಿನ ಸರ್ಕಾರಿ ನೌಕರರ ವೇತನವನ್ನು ಮರ್ಜರ್ ಮಾಡಿದ್ದಾರೆ. ಆದರೆ ಗುರಿ ಒಂದೇ, ದೃಷ್ಟಿ ಒಂದೇ ಏಕೆಂದರೆ ಕೇಂದ್ರ ಸರ್ಕಾರಿ ನೌಕರರಿಗೆ ಅನುಕೂಲವನ್ನು ಮಾಡಬೇಕು. ಹಾಗೆಯೇ ನಮ್ಮ ಕರ್ನಾಟಕ ಸರ್ಕಾರದ ಎಂಪ್ಲಾಯಿಸ್‌ಗೆ ನಾವು ಅನುಕೂಲವನ್ನು ಮಾಡಿಕೊಡಬೇಕೆಂಬುದು ಒಂದೇ. ರಾಜಸ್ವ ಸಂಗ್ರಹದಲ್ಲಿ ನಾವು ಗಮನಾರ್ಹವಾದಂತಹ ಪ್ರಗತಿಯನ್ನು ಮಾಡಿದ್ದೇವೆ. ಈಗಾಗಲೇ ಇದರ ಬಗ್ಗೆ ನಾನು ನನ್ನ ಬಜೆಟ್ ಭಾಷಣದಲ್ಲಿ ತಿಳಿದ್ದೇನೆಂದು ಕಾಣುತ್ತದೆ. ನಮ್ಮ ವಾಣಿಜ್ಯ ತೆರಿಗೆ ಸಂಗ್ರಹ 21 ಪರ್ಸೆಂಟ್, ಇದು ಇಡೀ ರಾಷ್ಟ್ರದಲ್ಲಿಯೇ ಅತ್ಯಂತ ಹೆಚ್ಚಿನ ವೃದ್ಧಿ. ಮುಂದಿನ ವರ್ಷಗಳಲ್ಲಿ 25 ರಷ್ಟು ಸಾಧಿಸಬೇಕೆಂಬ ಟಾರ್ಗೆಟ್‌ನ್ನು ನಾವು ಇಟ್ಟುಕೊಂಡಿದ್ದೇವೆ. ಮಾನ್ಯ ಆರಗಜ್ಞಾನೇಂದ್ರರವರು ಅಬ್ಕಾರಿ ಆದಾಯದ ಬಗ್ಗೆ ಪ್ರಸ್ತಾಪ ಮಾಡಿದರು ಅದನ್ನು ಅವರು ಏತಕ್ಕಾಗಿ ಎತ್ತಿದರೋ ನನಗೆ ಗೊತ್ತಿಲ್ಲ ಏನೋ ಮಾಡಿದ್ದೀರಿ, ಇದರಲ್ಲಿ ಏನೋ 2–3 ಕೋಟಿ ರೂಪಾಯಿಗಳನ್ನು ಮಾಡಿಕೊಂಡಿದ್ದೀರಿ ರಾಜ್ಯಸರ್ಕಾರದ ಸಂಪನ್ಮೂಲಕ್ಕೆ ಅವರಿಗೆ ಇಲ್ಲೆ ಕುಳಿತು ಅನುಭವವಿಲ್ಲ. ಅಲ್ಲಿರುವವರಿಗೆ ಅನುಭವ ಇದೆ, 300ಕೋಟಿ ರೂಪಾಯಿಗಳನ್ನು ಕೇವಲ 6 ತಿಂಗಳಲ್ಲಿ ಹೊಸ ತೆರಿಗೆಗಳನ್ನು ಜನರ ಮೇಲೆ ಹಾಕದೆ ನಮ್ಮ ಟ್ಯಾಕ್ಸ್ ರೇಟನ್ನು 50 ಪರ್ಸೆಂಟ್‌ಗೆ ಇಳಿಸಿ 300 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿರತಕ್ಕಂಹ ನಿದರ್ಶನ ಕರ್ನಾಟಕ ರಾಜ್ಯದಲ್ಲಿ 55 ವರ್ಷದಲ್ಲಿ ಇದ್ದರೆ ನಾನು ಇವತ್ತು ಈ ಸ್ಥಾನವನ್ನು ಬಿಟ್ಟುಬಿಡುತ್ತೇನೆ. ಇದು ಸಾಮಾನ್ಯ ಸುಧಾರಣೆಯಲ್ಲ; ನಾವು ಯಾರ ಮೇಲೆ ಸುಧಾರಣೆಯನ್ನು ತಂದಿರುವುದು? ಎರಡು ಲಕ್ಷ ಕೇಸುಗಳನ್ನು ಮಾರಿ ಮಾರಾಟಗಾರರು ಇಷ್ಟೇ ಸಾರ್ ಮಾರಿರುವುದು ಸುಂಕ ತೆಗೆದುಕೊಳ್ಳಿ ಎಂದು ಕೊಡುತ್ತಿದ್ದಂತಹ ಕಾಲ ಇತ್ತು. ಈಗ ಅದನ್ನು ಸರ್ಕಾರ ವಹಿಸಿಕೊಂಡ ಮೇಲೆ, ಮಾನ್ಯ ಬೆಲ್ಲದ್‌ರವರೇ; ತಾವು ವ್ಯಾಪಾರ ಮಾಡಿರುವುದರಿಂದ ನಿಮಗೆ ಅಂಕಿಅಂಶಗಳು ಚೆನ್ನಾಗಿ ಗೊತ್ತಿರಬಹುದು. ಸರ್ಕಾರ ಈ ತೀರ್ಮಾನವನ್ನು ತೆಗೆದುಕೊಂಡ ಮೇಲೆ 8 1\2 ಲಕ್ಷ ಕೇಸುಗಳು ಬಿಕಾರಿಯಾಗುವುದು ಪ್ರಾರಂಭವಾಯಿತಲ್ಲಾ? ಈ ಮಧ್ಯಂತರ ವರ್ಷಗಳಲ್ಲಿ ಇದು ಎಲ್ಲಾ ಏನಾಗುತ್ತಿತ್ತು? ಈ ಹಣ ಎಲ್ಲಿ ಹೋಗುತ್ತಿತ್ತು, ಅದು ಯಾರಿಗೆ ಯೋಗುತ್ತಿತ್ತು? ಇದು ಎಷ್ಟು ಕುಳಗಳಿಗೆ ಹೋಗುತ್ತಿತ್ತು, ಹಿಂದೆ ಹಲವಾರು ಸರ್ಕಾರಗಳು ಈ ಕುಳಗಳನ್ನು ಏದುರು ಹಾಕಿಕೊಂಡಿದ್ದರಿಂದ ತಮ್ಮ ಸ್ಥಾನವನ್ನು ಕಳೆದುಕೊಳ್ಳಬೇಕಾಗಿ ಬಂತು. ಕರ್ನಾಟಕ ರಾಜ್ಯದ

ಇತಿಹಾಸವನ್ನು ಯಾರು ಅಭ್ಯಾಸ ಮಾಡಿದ್ದಾರೆ ಇದು ಅರ್ಥವಾಗುತ್ತದೆ. ಯಾರು ಸ್ಥಾನವನ್ನು ಕಳೆದುಕೊಂಡರು ಹಾಗೆ ಎಂಬುದು ಗೊತ್ತಾಗುತ್ತದೆ. ಆದರೆ ನಾವು ಅವರಿಗೂ ಕೂಡ ಅನ್ಯಾಯವನ್ನು ಮಾಡಿಲ್ಲ. ನಾವು ಮಾಡಿರತಕ್ಕಂಥದ್ದು ಧರ್ಮ ಸೂಕ್ಷ್ಮವಾದಂತಹ ನಿರ್ಧಾರ. ನೇರವಾಗಿ ವ್ಯಾಪಾರ ಮಾಡಿ, ಏಕೆಂದರೆ ವ್ಯಾಪಾರಸ್ಥರಿಗೂ ಕೂಡ ಒಂದು ಧರ್ಮವಿರುತ್ತದೆ. ಆ ವ್ಯಾಪಾರದ ಧರ್ಮದ ಚೌಕಟ್ಟಿನಲ್ಲಿ ನೀವು ಎಷ್ಟು ಮಾರಿದರೂಕೂಡ ಅದಕ್ಕೆ ನೀವು ಏನು ಸುಂಕವನ್ನು ಕೊಡಬೇಕೋ, ಅದನ್ನು ಕೊಟ್ಟು ನೀವು ಮಾಲನ್ನು ತೆಗೆದುಕೊಂಡು ಹೋಗಿ. ಇಲ್ಲಿ Uncertainty- ನೇ ಇಲ್ಲ. ನಮ್ಮ ವಿರೋಧಪಕ್ಷದ ನಾಯಕರಿಗೆ ಬಹಳ ಪ್ರಿಯವಾದಂತಹ ವಿಚಾರ ಏನೆಂದರೆ, ನೀವು ಯಾವುದೋ ಮುರಾಜಿಗೆ ಸಿಕ್ಕಿಬಿಟ್ಟು ಅರಿಯರ್ಸ್‌ನ್ನು ವಸೂಲಿ ಮಾಡಲಿಲ್ಲ ಎಂದು ಹೇಳಿದರು. 1947-48, 49-50 ನೇ ಇಸವಿಗಳಲ್ಲಿ ಹರಾಜು ಮಡಿ ಅಮೇಲೆ ಡ್ರೈವರ್‌ಗಳ ಹೆಸರಿನಲ್ಲಿ, ಅಡಿಕೆಯವರ ಹೆಸರಿನಲ್ಲಿ ಹರಾಜನ್ನು ನಡೆಸಿಕೊಂಡು ಅಡಿಗೆಯವನ್ನು ಅಡ್ರಸ್ ಇಲ್ಲ, ಡ್ರೈವರ್‌ಗೆ ಗೆರಾಜ್‌ಇಲ್ಲ ಹೀಗೆ ಆಗಿದೆ. ಇದು ಆಂಧ್ರಪ್ರದೇಶದಲ್ಲಿ ಓಟರ್ ಲಿಸ್ಟ್ ಮಾಡಿದ ಹಾಗೆ. ನನಗೆ ಮೊನ್ನೆ ಎಲೆಕ್ಷನ್ ಕಮೀಷನರ್‌ರವರು ಹೇಳಿದರು, ಒಂದು ಮನೆಯಲ್ಲಿ 600 ಓಟುಗಳನ್ನು ದಾಖಲೆ ಮಾಡಿಸಿದ್ದಾರೆ. ಇನ್ನೊಂದು ಮನೆಯಲ್ಲಿ ಹಟ್‌ಮೆಂಟ್ ಅಂತೆ ಅಲ್ಲಿ 300 ಓಟುಗಳನ್ನು ದಾಖಲೆ ಮಾಡಿಸಿದ್ದಾರೆ. ಅದಕ್ಕಾಗಿ ಅಲ್ಲಿ 79 ಲಕ್ಷ ಓಟುಗಳನ್ನು ಹೊಡೆದುಹಾಕಿದ್ದಾರೆ. ಅವರು ನನಗೆ ಹೇಳಿದರು, ನಿಮ್ಮ ರಾಜ್ಯದಲ್ಲೂ ಒಂದೆರಡು ಕಡೆ ಹೀಗೆ ಆಗಿದೆ, ಅದಕ್ಕೆ ನಾನು ಹೇಳಿದೆ ಎರಡು ಕಡೆ ಬೇಡ ಇಡೀ ರಾಜ್ಯದಾದ್ಯಂತ ನೀವು ಪರಿವೀಕ್ಷಣೆಯನ್ನು ಮಾಡಿ ಅಲ್ಲಿ ಎಲ್ಲಾ ಕಡೆಗಳಲ್ಲೂ ನಿಮ್ಮ ಅಫೀಸರ್ಸ್‌ನ್ನು ಕಳುಹಿಸಿ. ಈಗ ಉತ್ತರಹಳ್ಳಿಯಲ್ಲಿ ಜಾಸ್ತಿಯಾಗಿದೆ, ಅಲ್ಲಿ ಮೊದಲೇ ಜಾಸ್ತಿಯಾಗಿತ್ತು, ಆದರೆ ಇನ್‌ಪ್ಲಕ್ಸ್ ಅಲ್ಲಿ ಜಾಸ್ತಿಯಾಗುತ್ತಿದೆ. ಬೆಂಗಳೂರು ನಾರ್ತ್ ಲೋಕಸಭಾ ಸದಸ್ಯರಾದ ಶ್ರೀ ಸಿ.ಕೆ.ಜಾಫರ್‌ಷರೀಫ್‌ರವರು ಹೇಳುತ್ತಿದ್ದರು, ಅವರ ಕ್ಷೇತ್ರದಲ್ಲಿ ಎರಡೂವರೆ ಲಕ್ಷ ಓಟರ್ಸ್‌ಗಳು ಜಾಸ್ತಿಯಾಗಿದೆ. ಅಥವಾ ಇನ್ನೂ ಜಾಸ್ತಿ ಇರಬಹುಸು, ಈಗ ಬೆಂಗಳೂರು ಸುತ್ತಮುತ್ತ ಇರತಕ್ಕಂತಹ ಜನಸಂಖ್ಯೆಯು ಜಾಸ್ತಿಯಾಗುತ್ತಿದೆ, ಹೊಸಬರುಗಳು ಅಲ್ಲಿಗೆ ಬಂದು ಸೆಟಲ್ ಆಗುತ್ತಿದ್ದಾರೆ. ಆದ್ದರಿಂದ ವರ್ತೂರು, ಯಲಹಂಕ, ಈಗ ಬೆಂಗಳೂರು ವಿಮಾನನಿಲ್ದಾಣದ ಕೆಲಸ ಬೇರೆ ಪ್ರಾರಂಭವಾಗಿದೆ, ಇನ್ನು ಆ ಭಾಗದಲ್ಲಿಯೂ ಕೂಡ ನೀವು ನೋಡುತ್ತಿರಿ. ಆದ್ದರಿಂದ ಪೂರ್ತಿ ರಾಜ್ಯದ ಸಮೀಕ್ಷೆಯನ್ನು ಮಾಡಿ, ಏಕೆಂದರೆ ಫ್ರೀ ಅಂಡ್ ಫೇರ್ ಎಲೆಕ್ಷನ್ಸ್ ನಮ್ಮ ಜನತಂತ್ರದ ಒಟ್ಟಾರೆ ವಿಶ್ವಾಸವನ್ನು ವ್ಯಕ್ತಪಡಿಸತಕ್ಕಂಥದ್ದು ಆದರೆ ಎಲೆಕ್ಟೋರಲ್ ರೋಲ್ಸ್ ಬಹಳ ಮುಕ್ತವಾಗಿರಬೇಕು.

ಶ್ರೀ ಪ್ರಕಾಶ್ ಖಂಡ್ರೆ : ಭಾಲ್ಕಿಯಲ್ಲಿ ಒಂದು ಮನೆಯಲ್ಲಿ 300 ಓಟುಗಳಿವೆ. ಇಂಜಿನಿಯರಿಂಗ್ ಕಾಲೇಜಿನಲ್ಲಿ ನೇಪಾಳ್ ಓಟರ್ಸ್‌ಗಳು ಅಲ್ಲಿ ಓಟು ಮಾಡಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಇದನ್ನು ತಾವು ತಕ್ಷಣ ಅಬ್ಜಕ್ಷನ್ಸ್ ಹಾಕಿ ತೆಗೆಸಿ ಹಾಕಬೇಕಾಗಿತ್ತು.

ಶ್ರೀ ಪ್ರಕಾಶ್ ಖಂಡ್ರೆ : ನಾವು ಅಬ್ಜಕ್ಷನ್ ಕೊಟ್ಟರೂ ಕೂಡ ಅಲ್ಲಿಂದ ಕ್ಲಿಯರೆನ್ಸ್ ತೆಗೆದುಕೊಂಡು ಮಾಡಬೇಕಾಗಿತ್ತು, ಆದರೂ ಕೂಡ ಮಾಡುತ್ತಿಲ್ಲ. ನಾನು ಬಹಳಷ್ಟು ಸಲ ಸಭೆಯಲ್ಲಿ ಚರ್ಚೆ ಮಾಡಿದ್ದೇನೆ.

ಶ್ರೀ ವಿ.ಸೋಮಣ್ಣ : ಏನಾಯಿತೆಂದರೆ ಹಾಸ್ಟಲ್‌ಗಳಲ್ಲಿ ಓದುತ್ತಿರುವಂತಹ ಮಕ್ಕಳು ಯಾರಿರುತ್ತಾರೆ ಎನ್ಯುಮರೇಷನ್ ಮಾಡುವಂತಹ ಸಂದರ್ಭದಲ್ಲಿ ಅವರು ಅಲ್ಲಿ ಬರೆಸಿರುತ್ತಾರೆ. ಇವತ್ತು ಎಲ್ಲಾ ಕಡೆಗಳಲ್ಲಿ ಹಾಸ್ಟಲ್‌ಗಳಿವೆ 100 ರಿಂದ 500 ಜನರು ಇರುತ್ತಾರೆ ಇದು ಸರ್ವೆ ಸಾಮಾನ್ಯವಾಗಿರುತ್ತದೆ.

ಹಾಸ್ಟಲ್‌ಗಳನ್ನು ಹೊರತುಪಡಿಸಿ ಮನೆಗಳಾದರೆ ಕಷ್ಟವಾಗುತ್ತದೆ. ಇವತ್ತು ನಮ್ಮಲ್ಲೂ ಕೂಡ ಹಾಸ್ಟಲ್‌ಗಳಿವೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ನಾನು ಯಾವ ವಿಚಾರಕ್ಕೆ ಹೇಳಿದೆ ಎಂದರೆ ಖಂಡ್ರೆಯವರೆ, ವೋಟರ್ಸ್ ಲಿಸ್ಟ್ ವಿಚಾರ ಮಾಡುವ ಬಗ್ಗೆ ಹೇಳಿದೆ. ನೀವು ಪಿಡಬ್ಲ್ಯೂಡಿ ಬಿಲ್ ಬಾಕಿ ಇದೆ ಎಂದು ಹೇಳಿದಿರಿ. ಇರಿಗೇಷನ್ ಬಿಲ್ ಬಾಕಿ ಇದೆ, ಸಣ್ಣ ಕೈಗಾರಿಕೆಗಳ ಸಬ್ಸಿಡಿ ಕೊಡಲಿಲ್ಲ ಅಂತ ಇವುಗಳನ್ನೆಲ್ಲಾ ತಾವು ಹೇಳಿದ್ದೀರಿ. ನಾನು ಅದನ್ನು ಒಪ್ಪುತ್ತೇನೆ; ಕೊಡಲಿಕ್ಕೆ ಸಾಧ್ಯವಾಗಲಿಲ್ಲ, ನಿಧಾನವಾಗಿದೆ. ಕೆಲವು ಬಹಳ ದಿವಸಗಳಿಂದ ಹಾಗೆ ನಿಂತು ಹೋಗಿದೆ, ಅದಕ್ಕೆ ವಿಶೇಷ ಗಮನವನ್ನು ಹರಿಸಿದ್ದೇವೆ. ಈ ವರ್ಷ ನಾವು 629 ಕೋಟಿ ರೂಪಾಯಿಗಳ ಮೌಲ್ಯದ ಬಿಲ್ಲುಗಳನ್ನು ಚುಕ್ತಾ ಮಾಡಿದ್ದೇವೆ. ಈ ಬಗ್ಗೆ ನಾನು ಸದನದಲ್ಲಿ ಈ ಹಿಂದೆಯೇ ಹೇಳಿದ್ದೆನು, ಈ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡಲಿಕ್ಕೆ ನಾವು ವಿಶೇಷವಾದಂತಹ ಬಾಂಡ್‌ಗಳನ್ನು ಕೆ.ಎಸ್.ಎಫ್.ಸಿ. ಮೂಲಕ ರೈಸ್ ಮಾಡಿ ನಾವು ಅವರ ಸಬ್ಸಿಡಿಯನ್ನು ವಿತರಿಸುತ್ತೇವೆಂದು ಹೇಳಿದ್ದೆವು. ಈಗ ಅವರ ಮರ್ಚೆಂಟ್ ಬ್ಯಾಂಕರ್‌ಗಳ ನೇಮಕಾತಿ, ಯಾವುದಕ್ಕೆಂದರೆ ಈ ಹಣಕಾಸು ಬಾಂಡ್‌ಗಳು, ಡಿಬೆಂಚರುಗಳು, ಖಾಸಗಿ ಸಂಸ್ಥೆಗಳು ಮಾಡಿ, ಅದನ್ನು ರೈಸ್ ಮಾಡಲಿಕ್ಕೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಕರ್ನಾಟಕದಲ್ಲಿ ನಮ್ಮ ಒಂದು ಹೆಗ್ಗಳಿಕೆ ಏನೆಂದರೆ ಬಾಂಡ್‌ಗಳನ್ನು ನಾವು ಏನು float ಮಾಡುತ್ತೇವೆ, ಅದು ಬಹಳ ಸುಲಭವಾಗಿ ಸಬ್‌ಸ್ಕ್ರೈಬ್ ಆಗುತ್ತದೆ ಇದು ಇನ್ನೊಂದು ಸೂಚನೆ ಏನೆಂದರೆ, ಕರ್ನಾಟಕ ಸರ್ಕಾರದ ಹಣಕಾಸು ಪರಿಸ್ಥಿತಿ ಬಗ್ಗೆ ಯಾರಿಗೂ ಅಪನಂಬಿಕೆ ಇಲ್ಲ. ನಾವು ಚಿಟ್‌ಫಂಡ್ ತರಹ ಅಲ್ಲ, ಬಾಗಿಲು ಹಾಕಿಕೊಂಡು ಮುಂದಿನಲೂರಿಗೆ ಹೋಗಲಿಕ್ಕೆ. ಯಾವುದೋ ಒಂದು ಲಾರ್ಡ್ ಕೃಷ್ಣ ಬ್ಯಾಂಕ್ ಎಂಬುದಿತ್ತು ಆದರೆ ಅದರ ಅಡ್ರೆಸ್ ನಾಪತ್ತೆ ಇಲ್ಲಿ ಹಾಗೆ ಆಗುವುದಿಲ್ಲ. KSFC has a reputation. ಆದರೆ ಈಗ ಕಷ್ಟದಲ್ಲಿದೆ. ಕಷ್ಟ ಏಕಿದೆಯೆಂದರೆ, There is a slump, competition has become acute.-ನಿನ್ನೆ ತಾನೆ World Economic Forum ನವರು ಅಧ್ಯಕ್ಷರು ಬಂದಿದ್ದರು, ಅವರು ಇಂಡಿಯಾ ದೇಶಕ್ಕೆ 27 ಸಾರಿ ಬಂದಿದ್ದಾರಂತೆ. ಈಗ ಮೊಟ್ಟ ಮೊದಲನೇ ಸಾರಿ ಬೆಂಗಳೂರಿಗೆ ಬರುತ್ತಿದ್ದೇನೆ. ಇಲ್ಲಿ ನೋಡಿದ್ದೇನೆ, ನನಗೆ ಈಗ ಬಹಳ ವಿಶ್ವಾಸ ಬಂದಿದೆ. ಯಾವುದಕ್ಕೆಂದರೆ, ನಾನು ಇಡೀ ವಿಶ್ವವನ್ನೇ ತಿರುಗುತ್ತೇನೆ. ಆ ರೀತಿ ತಿರುಗುವಂತಹ ಕಾಲದಲ್ಲಿ ನಾನು ಎರಡು ರಾಷ್ಟ್ರಗಳನ್ನು ಗುರುತು ಮಾಡಿದ್ದೇನೆ, ಒಂದು ಚೈನಾ ದೇಶ, ಮತ್ತೊಂದು ಭಾರತ ದೇಶ. ಇಲ್ಲಿ ಬಂಡವಾಳ ಹೂಡಲಿಕ್ಕೆ ಯೋಗ್ಯವಾದ ಜಾಗಗಳು ಅಂತ ನಾನು ಬಹಳ ಧೈರ್ಯವಾಗಿ ಎಲ್ಲಾ ಕಡೆ ಹೇಳಬಲ್ಲೆ ಎಂದರು. ಅವರು ಕೇವಲ ಬೆಂಗಳೂರಿಗೆ ಬರಲಿಲ್ಲ, ಹೈದರಾಬಾದ್‌ಗೂ ಹೋಗಿದ್ದರು. ಬೆಂಗಳೂರಿನಿಂದ ಮುಂಬೈಗೆ, ಮುಂಬೈನಿಂದ ಪುಣೆಗೆ ಹೋಗಿ ನಂತರ ಅವರ ಊರಾದ ದಾವೂಸ್‌ಗೆ ಹೋದರು. ಅವರೇ ಪ್ರತಿವರ್ಷ ದಾವೂಸ್‌ನಲ್ಲಿ ನಡೆಯುವ ವಿಶ್ವಮೇಳವನ್ನು ಸ್ಟಾರ್ಟ್ ಮಾಡಿದಂಥ ಒಬ್ಬ ಜರ್ಮನ್. ಅವರ ಆ ಮಾತುಗಳನ್ನು ನಿನ್ನೆ ಸಾಯಂಕಾಲ,... ನಾವು ವಿರೋಧ ಪಕ್ಷದ ನಾಯಕರಾದ ಶ್ರೀ ಜನದೇಶ್ ಶೆಟ್ಟರ್ ಅವರನ್ನು ಕರೆದಿದ್ದೆವು, ಅವರಿರಲಿಲ್ಲ. ಮೇಲ್ಮನೆ ವಿರೋಧಪಕ್ಷದ ನಾಯಕರಾದ ಶ್ರೀ ಶಂಕರಮೂರ್ತಿ ಅವರು ಇದರಲ್ಲಿ ಭಾಗವಹಿಸಿದ್ದರು. ಇನ್ನೂ ಬಸವ ಕಲ್ಯಾಣದ ಬಗ್ಗೆ ಪ್ರಸ್ತಾಪ ನಡೆದಿದೆ. ಈಗಾಗಲೇ ನಾವು ಈ ಬಸವ ಕಲ್ಯಾಣ ಪ್ರಾಧಿಕಾರವನ್ನು ಬೆಳೆಸುವುದಕ್ಕೆ 16 ಕೋಟಿ ರೂಪಾಯಿಗಳನ್ನು ಕೆ.ಬಿ.ಜೆ.ಎನ್.ಎಲ್. ನಿಂದ ಕೊಟ್ಟಿದ್ದೇವೆ. ಅಲ್ಲಿ ಶ್ರೀ ಜಾಮ್‌ದಾರ್‌ರವರು ಯಾರು ಕೂಡಲ ಸಂಗಮ ಕ್ಷೇತ್ರವನ್ನು ನಿರ್ಮಾಣ ಮಾಡಿ ಹೆಸರು ಮಾಡಿದರು, ಅವರ ಕೈಯಲ್ಲೇ ಈ ಬಸವ

ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಮಾಡಿ ಅಂತ ಅವರಿಗೇ ಈ ಜವಾಬ್ದಾರಿಯನ್ನು ವಹಿಸಿ ಕೊಟ್ಟಿದ್ದೇವೆ. ಅವರು ಸಂತೋಷದಿಂದ ಈ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇದು ಗಮನಾರ್ಹವಾದಂಥದ್ದು. ಒಬ್ಬ ಅಧಿಕಾರಿ 7–8 ವರ್ಷಗಳ ಕಾಲ ಇದ್ದಾರೆ, ಕೆಲವರು ಒಂದೇ ಜಾಗದಲ್ಲಿ ಇರುವುದಿಲ್ಲ. ಏಕೆಂದರೆ ಕೆಲವು ಅಧಿಕಾರಿಗಳು ಮೂರು ವರ್ಷಗಳಾದರೆ ಬೇಜಾರಾಗಿ ಅವರಿಗೆ ಹೊಸ ಸ್ಥಳ ಬೇಕು. ಆದರೆ ಈ ಅಧಿಕಾರಿ ನಾನು ಬರುತ್ತೇನೆಂದು ಹೇಳಲಿಲ್ಲ, ಇದು ಮೆಚ್ಚುವಂಥ ವಿಚಾರ. ಅವರು ಕಳೆದ 8 ವರ್ಷಗಳಿಂದ ದೈಹಿಕವಾಗಿ ತಮ್ಮನ್ನು ತಾವೇ ದಂಡಿಸಿಕೊಂಡಿದ್ದಾರೆ ಹಾಗೂ ಮಾನಸಿಕವಾಗಿ ಬಹಳ ಹಿಂಸೆಯನ್ನು ಅನುಭವಿಸಿದ್ದಾರೆ. Babalkot rehabilitation- ಇವುಗಳೆಲ್ಲವನ್ನೂ ಕೂಡ ಸಮರ್ಪಕವಾಗಿ ಮಾಡುವಂಥ ಒಂದು ಮನೋಭೂಮಿಕೆಯನ್ನು ಅವರು ಪಡೆದಿದ್ದಾರೆ, ಅದಕಾರಣ ಈ ವಿಚಾರವನ್ನು ಕೂಡ ಅವರಿಗೆ ನಾವು ಕೊಟ್ಟಿದ್ದೇವೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡಲ ಸಂಗಮದಲ್ಲಿ ಈಗ ಬಸವನ ಬಾಗೇವಾಡಿಯನ್ನು ಸೇರಿಸಿದ್ದೀರಿ, ಅದರ ಜೊತೆಗೆ ಬಸವಣ್ಣನವರ ಜನ್ಮಸ್ಥಳವಾದ ಇಂಗಳೇಶ್ವರವನ್ನು ಸೇರಿಸಬೇಕು, ಅದರ ಅಭಿವೃದ್ಧಿಗೊಳಿಸುವುದರ ಜೊತೆಗೆ ಮುತ್ತಗಿ, ಮನಗೊಳಿ, ಉತ್ತಲದಿನ್ನಿ, ಕಾತರಕಿ ಹಾಗೂ ಕೋಲಾರ ಇವೆಲ್ಲಾ ಬಹಳ ಪ್ರಸಿದ್ಧವಾದ ಸ್ಥಳಗಳು, ಇವನ್ನೆಲ್ಲಾ ಕೂಡ ಪ್ರಾಧಿಕಾರದೊಂದಿಗೆ ಸೇರಿಸಿ ಅಭಿವೃದ್ಧಿಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಇದಕ್ಕೆ ಪ್ರಾಧಿಕಾರವೆಂದು ಹೆಸರು ಕೊಟ್ಟಿರುವುದೇ ಅಲ್ಲಿ ಯಾವ್ಯಾವ ಸ್ಥಳಗಳನ್ನು ಸೇರಿಸಿಕೊಳ್ಳತಕ್ಕದ್ದಕ್ಕೆ ಅದರ ಬಗ್ಗೆ ಅಲ್ಲಿನ ಜನ ಪ್ರತಿನಿಧಿಗಳು ಹಾಗೂ ಜಾಮ್‌ದಾರ್ ಅವರು ಕುಳಿತು ಮಾತನಾಡಿ ಆ ಸ್ಥಳಗಳನ್ನೆಲ್ಲಾ ಸೇರಿಸಿಕೊಳ್ಳಬಹುದು. ಇನ್ನು ಬಿಲ್‌ಗಳನ್ನು ಕ್ಲಿಯರ್ ಮಾಡತಕ್ಕದ್ದು, 2001–2002ರಲ್ಲಿ 960 ಕೋಟಿ ರೂಪಾಯಿಗಳ ಬಿಲ್‌ಗಳನ್ನು ನಾವು ಕ್ಲಿಯರ್ ಮಾಡಿದ್ದೇವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದೆ ಯಾವಾಗಲೂ ಕೂಡ ಕ್ಲಿಯರ್ ಮಾಡಿಲ್ಲ ಅಂತ ನಮ್ಮ ರೆಕಾರ್ಡ್‌ಗಳು ತೋರಿಸುತ್ತವೆ. ಕುಡಿಯುವ ನೀರಿನ ಬಗ್ಗೆ ನಾವು ಈಗ ಒಟ್ಟು 37 ಕೋಟಿ ರೂಪಾಯಿಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಎಲ್ಲಿ ನಮಗೆ ಕುಡಿಯುವ ನೀರಿನ ಅವಶ್ಯಕತೆ ಇದೆ ತೊಂದರೆ ಬರುತ್ತದೆ ಅಲ್ಲಿಂದ ತಕ್ಷಣ ಹೋಗಬೇಕು ಅಂತ ಹೇಳಿ. ಕುಡಿಯುವ ನೀರಗಾಗಿ ರಾಜ್ಯ ವಲಯದಲ್ಲಿ ಎಂ.ಎಸ್.ಪಿ. 70 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಖರ್ಚು ಮಾಡಲಾಗಿದೆ. ಕೇಂದ್ರ ವಲಯದಲ್ಲಿ ಎ.ಆರ್.ಡಬ್ಲ್ಯೂ.ಎಸ್.ಪಿ.ಗೆ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ದಿನಾಂಕ 7–2–2004 ರಂದು ಎಲ್ಲ ಜಿಲ್ಲೆಗಳಿಗೆ 44.27 ಕೋಟಿ ರೂಪಾಯಿಗಳನ್ನು ಕೇಂದ್ರ ವಲಯದ ಎ.ಆರ್.ಡಬ್ಲ್ಯೂ.ಎಸ್.ಪಿ.ಯಲ್ಲಿ ಬಿಡುಗಡೆ ಮಾಡಲಾಗಿದೆ. ಬರ ಪರಿಹಾರ ಶೀರ್ಷಿಕೆಯಡಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು 104 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ ಈಗ 79 ಕೋಟಿ ರೂಪಾಯಿಗಳು ಖರ್ಚಾಗಿದೆ. ಈಗ ಜಿಲ್ಲಾಧಿಕಾರಿಗಳಲ್ಲಿ....

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ಕೋಲಾರದಲ್ಲಿ ಮೂರು ತಿಂಗಳು ಹಿಂದೆ ಕುಡಿಯುವ ನೀರಿಗಾಗಿ 95 ಲಕ್ಷ ರೂ ಬಿಡುಗಡೆಯಾಗಿದ್ದರೂ ಅಲ್ಲಿನ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಹಣವನ್ನು ಮೂರು ತಿಂಗಳಾದರೂ ಬಿಡುಗಡೆ ಮಾಡಿಲ್ಲ, ಫೈಲನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಈ ವಿಷಯ ಮಾನ್ಯ ಅಧ್ಯಕ್ಷರಿಗೆ, ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ. ಹಾಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಂತ್ರಿಗಳೂ ಹೇಳಿದ್ದಾರೆ. ಈ ರೀತಿ ಕುಡಿಯುವ ನೀರು ಬಹಳ ಮುಖ್ಯವಾದಂಥ ವಿಷಯದಲ್ಲಿ

ಯಾರೇ ಅಧಿಕಾರದಲ್ಲಿದ್ದರೂ ಸಹ ಈ ಬಗ್ಗೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ.

ಶ್ರೀ ವಿ.ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತಹ ಮಿನಿಮಮ್ ನೀಡ್ ಪ್ರೋಗ್ರಾಮ್‌ನಿಂದ ನಮಗೆ ಈಗ 80.00 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಆದರೆ ನಾವು ಮೊನ್ನೆ ಡಿಸ್ಟ್ರಿಕ್ಟ್ ಲೆವೆಲ್‌ನ ಸ್ಕೇರ್‌ಸಿಟಿ ರಿವ್ಯೂ ಕಮಿಟಿ ಮೀಟಿಂಗ್‌ನಲ್ಲಿ ಎಲ್ಲೆಲ್ಲಿ ತುರ್ತು ಬರುತ್ತದೆ ಅದಕ್ಕಾಗಿ ಮೀಸಲಿರಿಸಬೇಕೆಂದು ಈಗ ಸಧ್ಯಕ್ಕೆ ಖರ್ಚು ಮಾಡಬಾರದೆಂದು ತೀರ್ಮಾನ ಮಾಡಿದ್ದೇವೆ. ಈಗ ಅದರ ಪ್ರಕಾರ ಎಲ್ಲೆಲ್ಲಿ ತುರ್ತು ಬರುತ್ತಿದೆ, ಎಲ್ಲೆಲ್ಲಿ ಬೋರ್‌ವೆಲ್ ಬೇಕು ಅಂತ ಹೇಳುತ್ತಾರೆ, ಹೊಸ ಬೋರ್‌ವೆಲ್ ಕೊರೆಯಲಿಕ್ಕೆ ಸ್ಕೇರ್‌ಸಿಟಿ ಹಣದಲ್ಲಿ ಅವಕಾಶವಿಲ್ಲ, ಹೊಸ ಬೋರ್‌ವೆಲ್ ಕೊರೆಯಲಿಕ್ಕೆ ಮಾತ್ರ ಪೇಮೆಂಟ್ ಮಾಡಬೇಕೆಂದು ನಿರ್ಣಯ ಮಾಡಿ, ಈಗ ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ಮೂರು ತಿಂಗಳ ಹಿಂದೆ ಬಿಡುಗಡೆಯಾದ ಹಣದ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಇವತ್ತು ಬೆಳಿಗ್ಗೆ ಸಂಬಂಧಪಟ್ಟ ಕಾರ್ಯದರ್ಶಿಗಳೊಡನೆ ನಾನು ಹಾಗೂ ಸಂಬಂಧಪಟ್ಟ ಮಂತ್ರಿಗಳು ಇಬ್ಬರೂ ಮಾತನಾಡಿದ್ದೇವೆ. ಇದುವರೆಗೂ ರಿಲೀಸ್ ಆಗಿಲ್ಲ. ಅದಕ್ಕೆ ಮಂತ್ರಿಗಳೇ ಸಾಕ್ಷಿ.

ಶ್ರೀ ಕೆ.ಬಿ. ಕೋಳಿವಾಡ : ಒಂದು ಗಂಟೆಯ ಕೆಳಗೆ ನಾವು ಬಿಡುಗಡೆ ಮಾಡಿದ ಹಣವನ್ನು ರಿಲೀಸ್ ಮಾಡಲಿಕ್ಕೆ ಆದೇಶವನ್ನು ಕೊಟ್ಟಿದ್ದು, ಸಂಬಂಧಪಟ್ಟ ಅಧ್ಯಕ್ಷರಿಂದ ಆ ಹಣ ರಿಲೀಸ್ ಆಗಿದೆ. ಮತ್ತು ತಾವು ಹೇಳಿದ ಹಾಗೆ ಖಾಸಗಿ ಬೋರ್‌ವೆಲುಗಳದ್ದು ಸಹಿತ ಎಷ್ಟು ಇವೆ ಎಂಬ ಬಗ್ಗೆ ಎಲ್ಲವನ್ನೂ ಕೌಂಟ್ ಮಾಡಿ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ವೆರಿಗುಡ್.

ಶ್ರೀ ಎಸ್.ಎಂ. ಕೃಷ್ಣ : ಈಗ ಮತ್ತೆ ಒಂದು ಕ್ಷಣ ಐ.ಪಿ.ಸೆಟ್‌ಗಳ ಬಗ್ಗೆ ಪ್ರಸ್ತಾಪ ಮಾಡುತ್ತೇವೆ. ಏಕೆಂದರೆ ಅವರು ಕುಡಿಯುವ ನೀರಿನ ವಿಚಾರ ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳಬೇಕಾಗಿದೆ. ನಾನು ಈಗ ಹೇಳಿದೆ ಟ್ರಾನ್ಸಫಾರ್ಮರ್‌ಗಳನ್ನು ನೀವು ಪಡೆಯಬೇಕಾಗಿದ್ದರೆ 35 ಸಾವಿರ ರೂಪಾಯಿ ಬದಲು 25 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು. ಬಹಳ ಜನ ರೈತರು ನಮಗೆ ಒಂದೇ ಗಂಟಿನಲ್ಲಿ 25 ಸಾವಿರ ರೂಪಾಯಿಗಳನ್ನು ಕಟ್ಟಲಿಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅದಕ್ಕೋಸ್ಕರ ನೀವು 25 ಸಾವಿರ ರೂಪಾಯಿಗಳನ್ನು ಮೂರು ಕಂತುಗಳಲ್ಲಿ ಕಟ್ಟಿ ಒಂದೊಂದು ಟ್ರಾನ್ಸ್‌ಫಾರ್ಮರ್‌ಗಳನ್ನು ಪಡೆದುಕೊಳ್ಳಬಹುದು ಎಂದು ಮಾಡಿದ್ದೇವೆ. ಇದರ ಸದುಪಯೋಗವನ್ನು ರೈತರು ಮಾಡಿಕೊಳ್ಳಬೇಕು. ಹೊಸ ಐ.ಪಿ. ಸೆಟ್‌ಗಳಿಗೆ ಕನೆಕ್ಷನ್ ಬೇಕು ಅಂದವರಿಗೆ ಒಂದೇ ಗಂಟಿನಲ್ಲಿ ಅವರು ಕಟ್ಟಬೇಕಾಗಿಲ್ಲ. ಅದಕ್ಕೆ ಎರಡು ಕಂತಿನಲ್ಲಿ ಅವರು ಸಂದಾಯ ಮಾಡಿದರೆ ಐ.ಪಿ. ಸೆಟ್‌ಗಳಿಗೆ ಕನೆಕ್ಷನ್‌ನ್ನು ಅವರು ಕೊಡುತ್ತಾರೆ. ಅದು ಹದಿನೈದು ಸಾವಿರ ಪ್ಲಸ್ ಹತ್ತು ಸಾವಿರ ರೂಪಾಯಿಗಳು. ಮತ್ತೆ ಅಧಿಕೃತವಾದಂಥ ಪಂಪುಸೆಟ್ಟುಗಳು ಏನಿದೆ, ಅವರೂ ಕೂಡ ಉಪಯೋಗ ಪಡೆದುಕೊಳ್ಳಬಹುದು. ನಮ್ಮ ಶಿಫಾರಸ್ಸು ಏನೆಂದರೆ ನಿಮ್ಮದೇ ಆದ ಟ್ರಾನ್ಸಫಾರ್ಮರುಗಳನ್ನು ನೀವು ಪಡೆದುಕೊಳ್ಳಬೇಕು ಎನ್ನುವಂಥಾದ್ದು. ಅವರು 16,500 ರೂಪಾಯಿಗಳನ್ನು ಎರಡು ಸಮಾನ ಕಂತುಗಳಲ್ಲಿ ಕೊಟ್ಟು ಅವರು ಐ.ಪಿ.ಸೆಟ್‌ಗಳಿಗೂ ಟ್ರಾನ್ಸ್‌ಫಾರ್ಮಾರುಗಳನ್ನು ಹಾಕಿಸಿಕೊಳ್ಳಬಹುದು. ಗಂಗಾಕಲ್ಯಾಣ ಯೋಜನೆಯಲ್ಲಿ ಎಸ್‌ಸಿ ಎಸ್‌ಟಿಯವರಿಗೆ ನಾಲ್ಕು ಸಾವಿರ ಐ.ಪಿ.ಸೆಟ್‌ಗಳು ಏನಿದೆ ಇನ್ನು ಹದಿನೈದು ದಿವಸದೊಳಗೆ ಈ

ನಾಲ್ಕು ಸಾವಿರ ಐ.ಪಿ. ಸೆಟ್‌ಗಳಿಗೆ ಕನೆಕ್ಷನ್ ಕೊಡಲಿಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಇನ್ನು ಕುಟೀರಜ್ಯೋತಿ ಕನೆಕ್ಷನ್ಸ್. ಇದಕ್ಕೆ ನಾವು ಸರ್ಕಾರದವರು ಎಂಟು ಲಕ್ಷ ಕನ್‌ಕ್ಷನ್ಸ್‌ನ್ನು ಕೊಡಬೇಕಾಗಿದೆ. ಅದಕ್ಕೆ ಇನ್ನೂರು ಕೋಟಿ ರೂ ಬೇಕಾಗಿದೆ. ಬಹಳ ಸಂತೋಷದಾಯವಾದಂಥ ಸುದ್ಧಿ ಏನೆಂದರೆ ಈ ಇನ್ನೂರು ಕೋಟಿ ರೂಪಾಯಿಗಳನ್ನು ಆರ್.ಇ.ಸಿ.ಯಿಂದ ನಾವು ಪಡೆದುಕೊಂಡು ಬಂದಿದ್ದೇವೆ. ಕೆ.ಪಿ.ಟಿ.ಸಿ.ಎಲ್.ಗೆ ನಾನು ನಮ್ಮ ಅಭಿನಂದನೆಯನ್ನು ಆ ಬಡವರು ಪರವಾಗಿ ಪಲ್ಲಿಸುತ್ತಿದ್ದೇನೆ. ಇನ್ನು ಐದು ಲಕ್ಷ ಮನೆಗಳನ್ನು ನಾವು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನಲ್ಲಿ ಕೊಟ್ಟಿದ್ದೇವೆ, ಅದೂ ಕೂಡ ಈ ಚೌಕಟ್ಟಿಗೆ ಬರುತ್ತದೆ. ಮತ್ತೂ ಒಂದು ಮುಖ್ಯವಾದಂಥ ನಿರ್ಧಾರವನ್ನು ನಾವು ಏನು ತೆಗೆದುಕೊಂಡಿದ್ದೇವೆ ಎಂದರೆ ಮಾನ್ಯ ಶ್ರೀನಿವಾಗೌಡರು ಮತ್ತು ಕೋಲಾರದ ನಾಗರಾಜ್ ಅವರು ಮತ್ತು ಇನ್ನೂ ಹಲವಾರು ಸದಸ್ಯರುಗಳು ಹಾಗು ಕೋಲಾರದ ಸಂಸದ ಶ್ರೀ ಕೆ.ಹೆಚ್. ಮುನಿಯಪ್ಪನವರು ಬಂದಿದ್ದರು. ಅವರೆಲ್ಲರೂ ಬಂದು ಕುಡಿಯುವ ನೀರಿಗೆ ಇನ್ನು ಮುಂದಿನ ಎರಡು ತಿಂಗಳಲ್ಲಿ ತೀವ್ರವಾದಂಥ ತೊಂದರೆ ಬರುತ್ತದೆ. ಆದ್ದರಿಂದ ಎಲ್ಲೆಲ್ಲಿ ಯಾವ್ಯಾವ ಪ್ರೈವೇಟ್ ಬೋರ್‌ವೆಲ್‌ಗಳಲ್ಲಿ ನೀರು ಇದೆ, ಆ ನೀರನ್ನು ಕಮಾಂಡೀರ್ ಮಾಡಿಕೊಳ್ಳಿ. ಅವರಿಗೆ ಒಂದು ಲೀಸ್ ಅಮೌಂಟ್‌ನ್ನುಕೊಡಬೇಕು ಎಂದು ಅವರು ಹೇಳಿದರು. ಧರ್ಮಕ್ಕೆ ಕೊಡುವವರು ಕೊಡಬಹುದು. ಆದರೆ ಅವರಿಗೆ ಅದು ಸಮಾಧಾನ ತಾರದೇಹೋದರೆ ಪ್ರತಿ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ. ನೀವು ಹತ್ತಿರದಲ್ಲಿರತಕ್ಕಂಥ ಬೋರ್‌ವೆಲ್‌ಗಳನ್ನು ನಿಮ್ಮ ವಶಕ್ಕೆ ತೆಗೆದುಕೊಂಡು ಅದರ ವಿದ್ಯುಚ್ಛಕ್ತಿ ಚಾರ್ಜಸ್‌ನ್ನು ನೀವೇ ಕಟ್ಟಿ ಮತ್ತು ಅವರಿಗೆ ಲೀಸ್ ಅಮೌಂಟ್‌ನ್ನೂ ಕೂಡ ಇಷ್ಟು ತಿಂಗಳು ಅಂತ, ಒಂದು ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕು ಎಂದು ಹೇಳಿದ್ದೇವೆ. ಇದು ನಮ್ಮ ಈ ಕುಡಿಯುವ ನೀರಿನ ಜ್ವಲಂತ ಸಮಸ್ಯೆಯನ್ನು ಸಾರ್ವಜನಿಕರು ಮತ್ತು ಸರ್ಕಾರ ಇಬ್ಬರೂ ಸಹಕರಿಸಿದರೆ ಮಾತ್ರ ಬಗೆಹರಿಸಿ ಈ ಕುಡಿಯುವ ನೀರಿನ ಜವಾಬ್ದಾರಿಯನ್ನು ನಾವು ಯಶಸ್ವಿಯಾಗಿ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದು ಇಲ್ಲಿಯೂ ಸತ್ಯ ಮತ್ತು ರಾಜಸ್ತಾನದಲ್ಲೂ ಸತ್ಯವಾದಂಥಾದ್ದು ಇದೆ.

ಶ್ರೀ ಎ. ರಾಮದಾಸ್ : ಮಾನ್ಯ ಮುಖ್ಯಮಂತ್ರಿಗಳೇ, ತಾವು ವಿದ್ಯುತ್ ಕ್ಷೇತ್ರದಲ್ಲಿ ಹೊಸ ಪ್ರಕಟಣೆಗಳನ್ನು ಅಲ್ಲಿ ಮಾಡಿದಿರಿ. ಆದರೆ ಕಾಕತಾಳೀಯವಾಗಿ, ಕಳೆದ ವರ್ಷವೇ ತಾವು ರಾಜ್ಯಸರ್ಕಾರದಿಂದ ಕೆ.ಪಿ.ಟಿ.ಸಿ.ಎಲ್. ಮತ್ತು ಎಸ್ಕಾಮ್‌ಗಳಿಗೆ ಕೊಡಬೇಕಾದಂಥ ಹಣದಲ್ಲಿ 1400 ಕೋಟಿ ರೂಪಾಯಿಗಳು ಬಾಕಿ ಉಳಿದಿದೆ ಅಂತ ಹೇಳಿ ಅದನ್ನು ಐ.ಪಿ. ಸೆಟ್ ಮತ್ತು ಗ್ರಾಹಕರ ಮೇಲೆ ಹಾಕುವಂಥ ಪ್ರಯತ್ನವನ್ನು ಮಾಡಿ ಕೆ.ಪಿ.ಟಿ.,ಸಿ.ಎಲ್. ನವರು ಕೆ.ಇ.ಆರ್.ಸಿ. ಮುಂದೆ ಮಾಡಿದ್ದರು. ಈ ವರ್ಷ ಮತ್ತೊಂದು ಬಾರಿ ಒಂದು ಸಾವಿರ ಕೋಟಿ ರೂಪಾಯಿಗಳು ಎಂದರೆ, ಒಟ್ಟು 2400 ಕೋಟಿ ರೂಪಾಯಿಗಳ ಕೊರತೆ ಏನು ಬಂದಿದೆ, ಅದನ್ನು ತುಂಬಿಸುವಂಹ ಕೆಲಸವನ್ನು ರಾಜ್ಯಸರ್ಕಾರ ಮಾಡುತ್ತಿದೆಯಾ ಎಂದು ಹೇಳಿ ಕೆ.ಇ.ಆರ್.ಸಿ. ಇವತ್ತು ಕೆ.ಪಿ.ಸಿ.ಎಲ್.ಗೆ ಬರೆದಿದೆ. ಅದಕ್ಕೆ ಎಲ್ಲೂ ಕೂಡ ತಾವು ಅಲೋಕೇಶನ್‌ನನ್ನು ತೋರಿಸುತ್ತಿಲ್ಲ. ಹಾಗಾದರೆ ತಾವು ತೋರಿಸಿ ದಂಥ ಸ್ಕೀಮ್‌ಗಳು ಏನಿದೆ, ಈ ಹಣವನ್ನು ಭರಿಸುವಂತಹವರು ಯಾರು? ಇದನ್ನು ಚುನಾವಣೆ ಆದಮೇಲೆ ಗ್ರಾಹಕರ ಮೇಲೆ, ರೈತರ ಮೇಲೆ ಹಾಕುವಂಥ ಪರೋಕ್ಷವಾದಂಥ ಒಂದು ವ್ಯವಸ್ಥೆ ಯಾಗುತ್ತಿದೆಯೇನೋ ಎಂದು ಅನಿಸುತ್ತಿದೆ. ಹಾಗಾದರೆ ಯಾವ ಅಲೋಕೇಶನ್‌ನಲ್ಲಿ ಕೆ.ಪಿ.ಟಿ.ಸಿ.ಎಲ್ ಮತ್ತು ಎಸ್ಕಾಮ್‌ಗಳಿಗೆ ಇದರಿಂದ ತುಂಬುತ್ತಾ ಇರುವಂತಹ ಎರಡು ಸಾವಿರ ಕೋಟಿ ರೂಪಾಯಿ

ಹಣವನ್ನು, ಆ ಕೊರತೆಯನ್ನು ತುಂಬಿಸಲಿಕ್ಕೆ ರಾಜ್ಯಸರ್ಕಾರ ಎಲ್ಲಿ ಅಲೋಕೇಶನ್‌ನ್ನು ಇಟ್ಟಿದ್ದೆ ಎನ್ನುವಂಥಾದ್ದು ಬೇಕು. ಎರಡನೇಯದು, ಕೇಂದ್ರಸರ್ಕಾರದ ಆರ್.ಇ.ಸಿ. ಪ್ರೋಗ್ರಾಮ್‌ನಲ್ಲಿ ಈ ಹಣವನ್ನು ತೆಗೆದುಕೊಂಡು ಬಂದಿರಿ ಎಂದು ತಾವು ಅಪ್ರೇಷಿಯೇಟ್ ಮಾಡಿದಿರಿ. ಕಳೆದವರ್ಷ 1400 ಕೋಟಿ ರೂಪಾಯಿಗಳು ಎ.ಪಿ.ಡಿ.ಪಿ ಪ್ರೋಗ್ರಾಮ್ ಮತ್ತು ಆರ್.ಇ.ಸಿ.ನಲ್ಲಿ ಬರಬೇಕಾದಂಥ ಹಣ ಕೇವಲ 400 ಕೋಟಿರೂಗೇ ನಿಂತುಕೊಂಡಿತು. ಒಂದು ಸಾವಿರ ಕೋಟಿ ನಮ್ಮ ರಾಜ್ಯಕ್ಕೆ ಏಕೆ ಬರಲಿಲ್ಲ ಎಂಬುದನ್ನು ದಯವಿಟ್ಟು ಹೇಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಇದೆಲ್ಲಾ ಸಬ್ಜೆಕ್ಟ್ ಕಮಿಟಿಗೆ ಹೋಗುತ್ತದೆ. ಸಬ್ಜೆಕ್ಟ್ ಕಮಿಟಿಗೆ ನೀವೇ ಅಧ್ಯಕ್ಷರಾಗುತ್ತೀರಿ ಎಂದು ಕಾಣುತ್ತದೆ. ಆದ್ದರಿಂದ ಅದರ ಬಗ್ಗೆ ಅಲ್ಲೇ ಸಮಜಾಯಿಶಿಯನ್ನು ಪಡೆದುಕೊಳ್ಳಿ.

ಶ್ರೀ ಎ. ರಾಮದಾಸ್ : ಏಕೆಂದರೆ ವಿದ್ಯುತ್ ದರವನ್ನು ಹಾಸ್ತಿ ಮಾಡುತ್ತೀರಾ ಅಥವಾ ಇಲ್ಲವೇ ಎಂಬುದು ಬೇಕು. ಇಲ್ಲದಿದ್ದರೆ ಈ ಕೊರತೆಯನ್ನು ಹೇಗೆ ತುಂಬಿಸುತ್ತೀರಿ? ಏಕೆಂದರೆ ಈಗ ತಾವು ಕೊಡಬೇಕಾಗಿದೆ. ಆದ್ದರಿಂದ ವಿದ್ಯುತ್‌ದರ ಜಾಸ್ತಿಯಾಗುತ್ತದೆಯಾ ಅಥವಾ ಇಲ್ಲವಾ?

ಅಧ್ಯಕ್ಷರು : ಅದನ್ನು ಸರ್ಕಾರಕ್ಕೆ ಬಿಡಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಮುಖ್ಯಮಂತ್ರಿಗಳು ಕುಡಿಯುವ ನಿರಿನ ಬಗ್ಗೆ ಹೇಳಿದರು. ನಮ್ಮಲ್ಲಿ ಎಂಟು ಗ್ರಾಮಗಳಲ್ಲಿ ಸಂಪೂರ್ಣವಾಗಿ ನೀರು ಇಲ್ಲದೆ ಅಲ್ಲಿ ನೀರು ಕೊಡಲಿಕ್ಕೆ ರೈತರು ಮುಂದೆ ಬಂದರು. ಅವನು ತಿಂಗಳಿಗೆ ನಾಲ್ಕು ಸಾವಿರ ರೂಪಾಯಿ ಕೇಳಿದ. ಮಾನ್ಯ ಕೋಳಿವಾಡ ಅವರು ಇಲ್ಲಿ ಇದ್ದಾರೆ. ತಿಂಗಳಿಗೆ ನಾಲ್ಕು ಸಾವಿರದಂತೆ ನಾಲ್ಕು ತಿಂಗಳು ಅವನಿಗೆ ಕೊಟ್ಟರೆ ಇಪ್ಪತ್ತು ಸಾವಿರ ರೂಪಾಯಿ ಆಗುತ್ತದೆ. ನಾವೇ ಬೋರ್‌ವೆಲ್‌ಗಳನ್ನು ಹಾಕಿದರೆ ಖರ್ಚು ಜಾಸ್ತಿಯಾಗುತ್ತದೆ. ಏಕೆಂದರೆ ಈಗಾಗಲೇ ಅಲ್ಲಿ ಹತ್ತು-ಹದಿಮೂರು ಬಾವಿಗಳನ್ನು ಕೊರೆದು ಅವುಗಳು ವಿಫಲವಾಗಿವೆ. ರೈತ ಮುಂದೆ ಬಂದಿದ್ದಕ್ಕೆ ಅವನಿಗೆ ಪಂಚಾಯತಿಯಿಂದ ನಾಲ್ಕು ಸಾವಿರ ರೂಪಾಯಿಗಳಿಗೆ ಒಂದು ಸಾವಿರ ರೂಪಾಯಿ ಸೇರಿಸಿ ಐದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೀಗೆ ಮಾಡಿದ್ದರಿಂದ ಇವತ್ತು ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗಿದೆ. ಇದನ್ನು ಎಂಟು ಗ್ರಾಮಳಲ್ಲಿ ಮಾಡಿದ್ದೇವೆ. ಈ ರೀತಿ ಉಪಯೋಗಿಸಿಕೊಳ್ಳಿ ಅಂತ ಮುಖ್ಯಮಂತ್ರಿಗಳು ತಿಳಿಸಿದರು. ಅದಕ್ಕೆ ಅವರಿಗೆ ಎಷ್ಟು ಹಣ ಕೊಡುವುದು ಎಂದು ಸರ್ಕಾರದಲ್ಲಿ ತೀರ್ಮಾನ ಆದರೆ ಒಳ್ಳೆಯದು. ಒಂದು ತಿಂಗಳಿಗೆ ಪವರ್ ಚಾರ್ಜಸ್ ಮತ್ತು ವಾಟರ್ ಚಾರ್ಜಸ್ ಸೇರಿ ಎಷ್ಟು ಕೊಡುವುದು ಎಂದು ತೀರ್ಮಾನ ಮಾಡಿದರೆ ನೀರು ಕೊಡುವುದಕ್ಕೆ ರೈತ ಮುಮದೆ ಬರುತ್ತಾನೆ. ಅವನು ಗ್ರಾಮಸ್ಥನಾಗಿದ್ದು Up to may ಮಳೆಗಾಲದ ವರೆಗೆ ನನ್ನ ನೀರನ್ನು ಹಾಯಿಸಿಕೊಳ್ಳಿ ಎಂದು ಹೇಳುತ್ತಿದ್ದಾನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥಾದ್ದು ಒಳ್ಳೆಯ ಸಲಹೆ.

ಶ್ರೀ ಎಸ್.ಎಂ. ಕೃಷ್ಣ : ತಾವು ಹೇಳಿದಂಥ ಕಾನ್ಸೆಪ್ಟ್‌ಗೆ ಒಂದು ಇನ್ಸ್ಟಿಟ್ಯೂಶನಲ್ ಫ್ರೇಮ್‌ವರ್ಕ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಹಿಂದೆ ನಮ್ಮ ಮನೆಗಳಲ್ಲಿ ಇದು ನಡೆಯುತ್ತಿತ್ತು. ನಿಮ್ಮ ಮನೆಗಳಲ್ಲೂ ನಡೆಯುತ್ತಿತ್ತು. ಚನ್ನಭೈರೇಗೌಡರು ಇದ್ದಕಾಲದಲ್ಲಿ ಇದು ನಡೆಯುತ್ತಿತ್ತು ಅಂತ ಕಾಣುತ್ತದೆ. ಅದು ಏನೆಂದರೆ ಭಯಂಕರ ಬೇಸಿಗೆಯಲ್ಲಿ ಮನೆಯ ಮುಂದೆ ಬೆಲ್ಲದ ಪಾನಕ ಇಟ್ಟು ಕೊಡುತ್ತಿದ್ದರು. ಏಕೆಂದರೆ ಆಗ ಜಾಸ್ತಿ ಬಸ್ಸುಗಳು ಇರಲಿಲ್ಲ. ಜನರು ನಡೆದುಕೊಂಡು ಹೋಗುತ್ತಿದ್ದರು. ಇದು ಚನ್ನಿಗಪ್ಪ ಅವರಿಗೆ ಗೊತ್ತಿರಬೇಕು. ಅವರೆಲ್ಲಾ ನಡೆದುಕೊಂಡು ಓಡಾಡುತ್ತಾ ಇದ್ದರು. ಆಗಿನ ಕಾಲದಲ್ಲಿ ಅಲ್ಲಿ

ಮರಗಳನ್ನೂ ಕೂಡ ನೆಡುತ್ತಿದ್ದರು. ಏಕೆಂದರೆ ಮರದ ನೆರಳೂ ಬೇಕು ಮತ್ತು ಬೇಲಹಣ್ಣಿನ ಪಾನಕವನ್ನು ಬಹಳ ತಣ್ಣಗೆ ಮಾಡುತ್ತದೆ ಎಂದು ಕೊಡುತ್ತಿದ್ದರು. ಬೇಲದ ಹಣ್ಣಿನ ಪಾನಕ ಬಹಳ ತಣ್ಣಗೆ ಮಾಡುತ್ತದೆಯಂತೆ. ನಮ್ಮಲ್ಲಿಯೂ ಕೆಲವರು ಬೇಲದ ಹಣ್ಣಿನ ಪಾನಕವನ್ನು ಕುಡಿಯಬೇಕು ಎಂದು ಕಾಣುತ್ತದೆ. ಏಕೆಂದರೆ ತಣ್ಣಗೆ ಇರಲಿಕ್ಕೆ ಇದು ಸಹಾಯ ಮಾಡುತ್ತದೆ. ಹಾಗೆಯೇ ತಾವು ಹೇಳಿದ ಸಲಹೆ ಏನಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಇದು ಒಂದು ಸಾರಾಸಗಟಾಗಿ ಒಂದು ನಿರ್ಣಯವನ್ನು ಮಾಡುವುದಕ್ಕೆ ಆಗುವುದಿಲ್ಲ. ಪರಿಸ್ಥಿತಿಗಳು ಬೇರೆ ಇರುತ್ತವೆ. ಆದ್ದರಿಂದ ಇದನ್ನು ಡೆಪ್ಯುಟಿ ಕಮಿಷನರ್‌ಗೂ ಮತ್ತು ಆ ವೆಲ್ ಓನರ್‌ಗೂ ಬಿಟ್ಟುಬಿಡೋಣ. ಅವರು ಅವರ ಜೊತೆಯಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡು ಒಟ್ಟಿನಲ್ಲಿ ಕುಡಿಯುವ ನೀರಿನ ತೊಂದರೆಯಿಂದ ನಾವು ಇವತ್ತು ನಿವಾರಣೆ ಮಾಡಿಕೊಳ್ಳಬಹುದು ಎಂದು ನಾನು ಹೇಳುತ್ತೇನೆ.

1.10 ಪಿ.ಎಂ

ಭೂಮಿ ಎನ್ನತಕ್ಕಂಥ ಪ್ರಾಜೆಕ್ಟ್ ಏನು ಇದೆ, ಆ ಪ್ರಾಜೆಕ್ಟ್ ಇವತ್ತು ಬಹಳ ಪ್ರಖರವಾಗಿ ಜನಗಳ ಮನವನ್ನು ಸೆಳೆದಿದೆ, ಮತ್ತು ಅನುಕೂಲ ಕೂಡ ಆಗಿದೆ. 2003–04 ರಲ್ಲಿ ಸುಮಾರು 10 ಲಕ್ಷ ಜನ ರೈತರು ಈ ರೈತ ಸಂಪರ್ಕ ಕೇಮದ್ರಗಳ ಪ್ರಯೋಜನ ಪಡೆದಿದ್ದಾರೆ. ಈಗ ಪಹಣಿ ದಾಖಲೆ ಬೆಲೆಯನ್ನು ನಾವು 15 ರೂಪಾಯಿ ಎಂದು ನಿಷ್ಕರ್ಷೆ ಮಾಡಿದ್ದವು. ಅದನ್ನು ತಾವುಗಳೆಲ್ಲಾ ಹೇಳಿದಿರಿ ಬಹಳ ಜಾಸ್ತಿಯಾಗಿದೆ ಅದನ್ನು ಇಳಿಸಿ ಸಎಂದು ಅಗಿಂದಾಗ್ಗೆ, ಅಗಿಂದಾಗ್ಗೆ ಹೇಳುತ್ತಿದ್ದಿರಿ. ಅದಕ್ಕೆ ಈ ಸದನದ ಒತ್ತಾಯದ ಮೇಲೆ ಅದನ್ನು ನಾವು 5 ರೂಪಾಯಿಗಳಿಗೆ ಇಳಿಸುತ್ತಿದ್ದೇವೆ. ಎರಡನೆಯದು, ಹೋಬಳಿ ಮಟ್ಟದಲ್ಲಿ ಈ ಭೂಮಿ ಪ್ರಾಜೆಕ್ಟ್‌ನ್ನು ನಾವು ತೆಗೆದುಕೊಂಡು ಹೋಗಬೇಕು ಎನ್ನತಕ್ಕಂಥ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ. ಒಂದೊಂದು ಭೂಮಿ ಪ್ರಾಜೆಕ್ಟ್ ಕೆಲವು 35–40 ಲಕ್ಷ ರೂಪಾಯಿಗಳ ನಿವ್ವಳ ಆದಾಯವನ್ನು ನಮಗೆ ತಂದು ಕೊಟ್ಟಿದೆ. ಅದನ್ನು ನಾನು ಕನ್‌ಸಾಲಿಡೇಟೆಡ್ ಫಂಡ್‌ಗೆ ತೆಗೆದುಕೊಳ್ಳಬಹುದಿತ್ತು. ಅಂದರೆ ನಾವು ಈಗ ಒಂದು ತೀರ್ಮಾನ ಏನು ತೆಗೆದುಕೊಂಡಿದ್ದೇವೆಂದರೆ ಅದನ್ನು ಯಾವ ಯಾವ ಹೋಬಳಿಯಲ್ಲಿ ಅವಶ್ಯಕತೆ ಇದೆ ಆ ಹೋಬಳಿಗಳಿಗೆ ಅಭಿವೃದ್ಧಿ ಮಾಡಲಿಕ್ಕೆ ಈ ಹಣ ತೆಗೆದು ಕೊಂಡು ಹೋಗಬೇಕು ಎನ್ನುವ ತೀರ್ಮಾನ ಮಾಡಿದ್ದೇವೆ. ಸರ್ಕಾರ ಇತ್ತೀಚೆಗೆ ಈ ಟೆಂಡರ್ ಮಾಡದೇ ಪ್ರೊಡ್ಯೂಸ್ ಮತ್ತು ಸರ್ವೀಸ್ ಎರಡನ್ನೂ ಕೂಡ ಹೈರ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ. ಆದರೆ ಎಸ್ ಸಿ : ಎಸ್ ಟಿ ಮತ್ತು ಬ್ಯಕ್‌ವರ್ಡ್ ಕ್ಲಾಸಸ್ ಇವರು ಸಮಾಜದಲ್ಲಿ ಬಹಳ ಕಷ್ಟದಲ್ಲಿರತಕ್ಕಂಥವರು. ಇನ್ ರಿಲೀಟೀವ್ ಟರ್ಮ್ಸ್ ನಾನು ಮಾತನಾಡುತ್ತೇನೆ. ಅಂದರೆ ಬಾಕಿಯವರು ಎಲ್ಲಾ ಬಹಳ ಚೆನ್ನಾಗಿದ್ದಾರೆ ಎನ್ನುವ ಅರ್ಥದಲ್ಲಿ ಅಲ್ಲ ನಾನು ಹೇಳುತ್ತಾ ಇರತಕ್ಕಂಥಾದ್ದು, ಇವರಿಗೆ ಪಬ್ಲಿಕ್ ವರ್ಕ್ಸ್‌ನಲ್ಲಿ ಬೇಕಾದಷ್ಟು ಕಂಟ್ರಾಕ್ಟ್ಸ್ ಮಾಡುವುದಕ್ಕೆ ಅವಕಾಶ ಇದೆ. ಜಿಲ್ಲಾ ಪರಿಷತ್ತು ಅಕೌಂಟ್ಸ್‌ನಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹಾಗೆಯೇ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲೂ ಮಾಡುತ್ತಾರೆ. ಮತ್ತು ಸೋಷಿಯಲ್ ವೆಲ್‌ಫೇರ್‌ನಲ್ಲೂ ಮಾಡುತ್ತಾರೆ. ಅದಕೋಸ್ಕರ ಅನ್ ಎಂಪ್ಲಾಯಡ್ ಎಜ್ಯುಕೇಟೆಡ್ ಗ್ರ್ಯಾಜುಯೇಟ್ಸ್‌ಗೆ ಎರಡು ಲಕ್ಷದವರೆವಿಗೂ ಈ ಕಾಂಟ್ರ್ಯಾಕ್ಟ್‌ಗಳನ್ನು ಟೆಂಡರ್ ಇಲ್ಲದೇ ಅವರಲ್ಲಿಯೇ ಟೆಂಡರ್ ಮಾಡುವುದು ಅವರಿಗೆ ನಾವು ಈ 50 ಪರ್ಸೆಂಟ್ ತೆಗೆದು ಇರಿಸುತ್ತಿದ್ದೇವೆ. ಅಂದರೆ ಅದರ ಅರ್ಥ 10 ಕೋಟಿ ರೂ ಅವರು ಖರ್ಚು ಮಾಡಿದರೆ 5 ಕೋಟಿ ರೂಪಾಯಿಗಳನ್ನು ಎಸ್ ಸಿ : ಎಸ್ ಟಿ ಮತ್ತು ಬ್ಯಾಕ್‌ವರ್ಡ್ ಕ್ಲಾಸಸ್ ಈ ವರ್ಗಗಳಿಗೆ ಸೇರಿದಂತಹರಿಗೆ ಅವರವರಲ್ಲಿಯೇ ಟೆಂಡರ್ ಕರೆದು ಅವರಿಗೆ

ಎರಡು ಲಕ್ಷ ರೂಪಾಯಿಗಳವರೆಗೂ ಅವರು ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಅನುವು ಮಾಡಿ ಕೊಡಲಿಕ್ಕೆ ಈ ಒಂದು ಸುಧಾರಣೆಯನ್ನು ತರಲಿಕ್ಕೆ ನಾವು ಮುಂದೆ ಬಂದಿದ್ದೇವೆ. ಸ್ತ್ರೀ ಶಕ್ತಿ ಬ್ಯಾಂಕ್ ಇದೊಂದು ಅತ್ಯಂತ ಕ್ರಾಂತಿದಾಯಕವಾದಂತಹ ಪ್ರಯತ್ನ. ನಮಗೆ ಸ್ಪೂರ್ತಿ ಯಾರಿಂದ ಸಿಕ್ಕಿತು ಅಂದರೆ ಬಾಂಗ್ಲಾ ದೇಶದ ಹಬೀಬ್ ಉಲ್ಲಾ ಹಕ್ ಅವರ ಬಾಂಗ್ಲಾ ದೇಶ್ ಗ್ರಾಮೀಣ ಬ್ಯಾಂಕ್ ಅದರ ಪ್ರಗತಿಯನ್ನು ನೋಡಿ ಅದರಿಂದ ಅಲ್ಲಿಯ ಮಹಿಳೆಯರಿಗೆ ಅದಂತಹ ಅನುಕೂಲವನ್ನು ಗಮನಿಸಿ ನಾವು ಇದನ್ನು ಇಲ್ಲಿ ಜಾರಿಗೆ ತಂದಿದ್ದೇವೆ. ಅಂಗನವಾಡಿ ಕಾರ್ಯಕರ್ತೆಯರು ಏನು ಇದ್ದಾರೆ ಅವರು ಸಮಾಜಕ್ಕೆ ಬಹಳ ಸಹಾಯ ಮಾಡುತ್ತಿದ್ದಾರೆ. ಅವರಿಗೆ ನಾವು ಕೊಡತಕ್ಕಂಥ ಗೌರವಧನ ಎಂದು ಏನು ನಾವು ಕರೆಯುತ್ತೇವೆ ಅದು ಯಾವುದೇ ಅಳತೆಗೋಲಿನಿಂದ ನೋಡಿದರೂ ಕೂಡ ಅದು ಸಮಾಧಾನಕರವಾಗಿಲ್ಲ. ಅದುದರಿಂದ ಅವರೆಲ್ಲರಿಗೂ ಕೂಡ ಸುಮಾರು 50 ಸಾವಿರ ಮನೆಗಳನ್ನು ಕೊಡಬೇಕು ಎನ್ನತಕ್ಕಂಥ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಮನೆ ಇರುವವರಿಗೆ ಕೊಡುವುದಿಲ್ಲ. ಈಗಾಗಲೇ ಕೆಲವರು ಮನೆ ಪಡೆದುಕೊಂಡಿದ್ದಾರೆ. ಇದು ಗೌರ್ನಮೆಂಟ್ ಆಫ್ ಇಂಡಿಯಾ ಸ್ಕೀಮ್. ಅದ್ದರಿಂದ ಅವರು ತುಮಕೂರಿನ ಸದಸ್ಯರು ಗೌರ್ನಮೆಂಟ್ ಆಫ್ ಇಂಡಿಯಾದವರಿಗೆ ಹೇಳಿ ಸ್ವಲ್ಪ ಹೆಚ್ಚು ಮಾಡಿಸುವುದಕ್ಕೆ ಹೇಳಿ. 80 ಸಾವಿರ ಜನ ಇದ್ದಾರೆ. ನಮ್ಮ ಲೈವ್ ರಿಜಿಸ್ಟರ್‌ನಲ್ಲಿ. ಅಂಗನವಾಡಿ ಕಾರ್ಯಕರ್ತರು. ಇನ್ನು ಎರಡು ವರ್ಷಗಳ ಅವಧಿಯಲ್ಲಿ ಯಾರಿಗೆ ಮನೆ ಇಲ್ಲವೋ ಅವರಿಗೆ ಪ್ರತಿಯೊಬ್ಬರಿಗೂ ಮನೆಗಳನ್ನು ಕೊಡತಕ್ಕಂಥ ಒಂದು ಹೊಸ ಇನ್‌ಸೆಂಟೀವ್‌ನ್ನು ನಾವು ಜಾರಿಗೆ ತರುತ್ತಿದ್ದೇವೆ. ರಾಜೀವ್ ಯುವ ಶಕ್ತಿಯ ವಿಚಾರ ನಾವು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಒಂದು ಲಿಮಿಟ್ ಇತ್ತು. ಅದು ಏನೆಂದರೆ ಇಂತಿಷ್ಟೇ ಸದಸ್ಯರುಗಳು ಮಾಡಬಹುದು. ಏಕೆಂದರೆ ನಾವು ಕೊಡತಕ್ಕಂಥಾದ್ದು 10 ಸಾವಿರ ರೂಪಾಯಿ. ಅದು ಸಾಲದು ಅಂತ ಹೇಳಿ ಆದರೆ ನೂರು ಸದಸ್ಯರು ಹೊಂದಿದ ಪ್ರತಿ ಸಂಘಕ್ಕೂ 15 ಸಾವಿರ ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಡಲಿಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಕಾಫಿ ಪ್ಯಾಕೇಜ್ ಬಗ್ಗೆ ಮೊನ್ನೆ ನಾನು ಹೇಳಿದೆ. ಕಳೆದ 3 ವರ್ಷಗಳಲ್ಲಿ 66 ಕೋಟಿ ರೂಪಾಯಿಗಳ ಕೃಷಿ ಆದಾಯ ತೆರಿಗೆ ಮನ್ನಾ ಮಾಡಿದ್ದೇವೆ. 2004-05 ನೇ ಸಾಲಿಗೂ ಕೂಡ ಇದನ್ನು ನಾವು ಮನ್ನಾ ಮಾಡುತ್ತಿದ್ದೇವೆ. ಮತ್ತು ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕಾಫಿ ಬೆಳೆಗಾರರ ಬಾಕಿ ಇರುವ ಸಾಲಗಳ ಮೇಲಿನ ಸುಸ್ತಿ ಬಡ್ಡಿ ಮನ್ನಾ. ಅಸಲು ಮೊತ್ತ ಪಾವತಿಸುವ ಷರತ್ತಿನ ಮೇಲೆ...

ಶ್ರೀ ಕೆ ಶ್ರೀನಿವಾಸ ಗೌಡ ಕುಡುವನಹಳ್ಳಿ : ಲ್ಯಾಂಡ್ ಸೀಲಿಂಗ್ ತಂದ ಮೇಲೆ ಸಣ್ಣ ಅತೀ ಸಣ್ಣ ಅಂತ ಹೇಳಿ ಹಿಂದೆ ಹೋಗುತ್ತಿದ್ದೀರಿ. ಏಕೆ?

ಶ್ರೀ ಬಿ ಬಿ ಶಿವಪ್ಪ : ಮಾನ್ಯ ಅಧ್ಯಕ್ಷರೇ, ಮಾನ ಮುಖ್ಯಮಂತ್ರಿಗಳು ಕೆಲವು ಸವಲತ್ತುಗಳನ್ನು ಒದಗಿಸಿದ್ದೀರಿ. ಅದಕ್ಕೆ ನಾನು ಆಗಲೇ ತಮ್ಮನ್ನು ಅಭಿನಂದಿಸಿದ್ದೇನೆ. ತಾವು ಕಳೆದ 4 ವರ್ಷಗಳಲ್ಲಿ ಕಾಫಿ ಬೆಳೆ ಕುಸಿತದಲ್ಲಿದೆ, ಇದರ ಜೊತೆಗೆ ಪ್ರತಿಕೂಲ ಹವಾಮಾನ ಪರಿಸ್ಥಿತಿ ಸೇರಿ ಸಣ್ಣ ಪ್ರಮಾಣದ ಕಾಫಿ ಬೆಳೆಗಾರರು ತತ್ತರಿಸಿ ಹೋಗಿದ್ದಾರೆ ಇವರನ್ನು ಹತಾಶ ಸ್ಥಿತಿಯಿಂದ ಮೇಲೆತ್ತಲು ನಾವು ಈಗಾಗಲೇ ಕಾಫಿ ಬೆಳೆಯ ಮೇಲಿನ ತೆರಿಗೆಯನ್ನು 3 ವರ್ಷಗಳಿಂದ ವಿನಾಯಿತಿಗೆ ಒಳಪಡಿಸಿದ್ದೇನೆ, ಇದು ನಮಗೆ ಸುಮಾರು 66 ಕೋಟಿ ರೂಪಾಯಿಗಳ ವೆಚ್ಚ ತಂದಿದೆ. ಈಗ ನಾನು ಸಣ್ಣ ಮತ್ತು ಅತಿ ಸಣ್ಣ ಕಾಫಿ ಬೆಳೆಗಾರರನ್ನು ಸಾಲದ ಭಾದೆಯಿಂದ ಬಿಡಿಸಲು ವಸೂಲಿ ಆಧಾರಿತ ಬೆಳೆ ಸಾಲದ ಬಡ್ಡಿ ಮನ್ನಾ ಯೋಜನೆಯನ್ನು ಜಾರಿಗೆ ತಂದಿದ್ದೇನೆ. ಇದು ಕಾಫಿ ಬೆಳೆಗಾರರಿಗೆ ಸುಮಾರು 36 ಕೋಟಿ ರೂಪಾಯಿಗಳ

ಪರಿಹಾರವನ್ನು ಒದಗಿಸಲಿದೆ ಎಂದು ತಾವು ಹೇಳಿದ್ದೀರಿ. ಒಂದು ಸಣ್ಣ ಬದಲಾವಣೆ ಮಾಡಿಕೊಡಬೇಕು. ನನ್ನ ಅಪೇಕ್ಷೆ ಏನೆಂದರೆ, ತಾವೇನು ವಿನಾಯಿತಿಗೆ ಒಳಪಡಿಸಿದರೆ ನಮಗೆ ಸುಮಾರು 66 ಕೋಟಿ ರುಪಾಯಿಗಳ ವೆಚ್ಚ ತಂದಿದೆ ಎಂದು ಹೇಳಿದ್ದೀರಿ. ತಾವು ಕಾಫಿ ಬೆಳೆಯ ಮೇಲಿನ ತೆರಿಗೆಯನ್ನು ಮೂರು ವರ್ಷಗಳ ವಿನಾಯಿತಿಗೆ ಒಳಪಡಿಸಿದ್ದೇನೆ. ಇದು ನಮಗೆ ಸುಮಾರು 66 ಕೋಟಿ ರೂಪಾಯಿಗಳ ವೆಚ್ಚ ತಂದಿದೆ ಎಂದು ಹೇಳಿದ್ದೀರಿ. ಈ ವಿನಾಯಿತಿಯನ್ನು 2004–05ನೇ ಸಾಲಿಗೂ ಮುಂದುವರಿಸುತ್ತಿದ್ದೇನೆ ಎಂಬುದನ್ನು ಸೇರಿಸಬೇಕೆಂದು ನನ್ನ ಅಪೇಕ್ಷೆ. ತಾವೇನು 66 ಕೋಟಿ ರೂಪಾಯಿಗಳ ವೆಚ್ಚ ತಂದಿದೆ ಎಂದು ಹೇಳಿದ್ದೀರಿ. ಅದರ ಮುಂಭಾಗದಲಿ ಈ ವಿನಾಯಿತಿಯನ್ನು 2004–05ನೇ ಸಾಲಿಗೂ ಮುಂದುವರಿಸುತ್ತಿದ್ದೇನೆಂದು ಸೇರಿಸಿಕೊಂಡರೆ ಸ್ವಲ್ಪ ಅನುಕೂಲವಾಗುತ್ತದೆ. ಸಣ್ಣ ಮತ್ತು ಅತಿ ಸಣ್ಣ ಕಾಫಿ ಬೆಳೆಗಾರರು ಎಂದು ತಾವೇನು ಹೇಳಿದ್ದೀರಿ, ಆ "ಸಣ್ಣ ಮತ್ತು ಅತಿ ಸಣ್ಣ" ಬಿಟ್ಟು ಕಾಫಿ ಬೆಳೆಗಾರರು ಎಂದು ಹೇಳಿ. ಸಾಲದ ಬಾಧೆಯಿಂದ ಬಿಡಿಸಲು ವಸೂಲಿ ಆಧಾರಿತ ಬೆಳೆಗಾರರ ಸುಸ್ತಿ ಸಾಲದ ಬಡ್ಡಿ ಮನ್ನಾ ಯೋಜನೆಯನ್ನು ಜಾರಿಗೊಳಿಸಿದ್ದೇನೆ. ಈ ಸಣ್ಣ ಅತಿಸಣ್ಣ ಎಂಬುದು ಬೇಡ ಎಂದು ನಾನು ಕೇಳುತ್ತಿದ್ದೇನೆ. ಕಾಫಿ ಬೆಳೆಗಾರರಿಗೆ 36 ಕೋಟಿ ಪರಿಹಾರವನ್ನು ಒದಗಿಸಿದೆ ಎಂದು ತಾವು ಹೇಳಿದ್ದೀರಿ. ಇದರಲ್ಲಿ ಒಂದೆರಡು ಬದಲಾವಣೆ ಮಾಡಿಕೊಡಬೇಕು. ವಿನಾಯಿತಿಯನ್ನು 2004–05ನೇ ಸಾಲಿಗೂ ಮುಂದುವರಿಸುತ್ತಿದ್ದೇನೆ ಮತ್ತು ಅತಿ ಸಣ್ಣ ಮತ್ತು ಸಣ್ಣ ಎಂಬುದನ್ನು ಬಿಟ್ಟು ವಸೂಲಿ ಆಧಾರಿತ ಕಾಫಿ ಬೆಳೆಗಾರರ ಎಂದು ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ : ನಮ್ಮ ಪಕ್ಷದ ಸಿದ್ಧಾಂತ ಏನೆಂದರೆ, ಸಣ್ಣ ಮತ್ತು ಅತೀ ಸಣ್ಣ ಜನಗಳ ಸಹಾಯಕ್ಕೆ ಹೋಗಬೇಕೆಂದು. ಈಗ ಎಲ್ಲರೂ ಇವತ್ತು ತೊಂದರೆಯಲ್ಲಿದ್ದಾರೆಂದು ಹೇಳುತ್ತಿದ್ದಾರೆ. ಆದ್ದರಿಂದ, ಎಲ್ಲರಿಗೂ ಈ ವಿನಾಯಿತಿಯನ್ನು ನಾವು ಜಾರಿಗೆ ತರುತ್ತೇವೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ತೋಟಗಾರಿಕೆ ಬೆಳೆಗಳ ಬಗ್ಗೆ ಏನಾದರೂ ಘೋಷಣೆ ಮಾಡಬೇಕು. ಏಕೆಂದರೆ, ಇದು ಕೊನೆಯ ಅಧಿವೇಶನ. ಕೊನೇ ಪಕ್ಷ ದಾಳಿಂಬೆ, ದ್ರಾಕ್ಷಿ ಒಣಗಿ ಹೋಗಿರುವುದಕ್ಕಾದರೂ ಪರಿಹಾರ ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಡ್ರಿಪ್ ಇರಿಗೇಷನ್‌ಗೆ ಹಂಡ್ರಡ್ ಪರ್ಸೆಂಟ್ ಕೊಟ್ಟಿದ್ದೀರಿ. ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಿಗೆ ಡ್ರಿಪ್ ಇರಿಗೇಷನ್‌ಗೆ ಹಂಡ್ರಡ್ ಪರ್ಸೆಂಟ್‌ಕೊಟ್ಟಿದ್ದೀರಿ. ಬಹಳ ಸಂತೋಷ, ಸ್ವಾಗತಿಸುತ್ತೇನೆ. ಆದರೆ, ಅದನ್ನು ಐದು ಎಕರೆಗೇ ಸೀಮಿತ ಮಾಡಿದ್ದೀರಿ. ಈಗ ನೀರು ಭೂಮಿಯಲ್ಲಿ ಇಲ್ಲ. ಕನಿಷ್ಟ 10 ಎಕರೆವರೆಗಾದರೊ ಅದನ್ನು ಮುಂದುವರಿಸಿ ಎಂಬುದು ನನ್ನ ಪ್ರಾರ್ಥನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಕಾಫಿ ಬೆಳೆಗಾರರಿಗೆ 33 ಕೊಟಿ ರೂ ಕೊಟ್ಟು 18 ಕೋಟಿ ರೂ ಹಣ ಉಳಿದಿದೆ ಎಂಬುದಾಗಿದೆ. ಅದನ್ನು ತೆಂಗಿನ ಬೆಳೆಗಾರರಿಗೆ ಮತ್ತು ಅಡಿಕೆ ಬೆಳೆಗಾರರಿಗೆ ಕೊಡಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಕಾಫಿ ಬೆಳೆಗಾರರಿಗೆ ನಾವು ವಿಶೇಷವಾಗಿ ಏಕೆ ವಿನಾಯಿತಿ ನೀಡಲು ಧಾವಿಸಿದೆವು ಅಂದರೆ, ಚಿಕ್ಕಮಗಳೂರು. ಕೂರ್ಗ್, ಹಾಸನ ಇಲ್ಲಿಗೆ ಕೇಮದ್ರದ ಹಣಕಾಸಿನ ಸಚಿವರು ಬಂದಿದ್ದರು. ಈ ಭಾಗದ ಮೇಲೆ ಅಗಾಧವಾದ ವಿಶ್ವಾಸವನ್ನು ಇಟ್ಟಿರುವ ಜಾರ್ಜ್ ಫರ್ನಾಂಡಿಸ್ ಸಾಹೇಬರೂ ಬಂದಿದ್ದರು. ಇನ್ನೊಬ್ಬರು ಆಗಿನ ಕೇಂದ್ರಸಚಿವರಾಗಿದ್ದಂಥ ಶ್ರೀ ಅನಂತಕುಮಾರ್‌ರವರೂ

ಬಂದಿದ್ದರು. ನಾನು ಕಾದೆ. ಅವರು ಬಂದು ಎಲ್ಲವನ್ನೂ ನೋಡಿ, ಇವರ ಅಹವಾಲುಗಳನ್ನೆಲ್ಲಾ ಕೇಳಿದರು. ಸಾವಿರಾರು ಜನ ಇದ್ದರು. ಇಲ್ಲಿ ಚಂದ್ರೇಗೌಡರು ಮತ್ತು ಇವರ್‍ಯಾರೂ ಇರಲೇ ಇಲ್ಲ. ಅವರನ್ನು ಎಲ್ಲಗೆ ಹೋಗುತ್ತೀರೆಂದು ಕೇಳಿದರೆ, ಅವರು ಜಾರ್ಜ್‌ಫರ್ನಾಂಡಿಸ್ ಬರುತ್ತಿದ್ದಾರೆ, ಜಸ್ವಂತ್‌ಸಿಂಗ್ ಬರುತ್ತಿದ್ದಾರೆ, ಅನಂತಕುಮಾರ್ ಬರುತ್ತಿದ್ದಾರೆ, ಅವರು ಕಾಫಿ ಬೆಳೆಗಾರರಿಗೆ ರಿಲೀಫ್ ಕೊಡುತ್ತಾರೆಂದು ಇವರೆಲ್ಲಾ ಹೋಗಿದ್ದರು. ನೀವು ಹೋಗಿ, ರಿಲೀಫ್ಕೊಡುವವರೆಲ್ಲರ ಜೊತೆ ಹೋಗಿ, ನಾನು ಬರುವುದಕ್ಕಾಗುವುದಿಲ್ಲವೆಂದು ಹೇಳಿದೆ. ಈ ಬಜೆಟ್‌ಗೆ ಬಕ ಪಕ್ಷಿಗಳ ತರಹ ಅವರೂ ಕಾದರು. ಟೀಗೆ ವಿನಾಯಿತಿ ಕೊಟ್ಟರೇ ಹೊರತು, ಕಾಫಿ ಬೆಳೆಗಾರರಿಗೆ ವಿನಾಯಿತಿ ಕೋಡಲಿಲ್ಲವಲ್ಲಾ ಏನು ಮಾಡುವುದು ಶಿವಪ್ಪನವರೇ?

ಶ್ರೀ ಬಿ.ಬಿ. ಶಿವಪ್ಪ : ಅವರುಗಳು ಆಶ್ವಾಸನೆಗಳ ಹೊಳೆಯನ್ನೇ ಹರಿಸಿದರು. ಅದೆಲ್ಲಾ ಹರಿದು ಸೀದಾ ಸಮುದ್ರಕ್ಕೆ ಹೋಯಿತು. ಈ ಕಡೆ ತಿರುಗಲೇ ಇಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಕಾಫಿ ಏರಿಯಾಕ್ಕೆ ಮಾನ್ಯ ಜಸ್ವಂತ್‌ಸಿಂಗ್‌ರವರು, ಮಾನ್ಯ ಅನಂತಕುಮಾರ್ ರವರು ಎಲ್ಲಾ ಬಂದಿದ್ದರು ಎಂದು ಹೇಳಿದಿರಿ. ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯೊಳಗೆ ಶಿವಮೊಗ್ಗದಲ್ಲಿ ದೊಡ್ಡದೊಂದು ಜಾಡಾ ಅಡಿಕೆ ಹೊಗಿ ಬೆಳೆಗಾರರೆಲ್ಲಾ ಹಾಳಾಗಿ ಹೋಗಿದ್ದೇವೆಂದು ಮನವಿ ಸಲ್ಲಿಸಿದೆವು. ನಾವೇನು ಮಾಡಿದೆವು ಎಂದರೆ, ಇನ್ನೇನು ಅಡಿಕೆ ತೋಟದವರಿಗೆಲ್ಲಾ ರಿಲೀಫ್ ಸಿಕ್ಕೇ ಬಿಟ್ಟಿತು ಎಂದು ಇಲ್ಲಿಯವರೆಗೆ ಕಾಯುತ್ತಾ ಇದ್ದೆವು; ಆದರೆ ಅದು ಆಗಲಿಲ್ಲ. ನೀವು ಈಗ ಕಾಫಿಯವರಿಗೆ ಯಾವರೀತಿ ಕೊಟ್ಟಿದ್ದೀರೋ ಅದೇ ರೀತಿ ಅಡಿಕೆಯವರಿಗೂ ಮತ್ತು ತೆಂಗಿನವರಿಗೂ ಏನಾದರೂ ಪರಿಹಾರ ಕೊಟ್ಟರೆ ನಾವೂ ಬದುಕುತ್ತೇವೆ. ಕಾಫಿಯವರು ಕಾರಿನಲ್ಲಿ ಬಂದರು. ನಾವೆಲ್ಲಾ ನಡೆದುಕೊಂಡು ಹೋಗಿದ್ದೆವು, ಕೆಲವರು ಬಸ್ಸಿನಲ್ಲಿ ಹೋಗಿದ್ದೆವು ನಮಗೂ ಸ್ವಲ್ಪ ರಿಲೀಫ್ ಕೊಡಿ ಸಾರ್.

ಶ್ರೀ ಶಿವಾನಂದ ಎಸ್ ಪಾಟೀಲ್ : ಒಂದುಕಡೆ ಜಸ್ವಂತ್ ಸಿಂಗ್ ಬಂದರು, ಇನ್ನೊಂದು ಕಡೆ ಕಾಗೋಡು ತಿಮ್ಮಪ್ಪನವರು ಬಂದರು. ನಾವು ಯಾರಿಗೂ ಕರೆಸಿಲ್ಲ. ನಮ್ಮ ತೋಟಗಾರಿಕೆ ಬೆಳೆಗೂ ಏನಾದರೂ ಪರಿಹಾರ ಕೊಡಿ ಎಂದು ಕೇಳುತ್ತೇವೆ. ಈಗ ನಿಮ್ಮನ್ನೇ ಕರೆದುಕೊಂಡು ಹೋಗುತ್ತೇವೆ, ನೀವಾದರೂ ಕೊಡುತ್ತೀರಾ ಎಂಬುದನ್ನುಹೇಳಿ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಡ್ರಿಪ್ ಇರಿಗೇಷನ್ ಬಗ್ಗೆ ಕೊಟ್ಟಿರುವುದು ಎರಡೇ ಜಿಲ್ಲೆಗೆ ಇದೆ. ಈ ಸವಲತ್ತು ರಾಜ್ಯಕ್ಕೇ ಅನ್ವಯಿಸುವಹಾಗೆ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ : ಈಗ ಎರಡೇ ಜಿಲ್ಲೆಗೆ ಎಂದು ಇಲ್ಲ. ಬಿಜಾಪುರ ತೋಟಗಾರಿಕಾ ಜಿಲ್ಲೆ ಎಂದು ಮಾಡಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ನೀರಿಗಾಗಿ 900 ಅಡಿಯವರೆಗೂ ಬೋರ್‌ಗಳನ್ನು ಕೊರೆಯುತ್ತಿದ್ದಾರೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್ : ಇದನ್ನು ರಾಜ್ಯಕ್ಕೇ ಮಾಡಬೇಕಾದ ಅವಶ್ಯಕತೆ ಇದೆ. ಏಕೆಂದರೆ, ಡ್ರಿಪ್ ಇರಿಗೇಷನ್ ವಿಷಯದಲ್ಲಿ ಇಡೀ ರಾಜ್ಯಕ್ಕೇ ಮಾಡುವುದು ಅವಶ್ಯಕತೆ ಇದೆ. ಆ ಪರಿಸ್ಥಿತಿ ಇವತ್ತು ಇದೆ. ದಯವಿಟ್ಟು ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಅವಶ್ಯಕತೆ ಇದೆ, ಒಪ್ಪುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಬಿಜಾಪುರ ಮತ್ತು ಕೋಲಾರ ಜಿಲ್ಲೆಗೆ ಹಂಡ್ರಡ್ ಪರ್ಸೆಂಟ್ ಗ್ರಾಂಟ್ ಕೊಟ್ಟಿರುವುದು ತುಂಬಾ ಉಪಕಾರವಾಗಿದೆ. ಅದಕ್ಕಿಂತಲೂ ಹಿಂದುಳಿದಿರತಕ್ಕ ಮತ್ತು ಅಭಾವವಿರುವ ಕೆಲವು ಭಾಗಗಳಲ್ಲಿ ಡ್ರಿಪ್ ಇರಿಗೇಷನ್‌ಗೆ 50 ಪರ್ಸೆಂಟ್ ದುಡ್ಡು ಕಟ್ಟಬೇಕಾಗಿದೆ. ಇದರಿಂದ, ನೀರು ಉಳಿಯುತ್ತೆ. ರೈತರು ಬದುಕುತ್ತಾರೆ. ಮಾನ್ಯ ತೋಟಗಾರಿಕಾ ಮಂತ್ರಿಗಳು ಹೇಳಿದ್ದರು, ಇಡೀ ರಾಜ್ಯಕ್ಕೆ ಅದನ್ನು ಅನ್ವಯಿಸಬೇಕೆಂದು ಹೇಳಿದ್ದರು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರುಗಳು ಒಂದು ವಿಚಾರವನ್ನು ಗಮನಿಸಬೇಕು. ನಾವು ಈಗಾಗಲೇ 50 ಪರ್ಸೆಂಟ್ ಇಡೀ ರಾಜ್ಯದಲ್ಲಿ ಸಬ್ಸಿಡಿ ಕೊಡುತ್ತಾ ಇದ್ದೇವೆ. ಈ ಡ್ರಿಪ್ ಅಂಡ್ ಸ್ಪ್ರಿಂಕ್ಲರ್ ಇರಿಗೇಷನ್ ಸಿಸ್ಟಂಗ್.

ಶ್ರೀ ಕೆ.ಹೆಚ್. ಹನುಮೇಗೌಡ : ಕೋಲಾರ ಮತ್ತು ಬಿಜಾಪುರ ಜಿಲ್ಲೆಯ ಜನರಿಗೆ ತೊಂದರೆ ಯಾಗಿದೆ, ಕೊಟ್ಟಿದ್ದೀರಿ ಇದರಿಂದ ಒಳ್ಳೆಯದಾಗಿದೆ. ಅದಕ್ಕಿಂತಲೂ ಕಡೆ ಇರತಕ್ಕಂಥ ರೈತರು ಇದ್ದಾರೆ. ಕಳೆದ ಮೂರು ವರ್ಷಗಳಿಂದಲೂ ಮಳೆಯಾಗಿಲ್ಲ. ಲಕ್ಷಾಂತರ ತೆಂಗಿನ ಮರಗಳುಹೋದವು. ಅಡಿಕೆ ತೋಟಗಳಂತೂ ನಿರ್ನಾಮವಾಗಿ ಹೋಯಿತು. ಹಾಗೆಯೇ ಇತರೇ ತೋಟಗಾರಿಕೆ ಬೆಳೆಗಳು, ಸಪೋಟಾ, ಮಾವು ಇವುಗಳಿಗೆಲ್ಲಾ ತೊಂದರೆಯಾಗಿದೆ. ಅತ್ಯಲ್ಪ ನೀರನ್ನು ಉಪಯೋಗಿಸಿ, ಈ ಬೆಳೆಗಳನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಈಗೇನು ತಾವು ಅನುಕಂಪ ತೋರಿಸಿ, ಆ ಎರಡು ಜಿಲ್ಲೆಗಳಿಗೆ ಮಾಡಿಕೊಟ್ಟಿದ್ದೀರಿ. ಆ ಜಿಲ್ಲೆಗಳ ರೈತರ ಪರವಾಗಿ ನಿಮಗೆ ವಂದನೆಗಳನ್ನು ಹೇಳುತ್ತೇನೆ. ದಯವಿಟ್ಟು ಬೇರೆ ಜಿಲ್ಲೆಗಳಿಗೂ ಇದನ್ನು ಅಪ್ಲೈ ಮಾಡಿಕೊಡಿ. ಇದರಿಂದ ಲಕ್ಷಾಂತರ ರೈತರು ಉಳಿಯುತ್ತಾರೆ, ಬದುಕುತ್ತಾರೆ, ನಿಮ್ಮನ್ನು ಬಹಳ ವರ್ಷಗಳ ಕಾಲ ನೆನೆಸಿಕೊಳ್ಳುತ್ತಾರೆ. ಇದು ಆಗಲೇಬೇಕು.

ಶ್ರೀ ಎಸ್.ಎಂ. ಕೃಷ್ಣ : ತೆಂಗಿನವರಿಗೆ ತೊಂದರೆ ಇದೆ, ಶಿವಾನಂದ ಪಾಟೀಲರ ದ್ರಾಕ್ಷಿಗೆ ತೊಂದರೆ ಇದೆ, ದಾಳಿಂಬೆ ಹಣ್ಣಿಗೆ ತೊಂದರೆ ಇದೆ, ಇವೆಲ್ಲವನ್ನೂ ನಾನು ಒಪ್ಪುತ್ತೇನೆ. ಅಡಿಕೆಗೂ ತೊಂದರೆ ಇದೆ. ಏಕೆಂದರೆ, ನಮ್ಮ ಮಾವನವರ ಕುಡುಮಲ್ಲಿಗೆ ತೋಟವೆಲ್ಲಾ ಒಣಗುತ್ತಾ ಇದೆಯೆಂದು, ಅವರು ಬಂದು ನನಗೆ ಬೆನ್ನುಹತ್ತಿದರು. ಅಡಿಕೆಯವರಿಗೆ ಏನಾದರೂ ಮಾಡಿ ಎಂದರು. ಅದಕ್ಕೆ, ನಾವು ಪುನ: ವಾಪಸ್ ಬರುತ್ತೇವಲ್ಲಾ, ಆಗ ಇವುಗಳೆಲ್ಲದಕ್ಕೂ ಕೂಡ ನಾವು ಹೆಚ್ಚು ಒತ್ತು ಕೊಡುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಶಿವಮೊಗ್ಗದಲ್ಲಿ ಕೇಂದ್ರ ಸಚಿವರು ಭಾಷಣ ಮಾಡಿದರು. ಕಾಗೋಡುತಿಮ್ಮಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮಾನ್ಯ ಚಂದ್ರೇಗೌಡರೂ ಕೂಡ ಇದ್ದರು. ಅದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಅಡಿಕೆಯಲ್ಲಿ ಹೋದ ಮಾನ, ಆನೆ ಕೊಟ್ಟರೂ ಬರುವುದಿಲ್ಲ. ಹಾಗೆ ಅಡಿಕೆಗೆ ಏನಾದರೂ ರಿಲೀಫ್ ಕೊಟ್ಟೇಕೊಡುತ್ತೇವೆಂದು ಎರಡು ಜನ ಕೇಂದ್ರ ಸಚಿವರು ಆಶ್ವಾಸನೆ ಕೊಟ್ಟಿದ್ದರು. ಆದರೆ ಇನ್ನೂ ಏನೂ ಕೊಡಲಿಲ್ಲ. ದಯವಿಟ್ಟು ಈಗ ತಾವು ಏನಾದರೂ ಒಂದು ಸಣ್ಣ ರಿಲೀಫ್‌ನ್ನಾದರೂ ಕೊಟ್ಟರೆ ನಾವು ಬದುಕುತ್ತೇವೆ. ತಮ್ಮನ್ನು ಕೈಮುಗಿದು ಕೇಳಿಕೊಳ್ಳುತ್ತೇವೆ.

ಶ್ರೀ ಎಸ್.ಎಂ. ಕೃಷ್ಣ : ನಮ್ಮ ಕರಾವಳಿ ಪ್ರದೇಶದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮೀನುಗಾರಿಕೆ ಮಾಡಿಕೊಂಡು ಅದನ್ನು ತಮ್ಮ ಜೀವನ ವೃತ್ತಿಯಾಗಿ ಮಾಡಿಕೊಂಡು ಬಂದಿದ್ದಾರೆ. ಮೀನುಗಳನ್ನು ಸಮುದ್ರದಲ್ಲಿ ಮತ್ತಿತರ ಕಡೆ ಹಿಡಿದು ಅವುಗಳನ್ನು ಮಾರಿ, ಅದರ ಆದಾಯದಿಂದ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಅದಕ್ಕೋಸ್ಕರ ಅವರು ಬಳಸತಕ್ಕಂಥ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಏನು ಕಳೆದ ವರ್ಷ ಮನ್ನಾ ಮಾಡಲಾಗಿತ್ತು ಅದನ್ನು ಈ ವರ್ಷವೂ ಕೂಡ

ಮುಂದುವರಿಸುತ್ತಾ ಇದ್ದೇನೆ. ಮಾನ್ಯ ಅಧ್ಯಕ್ಷರೇ, ಬಾಕಿ ಹೇಳಬೇಕಾದುದು ಬಹಳಷ್ಟು ಇದೆ. ಆದರೆ ಎಲ್ಲಾ ವಿಚಾರಗಳನ್ನೂ ಕೂಡ ಆಗಿಂದಾಗ್ಗೆ ನಾವು ಹೇಳುತ್ತಲೇ ಬಂದಿದ್ದೇವೆ. ಕೊನೆಯದಾಗಿ " ಹಣಕಾಸು ಮಾರುಕಟ್ಟೆಯಲ್ಲಿನ ಒಂದು ಮುಖ್ಯ ಸಕಾರಾತ್ಮಕ ಲಕ್ಷಣ ಏನೆಂದರೆ, ಬಡ್ಡಿ ದರಗಳಲ್ಲಿ ಇಳಿಕೆ. ಆದರೂ ಅತ್ಯಂತ ಆತಂಕದ ವಿಚಾರವೆಂದರೆ, ಈ ಬಡ್ಡಿ ದರಗಳಲ್ಲಿನ ಇಳಿಕೆಯ ಲಾಭವು ಸಾಮಾನ್ಯ ರೈತರಿಗೆ ತಲುಪದಿರುವುದು. ಇದಕ್ಕೆ ಭಾಗಶ: ಕಾರಣವೇನೆಂದರೆ, ಬಡ್ಡಿ ಇಳಿಕೆ ಯೋಜನೆಗಳ ಮೇಲೆ, ಕೇಂದ್ರ ಸರಕಾರ ವಿಧಿಸಿರುವ ನಿರ್ಬಂದ ಮತ್ತು ಸಹಕಾರಿ ಸಾಲ ರಚನೆಯಲ್ಲಿನ ಕೋ-ಆಪರೇಟಿವ ಕ್ರೆಡಿಟ್ ಸ್ಟ್ರಕ್ಚರ್ ಮತ್ತು ಮಧ್ಯಂತರ ಪದರಗಳಲ್ಲಿನ ಅಂಚು ಕಾರಣವಾಗಿದೆ. ಆದರೂ ಸಾಮಾನ್ಯ ರೈತರಿಗೆ ಸುಲಭ ಸಾಲ ನೀಡುವ ವ್ಯವಸ್ಥೆ ಬಗ್ಗೆ, ಮೂರು ಜಿಲ್ಲಾ ಸಹಕಾರಿ ಬ್ಯಾಂಕುಗಳು ದಾರಿ ತೋರಿಸಿವೆ. ಹಾಸನ, ಕೊಡಗು ಮತ್ತು ದಕ್ಷಿಣ ಕನ್ನಡ. ಈ ಮೂರು ಜಿಲ್ಲಾ ಸಹಕಾರಿ ಬ್ಯಾಂಕುಗಳು ಶೇಕಡ 9ರ ಬಡ್ಡಿ ದರದಲ್ಲಿ ಸಾಲ ನೀಡುವ ಕಾರ್ಯಕ್ರಮವನ್ನು ಪ್ರಕಟಿಸಿವೆ. ಅವರನ್ನು ನಾನು ಮನಸಾರೆ ಅಭಿನಂದಿಸುತ್ತೇನೆ. ಈ ಮಾದರಿಯನ್ನು ಅನುಕರಿಸಲು ಒಂದು ಯೋಜನೆಯನ್ನು ರೂಪಿಸಲಾಗುತ್ತಿದೆ. ಜಿಲ್ಲಾ ಸಹಕಾರಿ ಬ್ಯಾಂಕುಗಳಿಗೆ ಸಹಾಯವನ್ನು ನೀಡುವ ಮೂಲಕ ಹಾಗೂ ಸಹಕಾರಿ ಸಾಲ ನೀಡಿಕೆಯಲ್ಲಿ ಸುಧಾರಣೆ ತರುವ ಮೂಲಕ ರೈತರಿನ ಶೇಕಡ 8.5 ರ ಬಡ್ಡಿ ದರದಲ್ಲಿ ಸುಲಭ ಸಾಲ ಒದಗಿಸುವ ಯೋಜನೆಯು 2004ರ ಏಪ್ರಿಲ್ 1 ರಿಂದ ಜಾರಿಗೆ ಬರಲಿದೆ. ಮಾನ್ಯ ಅಧ್ಯಕ್ಷರೇ, ಇಷ್ಟು ನಾನು ತಮ್ಮ ಮುಂದೆ ಬಿನ್ನವಿಸಿಕೊಳ್ಳ ಬೇಕಾಗಿದೆ. ಹಲವಾರು ಸಲಹೆಗಳು ಇನ್ನೂ ಇವೆ. ಏಕೆಂದರೆ ಅಜೆಂಡವನ್ನು ಐದು ವರ್ಷಗಳಲ್ಲಿ ಯಾವ ಸರಕಾರವೂ ಕಂಪ್ಲೀಟ್ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಮ್ಯಾಂಡೇಟ್ ಅವಶ್ಯಕತೆಯಿದೆ. ಮ್ಯಾಂಡೇಟ್ ರಿನ್ಯೂ ಮಾಡಬೇಕು. ನಾಲ್ಕೂವರೆ ವರ್ಷಗಳಲ್ಲಿ ಕರ್ನಾಟಕವನ್ನು ನಮ್ಮ ರಾಷ್ಟ್ರದ ವಿಕಾಸ, ಬೆಳಬಣಿಗೆ, ಅಭಿವೃದ್ಧಿ, ಈ ಭೂ ಪಟದಲ್ಲಿ ಕರ್ನಾಟಕಕ್ಕೆ ವಿಶೇಷ ಸ್ಥಾನವನ್ನು ಸೃಷ್ಟಿ ಮಾಡುವುದರಲ್ಲಿ ನಿಮ್ಮೆಲ್ಲರ ಸಹಕಾರವನ್ನು ನಾವು ಪಡೆದು ಯಶಸ್ವಿಯಾಗಿದ್ದೇವೆ. ಇದಕ್ಕೆ ಟೀಕೆಗಳ ಮೂಲಕ ನಮಗೆ ಸಹಕರಿಸಿದ್ದೀರಿ. ಸಲಹೆಗಳ ಮೂಲಕ ಸೂಕ್ತ ಸಲಹೆಗಳನ್ನು ಕೊಟ್ಟಿದ್ದೀರಿ. ಕೇಳುವುದರ ಮುಲಕ ಇವರುಗಳು ನನಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಕೇಳುವುದು ಅಂದರೆ ಹಲವಾರು ಮಾನ್ಯ ಸದಸ್ಯರುಗಳ ಜ್ವಲಂತ ಸಮಸ್ಯೆಗಳ ಬಗ್ಗೆ ಈ ಭಾಗದಿಂದ ಬೆಳಕನ್ನು ಚೆಲ್ಲಿದ್ದಾರೆ. ಅವರೆಲ್ಲರಿಗೂ ಕೂಡ ನನ್ನ ನಮನಗಳನ್ನು ಸಮರ್ಪಣೆ ಮಾಡಿ, ಈ ಐದನೇ ಆಯವ್ಯಯವನ್ನೇನು ನಾನು ಮಂಡಿಸಿದೆ, ಅದಕ್ಕೆ ಸೂಕ್ತವಾದಂಥ ರೀತಿಯಲ್ಲಿ ಈ ಸಭೆ ಅದನ್ನು ಒಪ್ಪಿಕೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಅರಿಕೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಗದೀಶ್ ಶೆಟ್ಟರು : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳವರು ಬಜೆಟ್ ಮೇಲಿನ ಚರ್ಚೆಗೆ ಸಂಬಂಧ ಪಟ್ಟ ಹಾಗೆ ಉತ್ತರವನ್ನು ಕೊಟ್ಟಿದ್ದಾರೆ. ಅವರು ನೀಡಿದಂಥ ಹೊಸ ಹೊಸ ವಿಚಾರಗಳು ಮತ್ತು ಯೋಜನೆಗಳು, ಇವನ್ನೆಲ್ಲಾ ನೋಡಿದಾಗ ಚುನಾವಣೆಗಳು ಬಹಳ ಹತ್ತಿರ ಬರುತ್ತಾ ಇದೆ ಎಂದು ಹೇಳಿ, ನನಗನ್ನಿಸುತ್ತಾ ಇದೆ.

ಗೊಂದಲ

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತಾನಾಡುವಾಗ ದಯವಿಟ್ಟು ಬೇರೆ ಯಾರೂ ಮಾತನಾಡ ಬಾರದು.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬಹಳ ಹೃದಯ ವೈಶಾಲ್ಯತೆಯಿಂದ ಮಾನ್ಯ ಶಾಸಕರುಗಳು ಏನೇನು ಕೇಳಿದರು ಎಲ್ಲದಕ್ಕೂ Yes...ಎಂದಿದ್ದಾರೆ. ಈ ನಾಲ್ಕು ವರ್ಷಗಳ ಬಜೆಟ್‌ನಲ್ಲಿ ಈ ರೀತಿಯಾಗಿ Yes...ಅಂದಿದ್ದು ಮೊದಲನೇ ಸಲ ಎಂದು ಕಾಣುತ್ತದೆ. ಅವರೇನು ಹೊಸ ಹೋಜನೆಗಳನ್ನೇನು ಘೋಷಣೆ ಮಾಡಿದರು, ಇನ್ನೊಂದು ಅವರು ಮಂಡನೆ ಮಾಡಬೇಕಾಗಿತ್ತು. ಹೆಚ್ಚುವರಿಯಾಗಿ ಮಿನಿ ಬಜೆಟ್ ಮಂಡನೆಯು ಅವರಿಂದ ಆಗಬೇಕಾಗಿತ್ತು. ಅದನ್ನು ಅವರು ಮೌಖಿಕವಾಗಿ ಹೇಳಿದ್ದಾರೆ ಅದನ್ನು ನಾವು ಮಿನಿಬಜೆಟ್ ಎಂದು ಹೇಳ ಬೇಕಾಗುತ್ತದೆ. ಅವರು ಕೆಲವೊಂದು ಪ್ರಮುಖ ವಿಚಾರಗಳಿಗೆ ಸ್ಪಂದನ ಮಾಡಲಿಲ್ಲ. ನಾವು ಎತ್ತಿದ ಅಂಥ ವಿಚಾರಗಳ ಬಗ್ಗೆ ಅವರು ಯಾವುದೇ ರೀತಿಯ ಸ್ಪಂದನೆಯನ್ನು ಮಾಡಲಿಲ್ಲ. ಬೆಲೆ ವಿಮೆ ಹಣದ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿ ಎಂದು ಕೇಳಿದ್ದೆವು. ಯಾವ ಯಾವ ಜಿಲ್ಲೆಗೆ ಎಷ್ಟು ಕೊಟ್ಟಿದ್ದೀರಿ ಎಂಬುದು ಬೇಕಾಗಿದೆ. ಮೊನ್ನೆ ನವಲಗುಂದದಲ್ಲಿ ಲಾಠಿ ಚಾರ್ಜ್ ಆಯಿತು. ಅಲ್ಲಿನ ರೈತರು ಕಂಗಾಲಾಗಿದ್ದಾರೆ. ಏಕೆಂದರೆ ಅಲ್ಲಿ ಬಹಳ ತಾರತಮ್ಯವಾಗಿದೆ. ಅಕ್ಕಪಕ್ಕದಲ್ಲಿನ ಗದಗ ಜಿಲ್ಲೆಯ ತಾಲ್ಲೂಕುಗಳಿಗೆ ಹೆಚ್ಚು ಹಣ ಹೆಚ್ಚು ಪರಿಹಾರ ಅದೇ ನವಲಗುಂದ ತಾಲ್ಲೂಕಿನ ರೈತರಿಗೆ ಕಡಿಮೆ ಹಣ ಕಡಿಮೆ ಪರಿಹಾರ ಆದರೆ ಎಲ್ಲಾ ಬೆಳೆಗಳು ಸಾಮಾನ್ಯವಾಗಿ ಒಂದೇ ಇರುತ್ತದೆ. ಅವರಿಗೂ ಅಷ್ಟೇ ನಷ್ಟವಾಗಿದೆ. ಆದರೂ ಕೂಡ ಅಲ್ಲಿ ತಾರತಮ್ಯವನ್ನು ಮಾಡಿದ್ದಾರೆ. ಅದನ್ನು ಸರಿಪಡಿಸುವ ಕೆಲಸವು ಆಗಬೇಕಾಗಿದೆ. ಅದಕ್ಕಾಗಿಯೇ ಹೋರಾಟ ನಡೆಯುತ್ತಿದೆ. ಹಾಸನ ತಾಲ್ಲೂಕಿನಲ್ಲೂ ಹೀಗೆ ಆಗಿದೆ. ಹೀಗಾಗಿ ಇದರ ಬಗ್ಗೆ ಒಂದು ಸರಿಯಾದಂಥ ತಿಳುವಳಿಕೆ ಮತ್ತು ಮುಂಗಾರು ಬೆಲೆ ವಿಮೆ ಹಣ ಕ್ಲೈಮ್ ಸೆಟ್ಲ್ ಆಗಿಲ್ಲ. ಎಷ್ಟು ಹಣ ಕೊಡಬೇಕೆಂಬುದು ನಿರ್ಧಾರವಾಗಿಲ್ಲ. ಇವೊತ್ತು 110 ಕೋಟಿ ರೂ ಮತ್ತು 15 ಕೋಟಿ ರೂ.ಗಳನ್ನು ಮತ್ತೆ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ನಿಜವಾಗಿ ಎಷ್ಟೆಷ್ಟು ಹಣ ಇದುವರೆಗೂ ಬಿಡುಗಡೆಯಾಗಿದೆ, ಮುಂಗಾರು ಬೆಳೆ ವಿಮೆ ಹಣವನ್ನು ಎಷ್ಟು ಬಿಡುಗಡೆ ಮಾಡುತ್ತಿದ್ದೀರಿ, ಅದಕ್ಕೆ ಎಷ್ಟು ಕ್ಲೈಮ್ ಮಾಡಿದ್ದೀರಿ, ಎಷ್ಟು ಸೆಟಲ್‌ಮೆಂಟ್ ಆಗಿದೆ, ಈ ವಿವರಗಳೆಲ್ಲಾ ಬೇಕು ಎಂದು ನಾವು ಕೇಳಿದ್ದೆವು. ಆ ಕುರಿತು ಸ್ಪಷ್ಟೀಕರಣ ಬರಲಿಲ್ಲ. ಏನು ಗೊಂದಲ ನಿರ್ಮಾಣವಾಗಿತ್ತು ಅದು ಮುಂದುವರಿಯುತ್ತಾ ಇದೆ. ಬೆಳೆ ವಿಮೆ ಬಗ್ಗೆ ಪ್ರತಿಯೊಂದು ತಾಲ್ಲೂಕಿನಲ್ಲಿ ಹೋರಾಟ ನಡೆಯುತ್ತಾ ಇದೆ. ಈ ಗೊಂದಲ ನಿವಾರಣೆಯಾಗಿಲ್ಲ. ಆ ಕುರಿತು ಒಂದು ಸ್ಪಷ್ಟ ಚಿತ್ರಣ ಸದನಕ್ಕೆ ಬರಬೇಕಾಗಿದೆ. ಅದು ಇನ್ನೂ ಬರಲಿಲ್ಲ. ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಅವುಗಳಿಗೆ ಸಬ್ಸಿಡಿಯನ್ನು ಕೊಡುವ ಬಗ್ಗೆ ನಾವು ಪ್ರತಿ ಸಲವೂ ಸದನದಲ್ಲಿ ಮಾತನಾಡಿದ್ದೇವೆ. 400 ಕೋಟಿರೂಗಳಿಗಿಂತಲೂ ಹೆಚ್ಚು ಸಬ್ಸಿಡಿ ಹಣವನ್ನು ಕೊಡಬೇಕಾಗಿದೆ. ಅದರ ಬಗ್ಗೆ ಚಕಾರವೆತ್ತಿಲ್ಲ. ಆ ಬಗ್ಗೆ ಬಾಂಡ್ಸ್ ಮುಖಾಂತರ ಎಂದು ಹೇಳಿದ್ದರು. ಆ ಮಾತುಗಳನ್ನು ಎರಡು ವರ್ಷಗಳ ಹಿಂದೆ ಕಾಶಪ್ಪನವರು ಜೀವಂತವಿದ್ದಾಗ ಹೇಳಿದ್ದರು. ಈಗ ಮತ್ತೆ ಅದೇ ಪುನರಾವೃತ್ತಿಯಾಗುತ್ತಿದೆ. ಇನ್ನೇನು ಸರಕಾರದ ಅವಧಿಯು ಮುಗಿಯುತ್ತದೆ. ಈ ಬಾಂಡ್ಸ್ ಬೇಡ ಎಂದು ಹೇಳಿದ್ದೆವು. ನಿಮಗೆ ಹಣವನ್ನು ಕೊಡಲು ಆಗದಿದ್ದರೆ ಅವರೇನು ತೆರಿಗೆಯನ್ನು ಕೊಡುತ್ತಾರೆ, ಮಾರಾಟ ತೆರಿಗೆ ಇತ್ಯಾದಿ, ಅದನ್ನಾದರೂ ಅಡ್‌ಜಸ್ಟ್ ಮಾಡಿ ಎಂದು ಹೇಳಿದ್ದೆವು. ಅದಕ್ಕೂ ಯಾವ ರೆಸ್ಪಾನ್ಸ್ ಇಲ್ಲ. ಅಂದರೆ ಹಣವನ್ನು ಕೊಡುವ ಮನಸ್ಸು ಸರಕಾರಕ್ಕೆ ಇಲ್ಲ. ಶೇಕಡ 60–70 ರಷ್ಟು ಸಣ್ಣ ಕೈಗಾರಿಕೆಗಳು ಎಲ್ಲವೂ ಮುಚ್ಚಿ ಹೋಗುತ್ತಾ ಇವೆ.

1.40 ಪಿ.ಎಂ

ಹೀಗಾಗಿ ನೀವು ಈ ಕಡೆ ಬಾಂಡೂ ಇಶ್ಯೂ ಮಾಡುವುದಿಲ್ಲ. ಆ ಕಡೆ ಬೇರೇನೂ ವ್ಯವಸ್ಥೆ ಇಲ್ಲ. ನಿಮಗೆ ಕೊಡುವ ಮನಸಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ. ಮತ್ತೊಂದು ನೇಕಾರರ ಬಗ್ಗೆ,ನೀವು special package ಅಂತ ಮಾಡಿದಿರಿ, ಆದರೆ ನಾನು ಹೇಳುತ್ತಿದ್ದೇನೆ, ಇವತ್ತು ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಸರ್ಕಾರದಿಂದ 17 ಕೊಟಿ ರೂ ಬಾಕಿ ಕೊಡುವುದಿದೆ, ಅದರೆ ಕೊಡುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ ನೀವು ಆ ಬಾಕಿ ಪೇಮೆಂಟ್ ಮಾಡಿದರೆ ಅವರು ಬದುಕುತ್ತಾರೆ, ಆ ನೇಕಾರಿಗೆ ನೂಲು ಸಿಗುವಂತಹದು, ಕೂಲಿ ಬಾಕಿ ಇದೆ, ಅವರು ಬದುಕಲು ಸಾಧ್ಯವಿದೆ, ಅದರ ಬಗ್ಗೆ ಏನೂ ಹೇಳಲಿಲ್ಲ, ಮಾನ್ಯ ಮುಖ್ಯಮಂತ್ರಿಗಳು. ಹೀಗಾಗಿ ಇವತ್ತು ನೇಕಾರರ ಬಗ್ಗೆಯೂ ಕಾಳಜಿ ಇಲ್ಲ, ಮತ್ತು ಕಬ್ಬು ಬೆಳೆಗಾರರ ಬಗ್ಗೆ, ಕಬ್ಬು ಬೆಳೆಗಾರರ ಬಗ್ಗೆ ಪ್ರಸ್ತಾಪವಾಯಿತು, ಪಾಂಡವಪುರ ಸಕ್ಕರೆ ಕಾರ್ಖಾನೆಗೆ ನೀವು ಸಹಾಯ ಅನುದಾನ ಕೊಡುತ್ತೀರಿ, ಆದರೆ ಬೆಳಗಾವಿ ಜಿಲ್ಲೆಯಲ್ಲಿರುವ ಭಾಗ್ಯಲಕ್ಷ್ಮಿ ಶುಗರ್ ಫ್ಯಾಕ್ಟರಿ ಇರಬಹುದು ಇನ್ನಿತರ ಶುಕರ್ ಕಂಪೆನಿಗಳದು 15 ಕೋಟಿ ರೂಗಿಂತ ಇವತ್ತು ಬಾಕಿ ಪೆಂಡಿಂಗಿದೆ. ಅದರ ಬಗ್ಗೆ ಏನೂ ಇಲ್ಲ ಚಕಾರ, ಮತ್ತು ಕೆಲವೊಂದು ಸಕ್ಕರೆ ಕಾರ್ಖಾನೆಗಳನ್ನು ಬಂದ್ ಮಾಡಿಸಲು ಹೊರಟಿದ್ದೀರಿ, ಕ್ಯಾಬಿನೆಟ್ ನಿರ್ಧಾರವಾಗಿದೆ. ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗಿತ್ತು. ಅದೂ ಏನೂ ಇಲ್ಲ, ಅವರು ಎಲ್ಲಿಗೆ ಹೋಗಬೇಕು? ಇನ್ನು ಉತ್ತರ ಕರ್ನಾಟಕದ ಬಗ್ಗೆ, ಇವತ್ತು ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿ ಅಂತ ಮಾಡಿದ್ದಿರಿ, ಅದು ರದ್ದು ಮಾಡಿದಿರಿ, ಮತ್ತೆ, ಹಳೇ ವ್ಯವಸ್ಥೆಯನ್ನೇ ಮುಂದುವರೆಸಿದಿರಿ, ಎಲ್ಲಾ ಕಡೆಯಿಂದ ಪ್ರತಿಭಟನೆ ಬಂತು, ಬಯಲುಸೀಮೆ ಹೈದರಾಬಾದ್‌ಕರ್ನಾಟಕ ಮಲೆನಾಡು– ಇವನ್ನೆಲ್ಲಾ ಮುಂದುವರೆಸಿದಿರಿ, ಒಳ್ಳೆಯದಾಯಿತು, ಕೇವಲ ಮುಂದುವರೆಸಿದರಷ್ಟೇ ಅಲ್ಲ ಅದಕ್ಕೆ ಹೆಚ್ಚಿನ ಅನುದಾನ ಕೊಡುವಂತಹದು ಆಗಬೇಕು. ಒಂದೊಂದು ಕ್ಷೇತ್ರಕ್ಕೆ ನಾಲ್ಕು ಐದು ಲಕ್ಷರೂ ಸಿಗುತ್ತಾ ಇಲ್ಲ, ಹೀಗಾಗಿ ಹೆಚ್ಚಿಗೆ ಅನುದಾನ ಕೊಡುವ ಬಗ್ಗೆ ಸರಿಯಾದ ಸ್ಪಷ್ಟೀಕರಣ ಬೇಕು. ಮತ್ತು ಶಾಸಕರ ಅಭಿವೃದ್ಧಿ ಅನುದಾನ, ಕಳೆದ ಬಾರಿಯೂ ಪ್ರಸ್ತಾಪ ಮಾಡಿದ್ದೆವು, ಮುಖ್ಯಮಂತ್ರಿಗಳು ಸದನದಲ್ಲಿ ಸ್ಪಷ್ಟವಾದ ಭರವಸೆ ಕೊಟ್ಟಿದ್ದರು, ಇಲ್ಲ, ಹೋದ ವರ್ಷವೆಲ್ಲಾ ಬರಗಾಲ ಇದ್ದುದ್ದರಿಂದ ಕೊಡಲಿಲ್ಲ, ಈ ವರ್ಷ 40 ಲಕ್ಷ ರೂ. ಅರಿಲೀಸ್ ಮಾಡುತ್ತೇವೆ ಅಂತ ಹೇಳಿದ್ದರು. ಇಲ್ಲಿಯವರೆಗೂ ರಿಲೀಸಾಗಲಿಲ್ಲ, ಅದರ ಬಗ್ಗೆ ಏನೂ ಚಕಾರ ಇಲ್ಲ, ಮುಖ್ಯಮಂತ್ರಿಗಳು ಏನೂ ಹೇಳಲು ತಯಾರಿಲ್ಲ, ಅಟ್‌ಲೀಸ್ಟ್ ಏನಾದರೂ ಹೇಳಬೇಕಲ್ಲಾ ಕೊಡುವುದಿಲ್ಲ ಅಂದರೆ ಕೊಡುವುದಿಲ್ಲ ಅಂತಾದರೂ ಹೇಳಿ, ಇಲ್ಲದಿದ್ದರೆ ಜನ ಅಲ್ಲಿ ನಮ್ಮನ್ನು ಬಿಡುವುದಿಲ್ಲ, ಮತದಾರರು. ನಲವತ್ತು ಲಕ್ಷ ರು. ಹಣ ಬರುತ್ತಾ ಇದೆ, ನೀವ್ಯಾತಕ್ಕೆ ಖರ್ಚು ಮಾಡುತ್ತಿಲ್ಲ ಅಂತ ನಮ್ಮನ್ನು ಕೇಳುತ್ತಾ ಇದ್ದಾರೆ. ಇದರ ಬಗ್ಗೆ ಆಗುವುದಿಲ್ಲ ಅಂದರೆ ಆಗುವುದಿಲ್ಲ ಅಂತ ಹೇಳಿ, ಹಣಕಾಸಿನ ತೊಂದರೆಯಲ್ಲಿದ್ದೇವೆ, ಬಹಳ crisis ನಲ್ಲಿದ್ದೇವೆ, ನಮಗೆ ಆಗುವುದಿಲ್ಲ ಅಂತಾದರೆ ಆಗುವುದಿಲ್ಲ ಅಂತ ಹೇಳಿ, ಇಲ್ಲ ಕೊಡುತ್ತೇವೆ ಅಂದರೆ ಕೊಡುತ್ತೇವೆ ಅಂತಾದರೂ ಹೇಳಿ, ಅದು ಒಂದು ಸ್ಪಷ್ಟೀಕರಣವಾಗಬೇಕಾಗಿದೆ. ಆಮೇಲೆ ಮುಖ್ಯಮಂತ್ರಿಗಳ ಸಡಕ್ ಯೋಜನೆ, ಪ್ರಧಾನಮಂತ್ರಿಗಳ ಸಡಕ್ ಯೋಜನೆಯ ಹಾಗೆ. 1.25 ಕೋಟಿ ರೂ, ಅದು ಇನ್ನೂ ಹಣ ರಿಲೀಸಾಗುತ್ತಾ ಇಲ್ಲ, ಈಗಾಗಲೇ ಯಾವ್ಯಾವ ರಸ್ತೆಗಳನ್ನು ಮಾಡಬೇಕಾಗಿದೆ ಅಂತ ಲಿಸ್ಟ್ ಹೋಗಿದೆ. ಆದರೆ ಇನ್ನೂವರೆಗೆ ಹಣ ಬರಲಿಲ್ಲ, ಹೀಗಾಗಿ ಅದರ ಬಗ್ಗೆ ಗೊಂದಲ ನಿರ್ಮಾಣವಾಗಿದೆ. ನಾನು ಇನ್ನೊಂದು ಮಾತು ಹೇಳಿದ್ದೆ: ಕೆರಾಯ್ಡು ಬಗ್ಗೆ, ಅದರ ಬಗ್ಗೆ ಏನೂ ಉತ್ತರ ಕೊಡಲಿಲ್ಲ, ಇವತ್ತೇನು ಕೆರಾಯ್ಡು' ಅಂತ ಸಂಸ್ಥೆ ಮಾಡಿದ್ದಿರಿ ಕೆಲವು ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಹಣ

ಕೊಡುತ್ತೇವೆ ಅಂತ ಹೇಳಿದ್ದಿರಿ ಅದರ ಬಗ್ಗೇನೂ ಯಾವ ಒಂದು ಚಕಾರ ಇಲ್ಲ, ಆಮೇಲೆ ಇನ್ನೊಂದು ಬಹಳ ಮಹತ್ವದ ವಿಷಯವನ್ನು ಎತ್ತಿದ್ದೆವು, ಹೈಕೋರ್ಟ್ ಪೀಠದ ಬಗ್ಗೆ. ಬಜೆಟ್‌ನಲ್ಲಿ ಏನೂ ಇಲ್ಲ, ಹೋದ ಸಲ 10 ಕೋಟಿ ರೂ ಅಂತ ಹೇಳಿದಿರಿ. ಅಲ್ಲಿ ಸಾರ್ವಜನಿಕರು ಇತರರೆಲ್ಲಾ ಹೋರಾಟ ಮಾಡುತ್ತಿದ್ದಾರೆ, ಅಟ್‌ಲೀಸ್ಟ್ ಮೂಲಭೂತ ಸೌಕರ್ಯದ ಸಲುವಾಗಿ 150 ಕೋಟಿ ರೂ ಹಣ ನೀವು ನಿಗದಿ ಮಾಡಿ ಅಂತ ಮಾತು ಹೇಲಿದ್ದೆವು. ಮತ್ತು ಪತ್ರಿಕೆಯಲ್ಲಿ ಬಂದಿದೆ, ಮಾನ್ಯ ಚಂದ್ರೇಗೌಡರು ಮುಖ್ಯ ನ್ಯಾಯಾಧೀಶರನ್ನು ಭೇಟಿಯಾದಾಗ, ಮೂಲಭೂತ ಸೌಕರ್ಯ ಒದಗಿಸಿಕೊಟ್ಟರೆ ನಾವು ಹೈಕೋರ್ಟ್ ಪೀಠದ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇವೆ ಎಂಬ ಮಾತನ್ನು ಮುಖ್ಯ ನ್ಯಾಯಾಧೀಶರು ಹೇಳಿದರು, ಈಗ ಅದರ ಬಗ್ಗೆ ಕೊನೇ ಪಕ್ಷ ಬಜೆಟ್‌ನಲ್ಲೂ ಇಲ್ಲ, ಉತ್ತರದಲ್ಲಾದರೂ ಹೇಳುತ್ತಾರೆ ಅಂದರೆ ಅದರ ಸುದ್ದಿನೇ ಇಲ್ಲ. ಅಂದರೆ ಉತ್ತರ ಕರ್ನಾಟಕದ ಬಗ್ಗೆ ಎಷ್ಟೊಂದು ನಿರ್ಲಕ್ಷ್ಯ ಎಂಬುದು ಇದರಿಂದ ಅರ್ಥವಾಗುತ್ತದೆ. ಇನ್ನೊಂದು ಪ್ರಮುಖವಾಗಿ ಡಾ॥ ನಂಜುಂಡಪ್ಪನವರ ವರದಿ. ನಾನು ಹೇಲಿದ್ದೆ ಅದನ್ನು ಕಸದ ಬುಟ್ಟಿಗೆ ಚೆಲ್ಲಿಬಿಟ್ಟಿದ್ದೀರಿ ಅಂತ. ಸುಮ್ಮನೆ ಕಸದ ಬುಟ್ಟಿಗೆ ಚೆಲ್ಲಿದ ಬಗ್ಗೆ ಹೇಳಿಬಿಡಿ. 1500 ಕೋಟಿ ರೂ ವಿಶೇಷವಾದ ಅನುದಾನ, ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ, ಅಷ್ಟೂ ಹಣವನ್ನು ಒಂದೇ ಸಲಕ್ಕೆಕೊಡಬೇಕೆಂದು ಅಲ್ಲ, ಹಂತಹಂತವಾಗಿ ಕೊಡಬಹುದಾಗಿತ್ತು ಅದರ ಬಗ್ಗೆ ಏನೂ ಇಲ್ಲ. ಹೀಗಾದರೆ, ಇವತ್ತು ಡಾ॥ ನಂಜುಂಡಪ್ಪನವರಿಂದ ವರದಿ ತರಿಸಿಕೊಂಡು ಉತ್ತರ ಕರ್ನಾಟಕದ ಹೈಕೋರ್ಟ್ ಪೀಠದ ಬಗ್ಗೆ ಯಾವುದೇ ಚಕಾರ ಇಲ್ಲದೇ ಇದ್ದರೆ ಯಾವರೀತಿ ಉತ್ತರ ಕರ್ನಾಟಕದ ಬಗ್ಗೆ ನಿಮ್ಮ ಭಾವನೆ ಇದೆಯೆಂಬುದು ಅರ್ಥವಾಗುತ್ತದೆ. ಈ ವಿಷಯಗಳ ಬಗ್ಗೆ ಮುಖ್ಯಮಂತ್ರಿಗಳಿಂದ ನಾನು ಸ್ಪಷ್ಟೀಕರನ ಕೇಳಬಯಸುತ್ತಾ ಇದ್ದೇನೆ. ಇನ್ನೊಂದು ನಾನು ಹೇಳುವುದು, ರೈತರ ಬಡ್ಡಿ ಮನ್ನಾ ಬಗ್ಗೆ. ಇವತ್ತು ಬರಗಾಲ ಕಾಮಗಾರಿಯೂ ನಡೆಯುತ್ತಿಲ್ಲ, ಆಮೇಲೆ ಎಲ್ಲೂ ಗೋಶಾಲೆಗಳನ್ನು ಪ್ರಾರಂಭ ಮಾಡಿಲ್ಲ, ಹೀಗಾಗಿ ರೈತರು ಜನುವಾರುಗಳನ್ನು ಮಾರಿಕೊಂಡು ಹೋಗಿದ್ದಾರೆ, ಅದಕ್ಕೇ ಸಂಪೂರ್ಣವಾದ ಬಡ್ಡಿ ಮನ್ನಾ ಒಂದು ಸಲ ಆಗಬೇಕೆಂದು ಮೊದಲಿಂದಲೂ ನಾವು ಬೇಡಿಕೆ ಇಡುತ್ತಿದ್ದೇವೆ, ಮತ್ತೆ ನಾನು ಡಿಮಾಂಡ್ ಮಾಡುತ್ತಿದ್ದೇನೆ, ಒಂದು ಸಲ ಮೂರು ವರ್ಷದ್ದು ಸಂಪೂರ್ಣ ರೈತರ ಬಡ್ಡಿ ಮನ್ನಾ ಮಾಡಿ, ಹಾಗೆ ಏನಾದರೂ ಒಂದು ರಿಲೀಫ್ ಕೊಡಲು ಸಾಧ್ಯವಿದೆ, ಇಲ್ಲದೇಹೋದರೆ ಇದು ನಾಲ್ಕನೇ ವರ್ಷದ ಬರಗಾಲದ ಪರಿಸ್ಥಿತಿ, ಬಹಳ ತೊಂದರೆಯಲ್ಲಿದ್ದಾರೆ. ಈ ಕೆಲವು ವಿಷಯಗಳ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು ಅಂತ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಕೇಂದ್ರ ಸರ್ಕಾರದಿಂದ ಸಾಲವನ್ನೇ ಮನ್ನಾ ಮಾಡಿಸಿಬಿಡ್ರಿ, ಬರೇ ಬಡ್ಡಿ ಯಾಕೆ?

ಶ್ರೀ ಬಿ ಸೋಮಶೇಖರ್: ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೋದ ವರ್ಷ ಸಹ ನಾವೇನು ಆರೋಪ ಮಾಡಿದ್ದೆವು ಈ ಸರ್ಕಾರದ ಸಾಲ ಕಳೆದ ಐದು ವರ್ಷಗಳಿಗಿಂತ ಹೆಚ್ಚು ಮಾಡಿದ್ದಾರೆ ಸಾಲದಿಂದ ನಡೆಯುತ್ತಿದೆ ಎಂಬ ಆರೋಪವನ್ನು ನಾವು ಎರಡು ಮೂರು ವರ್ಷಗಳಿಂದ ಮಾಡುತ್ತಾ ಬಂದಿದ್ದೇವೆ, ಆದರೆ ಮುಖ್ಯಮಂತ್ರಿಗಳು ಹೋದ ವರ್ಷ ಸಹ ಇದೇ ರೀತಿ ಸಮರ್ಥನೆ ಮಾಡಿದ್ದಾರೆ, ಈ ವರ್ಷ ಏನು ಸಮರ್ಥಿಸಿದ್ದಾರೆ ಅದನ್ನೇ ಸಮರ್ಥನೆ ಮಾಡಿ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಮತ್ತು ಕೇಂದ್ರದ debt service percentageಗೆ ಹೋಲಿಸಿದಾಗ ನಮ್ಮ ರಾಜ್ಯ ಬಹಳ ಕಡಿಮೆ ಇದೆಯೆಂದು ಹೋಲಿಸಿದ್ದಾರೆ. ಈ ಅಧಿವೇಶನ ಮುಗಿದರೂ ಬಹುಶ: ಚುನಾವಣೆ ಆಗುವ ತನಕ

ಸರ್ಕಾರ ಇರುತ್ತದೆ ಅಂತ ನಾನು ಅಂದುಕೊಂಡಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಸಹಾಯ ಮಾಡಬೇಕು: ಅಂಕಿ ಅಂಶಗಳನ್ನು ಒಂದೆರಡು ದಿವಸದಲ್ಲಿ ನಮಗೆ ಕೊಡಬಹುದು, ತಮ್ಮ ಸರ್ಕಾರ ಅಂತೂ ಇರುತ್ತದೆ ಚುನಾವಣೆ ತನಕ, ನಮಗೇನು ಬೇಕಾಗಿದೆ ಇದೇನು justification ತಾವು ಮಾಡಿದ್ದೀರಿ 95ರಿಂದ 99ರವರೆಗೆ ಒಂದು ಪ್ಯಾರದಲ್ಲಿ ನಮ್ಮ ಸರ್ಕಾರವನ್ನೂ ತಾವು ಟೀಕೆ ಮಾಡಿದ್ದೀರಿ, ಹಿಂದಿನವರು ಕೊಟ್ಟ ಆರ್ಥಿಕ ಬುನಾದಿ ನಮಗೆ ಕಷ್ಟವಾಗಿದೆ ಅಂತ ಹೇಳಿದ್ದೀರಿ, ಅದಕ್ಕೇ ನಾನು ಕೇಳುವುದು 95ರಿಂದ 99ರವರೆಗೆ India's debt service ಗೆ ಹೋಲಿಸಿದಾಗ ನಮ್ಮ ಸರ್ಕಾರದ್ದೇಷ್ಟಿತ್ತು? ಬೇರೆ ರಾಜ್ಯಗಳದು ಎಷ್ಟಿತ್ತು? 2000 ದಿಂದ 2004ರವರೆಗೆ ಅದು ಎಷ್ಟು ಏರಿದೆ ಎಂಬ percentage wise comparison ಸ್ವಲ್ಪ ಕೊಟ್ಟರೆ ಬಹಳ ಸಹಾಯವಾಗುತ್ತದೆ. ಅವರೇನು ಸಮರ್ಥನೆ ಮಾಡಿಕೊಂಡಿದ್ದಾರೆ ಅದಕ್ಕೂ ನಿಜಾಂಶಕ್ಕೂ ಅರ್ಥ ಬರುತ್ತದೆ ಎಂಬುದು ನನ್ನ ವಾದ. ಇನ್ನೊಂದು ಮಂಡ್ಯ ಪ್ಯಾಕೇಜ್ ಅಂತ ಮುಖ್ಯಮಂತ್ರಿಗಳು ಮೂರು ವರ್ಷಗಳಿಗೆ ಒಂದು ಪ್ಯಾಕೇಜ್ ಮಾಡಿದರು, ಇಲ್ಲಿಗೆ ಎರಡನೇ ವರ್ಷದ ಪ್ಯಾಕೇಜ್ ನಡೆಯಬೇಕಾಗಿತ್ತು. ಆದರೆ ಮೊದಲನೇ ವರ್ಷದ ಪ್ಯಾಕೆಜಿಗೂ ಇನ್ನೂ ದುಡ್ಡು ಕೊಟ್ಟಿಲ್ಲ, ಎರಡನೇ ವರ್ಷದ್ದು ಪ್ರಾರಂಭವಾಗಬೇಕಾಗಿತ್ತು, ಅದರ ಬಗ್ಗೆ ಮುಖ್ಯಮಂತ್ರಿಗಳು ಯಾವ ಚಕಾರ ಎತ್ತಲಿಲ್ಲ, ಮೊದಲನೇ ಪ್ಯಾಖೇಜ್ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಾ ಮತ್ತು ಎರಡನೇ ಪ್ಯಾಕೇಜನ್ನು ಯಾವಾಗ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು. ಮತ್ತೆ ಗಂಗಾಕಲ್ಯಾಣ ಯೋಜನೆ ಬಗ್ಗೆ ಹೋದವರ್ಷ 5 ಸಾವಿರ ಬೋರ್‌ವೆಲ್‌ಗಳನ್ನು ಕೊಟ್ಟೂ ಅದನ್ನು ಸಂಪೂರ್ಣವಾಗಿ ಮಾಡಿಲ್ಲ, ಇನ್ನು 10 ಸಾವಿರ ಬೋರ್‌ವೆಲ್‌ಗಳನ್ನು ಇನ್ಯಾವಾಗ ಕೊರೆಯುತ್ತಾರೆ ಅಂತ? ಅದಕ್ಕೆ ಎಷ್ಟು ದುಡ್ಡು ನಿಗದಿ ಮಾಡಿದ್ದಾರೆ ಎಂಬುದನ್ನೂ ಹೇಳಬೇಕು. ಬಹುಶ: debt services ಈ ಬಗ್ಗೆ ಅಂಕಿ ಅಂಶಗಳನ್ನು ಐದೈದು ಕಂಪ್ಯಾರಿಸನ್ ಅನ್ನು ಒದಗಿಸಿಕೊಡಬೇಕು ಅಂತ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೇ, ಮುಖ್ಯಮಂತ್ರಿಗಳು ನ್ಯಾಚುರಲ್ ಆಗಿ ಅವರ ಪೊಸಿಷನ್‌ನಿಂದ ಅವರಿಗೆ convenient ಆಗಿ ಇರುವುದಕ್ಕೇ ಉತ್ತರ ಕೊಟ್ಟಿದ್ದಾರೆ. ಅವರು ಪ್ರೊ. ತಪಸ್‌ಸೇನ್‌ದು ಉದಾಹರಣೆ ಕೊಟ್ಟಿದ್ದಾರೇ ಹೊರತು ಡಾ॥ ತಿಮ್ಮಯ್ಯನವರದ್ದು, ಹೇಳಲಿಲ್ಲ ಅವರು ಬಹಳ ಬುದ್ಧಿವಂತಿಕೆಯಿಂದ ಉತ್ತರ ಕೊಡುತ್ತಾರೆ, ಅವರು ಕೆಲಸ ಮಾಡುತ್ತಿರುವುದು ಭಾರತ ಸರ್ಕಾರದಲ್ಲಿ, ಎಂದು ಹೇಳುತ್ತಾರೆಯೇ ಹೊರತು ಪಾಪ ತಿಮ್ಮಯ್ಯನವರು ಯಾವ ಪೊಸಿಷನ್‌ನಲ್ಲಿ ಇಗ ಇಲ್ವಲ್ಲಾ? ಅದರ ಬಗ್ಗೆ ನಾನು ಮತ್ತೊಂದು ವಿಶ್ಲೇಷಣೆ ಮಾಡಲು ಹೋಗುವುದಿಲ್ಲ, ತಾವು ಹೇಳಿದಿರಲ್ಲಾ debt servicing compared to Andhra Pradesh, Gujatath, Maharastra and Tamil Nadu ಇದರಲ್ಲಿ ನಾವು ಬಹಳ ಕಡಿಮೆ ಇದ್ದೇವಿ ಅಂತ, ನೀವು ಅಧಿಕಾರಕ್ಕೆ ಬಂದಾಗ debt services of Karnataka was 12.8%. You have the credit of taking it from 12.8% to 23% within four and half years.ಇದ್ದುದ್ದನ್ನು 23%ಗೆ ನೀವು ತೆಗೆದುಕೊಂಡು ಹೋಗಿದ್ದೀರಿ, ಅಂದರೆ ನಿಮ್ಮ borrowing rate ಎಷ್ಟು ಜಾಸ್ತಿ ಇದೆ ಅಂತ ನಾನು ಹೇಳಲು ಬಯಸಿದ್ದೇನೆ. Anyway, ಇದನ್ನು ನಾನು ವಿವರಣೆ ವೇಳೆಯಲ್ಲಿ ಕೇಳುವ ಮಾತಲ್ಲ.ನಾನು ಎರಡು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರದ್ ರೂಪದಲ್ಲಿ ನಿರೀಕ್ಷೆ ಮಾಡುತ್ತೇನೆ. ಈ 20 ಕಿಲೋಮೀಟರ್ ಡಿಸ್ಟೆನ್ಸ್ ಏನು ಇದೆ, ಪ್ರೈವೇಟ್ ಬಸ್‌ಗಳನ್ನು ಓಡಾಡಲಿಕ್ಕೆ ಟೌನ್ ಸುತ್ತ ಕೊಟ್ಟಿದ್ದೀರಿ, ದಯಮಾಡಿ ಆ ಆಜ್ಞೆಯನ್ನು ರದ್ದುಮಾಡಿ. ನಾನು ಲಾಸ್ಟ್ ಟೈಮ್ ಸಹಿತ

ಗೌರ್ನ್ ಅಡ್ರೆಸ್ ಮಾಡುವಾಗ ನಿಮಗೆ ಅಪೀಲ್‌ನ್ನು ಮಾಡಿಕೊಂಡಿದ್ದೆ. ನೋಡಿ, KSRTC is the only organisation in the public sector, ಪ್ರಾಫಿಟ್ ಮಾಡುತ್ತಾ ಇದೆ. ಮುಂದೆಯೂ ಪ್ರಾಫಿಟ್ ಮಾಡುತ್ತದೆ. ಮಧ್ಯಮ ವರ್ಗದವರಿಗೆ ಬಹಳ ಅನುಕೂಲವಿದೆ. ಪ್ರೈವೇಟ್ ಬಸಸ್ ಇರಲಿ. ಈಗ as it is ಕರ್ನಾಟಕದಲ್ಲಿ 40 ಪರ್‌ಸೆಂಟ್ ಪ್ರೈವೇಟ್ ಬಸಸ್‌ಗಳಿವೆ. 60 ಪರ್‌ಸೆಂಟಷ್ಟೇ ನಾವು ನ್ಯಾಷನಲೈಜ್ ಮಾಡಿರತಕ್ಕಂಥದ್ದು. ದಯಮಾಡಿ ಆ ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡಿದ್ದೇನೆ. ಈಗಲೂ ನಾನು ದಯಮಾಡಿ ಒತ್ತಾಯ ಮಾಡುತ್ತೇನೆ. ನನ್ನ speech ನಲ್ಲೂ ಅದನ್ನೇ ನಾನು emphasize ಮಾಡಿದ್ದೇನೆ. ಆ Organizationನ್ನು ಉಳಿಸಬೇಕೆಂದು ಹೇಳಿ ನಾನು ನಿಮ್ಮಲ್ಲಿ ಒತ್ತಾಯವನ್ನು ಮಾಡುತ್ತೇನೆ.

ಇನ್ನು ಬರಪರಿಹಾರದ ಕೆಲಸಗಳು complete ನಿಂತುಹೋಗಿಬಿಟ್ಟಿವೆ. absolutely ಏನೂ ಕೆಲಸ ನಡೆಯುತ್ತಿಲ್ಲ. ಈಗ ನೋಡಿ ಎಲೆಕ್ಷನ್ ನಾಳೆ ಸೋಮವಾರದಿಂದಲೋ, ಮಂಗಳವಾರದಿಂದಲೋ ಎಲೆಕ್ಷನ್ ವರ್ಕ್‌ಗೆ ಹೋದರೆ ಹಳ್ಳಿಗಳಲ್ಲಿ ಎಂಎಲ್‌ಎ ಗಳನ್ನು ಸೇರಿಸುವುದಿಲ್ಲ. ಏಕೆಂದರೆ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ನೀವು ಹೇಳಿದ್ದೀರಿ, 44 ಕೋಟಿ ರೂ ಒಂದರಲ್ಲಿ, ನೂರು ಕೋಟಿ ರೂ ಒಂದರಲ್ಲಿ 30 ಕೋಟಿ ರೂ ಒಂದರಲ್ಲಿ, ಒಟ್ಟಿನಲ್ಲಿ ನಿಮ್ಮ ಅಂಕಿಅಂಶಗಳ ಪ್ರಕಾರ 183 ಕೋಟಿ ರೂಪಾಯಿಗಳನ್ನು ನೀವು ರಿಲೀಸ್ ಮಾಡಿದ್ದೀರಿ. ಒಂದು standing instruction ನ್ನು ಕೊಡಿ. Total ಆಗಿ DRY ಆಗಿರತಕ್ಕಂಥ sources dry ಆಗತಕ್ಕಂಥ villages ಗಳಲ್ಲಿ atleast ಒಂದು ಸೋರ್ಸ್ ಅನ್ನಾದರೂ ಉಳಿಸಿಕೊಳ್ಳಲಿಕ್ಕೆ ಬೋರ್‌ವೆಲ್‌ನ್ನು ಹಾಕಬೇಕೆಂದು ಆಜ್ಞೆಯನ್ನು ಮಾಡಿದರೆ ಬಾಕಿ ನಿಮಗೆ ಅಷ್ಟು ದುಡ್ಡು ರಿಲೀಸ್ ಮಾಡಿ, ಇಷ್ಟು ದುಡ್ಡನ್ನು ರಿಲೀಸ್ ಮಾಡಿ ಎಂದು ನಾನು insist ಮಾಡುವುದಕ್ಕೆ ಹೋಗುವುದಿಲ್ಲ. I can understand the ways and means. ಒಂದು ಸಾರಿ ನೀವು ಇಲ್ಲಿಂದ ಹೊರಟಮೇಲೆ ನಾವುಗಳು ಇನ್ನು ಮೂರು ತಿಂಗಳು election mood ನಲ್ಲಿರುತ್ತೇವೆಯೇ ಹೊರತು ನೀವೂ ಸಿಗುವುದಿಲ್ಲ, ನಾವೂ ಸಿಗುವುದಿಲ್ಲ ಇನ್ನು ನೂರು ದಿನ. ನಮ್ಮ ಕೆಲಸವನ್ನು ನಾವು ಮಾಡುತ್ತೇವೆ. ನಿಮ್ಮ ಕೆಲಸವನ್ನು ನೀವು ಮಾಡುತ್ತೀರಿ. ಆದರೆ ನಾನೇನು request ಮಾಡಿಕೊಳ್ಳುತ್ತೇನೆಂದರೆ ಈ ಎಲೆಕ್ಷನ್ ಟೈಮ್ ನಲ್ಲಿ ಕುಡಿಯುವ ನೀರಿಗೆ ಯಾರಿಗೂ ತೊಂದರೆಯಾಗುವುದು ಬೇಡ. ಆದ್ದರಿಂದ ನೀವು ಒಂದು standing instruction ನ್ನು ಮಾಡಿ, ಗೌರ್ನಮೆಂಟ್ ಆರ್ಡರನ್ನು. ಎಲ್ಲೆಲ್ಲಿ sources ಗಳು ಒಣಗಿಹೋಗಿವೆ. ಅಲ್ಲಿ atleast ಒಂದು source ನ್ನು ಹುಡುಕುವುದಕ್ಕೆ, ಸರ್ಕಾರ ಕ್ರಮವನ್ನು ತೆಗೆದುಕೊಳ್ಳುವಂಥದ್ದು.

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೇ, ಸಾಕು ಬಿಡಿ. ಎಲ್ಲಾ ಕೇಳಿದ್ದಾರೆ. ಸಾಕು. ಎಲ್ಲಾ ಸದಸ್ಯರೂ ಕೇಳಿದ್ದಾರೆ floor leader ಕೇಳಿದ್ದಾರೆ. ಕೇಳಿದ್ದಾರೆ. ಈಗ ನೋಡಿ, ಟೈಮಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರಿಗೆ ಆದ್ಯತೆ ಇದ್ದರೆ ಅಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ನಾವು ಕುಡಿಯುವ ನೀರನ್ನು ಕೇಳಿದ್ದೆವು. ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ನಗರಾಭಿವೃದ್ಧಿ ಸಚಿವರೂ ಕೂಡ ಇಲ್ಲೇ ಇದ್ದಾರೆ. 208 ಪಟ್ಟಣಗಳ ಸಮಸ್ಯೆ ಇದೆ. ಆ ಪಟ್ಟಣಗಳಲ್ಲಿ 50 ಸಾವಿರ ಜನ ಈ ರೀತಿ ನಮ್ಮ ನಮ್ಮ ಪಟ್ಟಣಗಳಲ್ಲಿದ್ದಾರೆ. ಅಲ್ಲಿಗೆ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ ಸ್ವಾಮಿ. 112 ಬೋರ್‌ವೆಲ್‌ಗಳು ಹೊಸಕೋಟೆ ಟೌನ್‌ನಲ್ಲಿತ್ತು. 42 ಮಾತ್ರ ಇದೆ. ಇನ್ನು 60 ಬೋರ್‌ವೆಲ್‌ಗಳು ಒಣಗಿಹೋಗಿದೆ. ಆದ್ದರಿಂದ ಪಟ್ಟಣ ಪ್ರದೇಶಗಳಿಗೂ

ಹೊಸದಾಗಿ ಬೋರ್‌ವೆಲ್‌ನ್ನು ಹಾಕತಕ್ಕ ಕಾರ್ಯವಾಗಬೇಕು. ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟಂಥ ಅವಕಾಶವನ್ನೇ ಪಟ್ಟಣ ಪ್ರದೇಶಗಳಿಗೆ ಕೊಡುವಂಥದ್ದು. ಮತ್ತು ಬರಪರಿಹಾರದಲ್ಲಿ "ಕೂಲಿಗಾಗಿ ಕಾಳು" ಎಂದು ಹೇಳಿ ಆ ಯೋಜನೆಯನ್ನು ಮುಂದುವರೆಸುವುದು ಕೇಂದ್ರ ಸರ್ಕಾರದ ಕಡೆ ತೋರಿಸುವಂಥದ್ದಲ್ಲ, ರಾಜ್ಯಸರ್ಕಾರ ಕೂಡ ಅದನ್ನು ಮಾಡುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ compliment ಮಾಡುವುದು ಎಂದರೆ, his reply is more election-oriented than his Budget speech.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, I accept the compliments. Thank you. ಮಾನ್ಯ ವಿರೋಧ ಪಕ್ಷದ ನಾಯಕರು ಮೂರು–ನಾಲ್ಕು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಾಮುಖ್ಯವಾಗಿ ಹೈಕೋರ್ಟಿನ ವಿಚಾರ. ನೀವು ನಾವು ಜೊತೆಯಲ್ಲೇ Chief Justice ಅವರನ್ನು ಭೇಟಿ ಮಾಡಿದ್ದೆವು. ಅನಂತರ ಅದಕ್ಕೆ ಸಂಬಂಧಪಟ್ಟವರನ್ನೆಲ್ಲಾ ದೆಹಲಿಯಲ್ಲಿ ಕೂಡ ಸರ್ವ ಪಕ್ಷಗಳ ನಿಯೋಗ ಒಯ್ಯಿತು. ನಾವು ಒಂದು ನಿರ್ಣಯವನ್ನು ಅವರಿಂದ ನಿರೀಕ್ಷೆ ಮಾಡುತ್ತಿದ್ದೆವು. ಆದರೆ ಆ ನಿರ್ಣಯ ಇದುವರೆಗೂ ಕೂಡ ಸಕಾರಾತ್ಮಕವಾಗಿ ಏನೂ ಬಂದಿಲ್ಲ. ಇದಕ್ಕೆ ನಾನು ಹೇಗೆ ಜವಾಬ್ದಾರ ಎಂದು. ರಾಜ್ಯ ಸರ್ಕಾರ ಹೇಗೆ ಜವಾಬ್ದಾರ? ನಮ್ಮ ಇತಿಮಿತಿಗಳು ರಾಜ್ಯಾಂಗದಲ್ಲಿ ಈಗಾಗಲೇ ನಿಷ್ಕರ್ಷೆಯಾಗಿಬಿಟ್ಟಿವೆ. ಈಗ ನಾನು7 ಸ್ಪೆಷಲ್ ಕೋರ್ಟ್‌ನ್ನು ಮಾಡಬಹುದು. ಪರಪ್ಪನ ಅಗ್ರಹಾರದಲ್ಲಿ ಎರಡು ಸ್ಪೆಷಲ್ ಕೋರ್ಟುಗಳನ್ನು ಮಾಡಿದ್ದೇನೆ. ಅದು ನನ್ನ ಕೈಯಲ್ಲಿತ್ತು ಅಂದರೆ Chief justice ಗೌರವಾನ್ವಿತ ಮುಖ್ಯ ನ್ಯಾಯಧೀಶರವರ ಒಪ್ಪಿಗೆಯ ಮೇಲೆ ನಾವು ನಮಗೆ ಇರತಕ್ಕ ಅಧಿಕಾರ, ಆ ಅಧಿಕಾರವನ್ನು extend ಮಾಡಿ ಅಲ್ಲಿ ಎರಡು ಸ್ಪೆಷಲ್ ಕೋರ್ಟುಗಳನ್ನು ಮಾಡಿದ್ದೇವೆ. ಈಗ ಇನ್ನೊಂದು ಸ್ಪೆಷಲ್ ಕೋರ್ಟನ್ನು ಮಾಡಬೇಕು, ಏಕೆಂದರೆ ತಮಿಳುನಾಡಿನ ಮುಖ್ಯಮಂತ್ರಿಗಳ ಕೇಸನ್ನೂ ಕೂಡ ಇಲ್ಲೇ ನೀವು ಮಾಡಬೇಕು ಹಾಗೆ ಎಂದು ಹೇಳಿ ಸುಪ್ರೀಂ ಕೋರ್ಟ್‌ನವರು ನಮಗೆ direction ನ್ನು ಕೊಟ್ಟಿದ್ದಾರೆ. ಅದಕ್ಕೂ ಮುಖ್ಯ ನ್ಯಾಯಧೀಶರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಕೋರ್ಟ್ ಮಾಡಬೇಕು. ಆದರೆ ಹೈಕೋರ್ಟಿನ ಒಂದು ಬೆಂಚ್‌ನ್ನು ಮಾಡತಕ್ಕಂಥದ್ದು ರಾಜ್ಯಸರ್ಕಾರ ಕೇಂದ್ರಸರ್ಕಾರವನ್ನು ಮತ್ತು ಮುಖ್ಯ ನ್ಯಾಯಧೀಶರನ್ನು ನಾವು ಕೇಳಿಕೊಳ್ಳಬಹುದಲ್ಲದೆ ಅವರ ಮೇಲೆ ನಿರ್ಬಂಧ ಹೇರಲಿಕ್ಕೆ ಸಾಧ್ಯವೇ ಎನ್ನತಕ್ಕಂಥದ್ದು ಪ್ರಶ್ನೆ. ನೀವೂ ಲಾಯರು. ನಾನೂ ಲಾಯರು. ಇವತ್ತು ಅಲ್ಲಿ agitationನ್ನು ಮಾಡುತ್ತಿರುವವರೆಲ್ಲರೂ ನಮ್ಮ ಸಹೋದರ ಸಹೋದರಿಯರು. ಅವರೂ ಎಲ್ಲಾ ಲಾಯರುಗಳೇ. ಆದುದರಿಂದ ನಾವು ಈ ವಿಚಾರವನ್ನು ನಿರ್ವಿಕಾರ ಮನೋಭಾವನೆಯಿಂದ ನೋಡಲಿಕ್ಕೆ ಪ್ರಯತ್ನವನ್ನು ಮಾಡಕೂಡದು. ಯಾರೂ ಇದಕ್ಕೆ ಅಡ್ಡಿ ಇಲ್ಲ. ಈ ಸದನದಲ್ಲಿ 224 ಜನ ಸದಸ್ಯರುಗಳಿದ್ದಾರೆ. ಯಾರೂ ಇದಕ್ಕೆ ವಿರೋಧ ಇಲ್ಲ. ಮೇಲ್ಮನೆಯಲ್ಲಿರತಕ್ಕಂಥ 75 ಜನ ಅವರದ್ದೂ ವಿರೋಧ ಇಲ್ಲ. ಆದ್ದರಿಂದ ಈ ಸರ್ಕಾರವನ್ನು ಇದಕ್ಕೆ ಹೊಣೆ ಮಾಡತಕ್ಕಂಥದ್ದು ಸರಿಯೇ ಎನ್ನತಕ್ಕಂಥ ಪ್ರಶ್ನೆ.

ಶ್ರೀ ಜಗದೀಶ್ ಶೆಟ್ಟರ್ : (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ಮುಖ್ಯ ನ್ಯಾಯಾಧೀಶರನ್ನು ಮತ್ತೊಮ್ಮೆ ಹೋಗಿ ಕಂಡುಬಂದು ಮಾತನಾಡುತ್ತೇನೆ ಎಂದು ತಾವು ಹೇಳಿದ್ದಿರಿ. ನಾವು ಇಲ್ಲಿ ಒಂದು ಸಲ ಧರಣಿ ಸತ್ಯಾಗ್ರಹ ಹೋರಾಟವಾದಮೇಲೆ ತಮ್ಮನ್ನು ಭೇಟಿಯಾದ ಸಂದರ್ಭದಲ್ಲಿ ತಾವು ಹೇಳಿದ್ದಿರಿ. ಆದರೆ ತಾವು ಇಲ್ಲಿಯುವರೆಗೂ ಮುಖ್ಯ

ನ್ಯಾಯಾಧೀಶರನ್ನು ಭೇಟಿಯಾಗಿಲ್ಲ ಎನ್ನುವಂಥದ್ದು. ಆಮೇಲೆ ಮಾನ್ಯ ಚಂದ್ರೇಗೌಡರು ಇತ್ತೀಚೆಗೆ ಅವರನ್ನು ಬೇಟಿಯಾಗಿದ್ದಾರೆ ಎನ್ನುವಂಥದ್ದು ಪತ್ರಿಕೆಯಲ್ಲಿ ಬಂದಿತ್ತು. ಆಗ ಅವರು ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟಿದ್ದಾರೆ. ಮೂಲಭೂತ ಸೌಕರ್ಯ ಅಭಿವೃದ್ಧಿ ಸಲುವಾಗಿ ನೀವು ಸರ್ಕಾರದ ಕಡೆಯಿಂದ ಸರಿಯಾದಂಥ ಸ್ಪಂದನ ಬಂದರೆ ನಾವು consider ಮಾಡುತ್ತೇವೆ ಎನ್ನುವಂಥ ಮಾತು ಅದು ಪತ್ರಿಕೆಯಲ್ಲಿ ಬಂದಿದ್ದು ಒಂದು. ಆಮೇಲೆ ಇನ್ನೊಂದು, ಎಲ್ಲಾ ಉತ್ತರ ಕರ್ನಾಟಕ ಭಾಗದ ಎಲ್ಲಾ ಬಾರ್ ಅಸೋಸಿಯೇಷನ್ ಅಧ್ಯಕ್ಷರ ಒಂದು ಸಭೆಯನ್ನು ಕರೆದಿರಿ. ಅಲ್ಲಿ ಒಂದು unanimity ಬಂತು. ಎಲ್ಲಿ ಈ ಪ್ರಶ್ನೆ ಬಂದಿತ್ತು ಎಂದರೆ ಒಂದು unanimity ಬೇಕು. place ಬಗ್ಗೆ ಎನ್ನುವಂಥದ್ದು. ಆಗ ಎಲ್ಲಾ ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್‌ಗಳೆಲ್ಲಾ ಬಂದು ನೀವು ಮೀಟಿಂಗ್ ಕರೆದು ನೀವು ಅದನ್ನು ಕಮ್ಯುನಿಕೇಷನ್ ಮಾಡಿದಿರಿ. ಅದನ್ನು ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಹೀಗಾಗಿ ಇಷ್ಟೆಲ್ಲಾ ಡೆವಲಪ್‌ಮೆಂಟ್ಸ್ ಇದೆಯೆಲ್ಲಾ, ಅವರಿಗೆ ಮಾಡುವುದಕ್ಕೆ ಮನಸ್ಸು ಇದೆ. ಹೈಕೋರ್ಟ್ ಪೀಠವನ್ನು ಮಾಡಲಿಕ್ಕೆ ಮುಖ್ಯನ್ಯಾಯಾಧೀಶರಿಗೂ ಮನಸ್ಸು ಇದೆ. ರಿಪೋರ್ಟೂ ಇದೆ. ಇಷ್ಟೆಲ್ಲಾ ಆದಮೇಲೂ ಆಗುವುದಿಲ್ಲವೆಂದರೆ ಹಾಗಾದರೆ ನಾವು ಸರ್ಕಾರದ ಮೇಲೆಯೇ ಅದನ್ನು blame ಮಾಡಬೇಕಾಗುತ್ತದೆ. ನಿಮ್ಮ ಕಡೆಯಿಂದ ಒಂದು ಸರಿಯಾದಂಥ ಪ್ರಯತ್ನ ಆಗುತ್ತಿಲ್ಲವೆಂದೂ ನಾವು blame ಮಾಡಬೇಕಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿಲ್ಲ ಎನ್ನತಕ್ಕಂಥದ್ದನ್ನು ಅವರು ಹೇಳಿದರು, ಆದರೆ ಕೆಲವೊಂದು ಸಾರಿ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ನಾವು ಅಪ್ರಕಟಿತವಾದಂಥ ರೀತಿಯಲ್ಲಿ ಭೇಟಿ ಮಾಡುತ್ತೇವೆ. ಮತ್ತು ಅವರು ಕಾನೂನು ಸಚಿವರು, ಇದರ ಬಗ್ಗೆ ಈಗಾಗಲೇ ಇದರ ಬಗ್ಗೆ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ಮಾತನಾಡಿದ್ದಾರೆ. ಮುಖ್ಯ ನ್ಯಾಯಾಧೀಶರು ಹೇಳುತ್ತಿರತಕ್ಕಂಥದ್ದು ನಿಮ್ಮ basic infrastructure ನ್ನು ತೋರಿಸಿ ಹಾಗೆ ಎಂದು ಹೇಳಿದ್ದಾರೆ. ಈಗ ನನ್ನ ಪ್ರಶ್ನೆ ಮತ್ತು ಇನ್ನೂ ಒಂದು ನಮಗೆ ಅವರು ಒಟ್ಟಿಗೆ ಹೇಳಿದ್ದರು. ``Unless there is a consensus about the location of the Bench, it may be extremely difficult for us, to the Committee of Judges to take a view on that.''ಸರ್ಕಾರದವರು ಮಾಡಬೇಕಾದ ಪ್ರಯತ್ನಗಳನ್ನು ಮಾಡಿದ್ದಾರೆ. ಅವರು ಎಲ್ಲಾ ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ್‌ಗಳನ್ನು ಮತ್ತು ಬಾರ್ ಕೌನ್ಸಿಲರ್‌ಗಳನ್ನೆಲ್ಲಾ invite ಮಾಡಿ ನಾಲ್ಕಾರು ತಾಸು ಇದನ್ನು ಮಾಡಿದ್ದಾರೆ. ಆದರೆ ದುರಾದರಷ್ಟವಶಾತ್ ಈಗ the bell is in their court....... ಎಂದು ಹೇಳಿ ಅವರೇ ತೀರ್ಮಾನವನ್ನು ಮಾಡಿಬಿಟ್ಟಿದ್ದಾರೆ. ನಾವು ಇದನ್ನು ತೀರ್ಮಾನ ಮಾಡುವುದಿಲ್ಲವೆಂದು ಅವರು ಹೇಳುತ್ತಾರೆ. ಇಂಥ ಒಂದು ಪರಿಸ್ಥಿತಿ ಬಂದಾಗ ಏನು ಮಾಡಲಿಕ್ಕೆ ಬರುತ್ತದೆ? ನಾವು ಹತ್ತು ಕೋಟಿ ರೂಪಾಯಿಗಳಲ್ಲ, ಅದಕ್ಕೆ ಈಗ ನಾನು ಜನಗಳನ್ನು ಮೆಚ್ಚಿಸುವುದಕ್ಕೋಸ್ಕರ ನಾನು ನೂರು ಕೋಟಿ ರೂಪಾಯಿಗಳನ್ನು ನಮೂದುಮಾಡಿಬಿಡಬಹುದಾಗಿತ್ತು. ಆದರೆ ನೂರು ಕೋಟಿ ರೂಪಾಯಿಗಳನ್ನು ನಮೂದು ಮಾಡಲಿಕ್ಕೆ ಇವತ್ತು ಅಂಥ ಆಶ್ವಾಸನೆ ಅಲ್ಲಿ ನಮಗೆ ಸ್ಪಷ್ಟವಾಗಿ ಬಂದಿಲ್ಲ. ಅದನ್ನು ಹೆಚ್ಚಿಸಬಹುದಾಗಿತ್ತು ಇದು ಒಂದು ಟೋಕನ್, symbol, ಕೆಲವೊಂದು ಸಾರಿ ಈ symbolisms ನಮ್ಮ ಪ್ರಾಮಾಣಿಕತೆಯನ್ನು ಅಭಿವ್ಯಕ್ತಪಡಿಸುತ್ತದೆ. ಆಕಾರಣದಿಂದ ನಾವು ಇದನ್ನು ಮಾಡಿದು. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಹೇಳಿದಿರಿ. ಆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಏನೋ ಒಂದು

ನೋಟಿಫಿಕೇಶನ್ ಹೊರಡಿಸಿದ್ದೀರಿ, ಇದು ಬೇಡ ಎಂದು ನಾವು ಹೇಳಿದ್ದೇವೆಂದು ಹೇಳಿದಿರಿ. ಸರ್ಕಾರದ ಸಂಪನ್ಮೂಲಗಳು ಬರದ ಕಾರಣ ತೀವ್ರ ಕುಸಿದು ಹೋಗಿರತಕ್ಕಂಥ ಕಾಲದಲ್ಲಿ ನಾವು ಅದನ್ನು ನಮ್ಮ ಬೊಕ್ಕಸದಿಂದ ಕೊಡುತ್ತೇವೆಂದು ಹೇಳಕ್ಕೆ, ಧೈರ್ಯಇಲ್ಲ. ಈ ಸರ್ಕಾರಕ್ಕೆ ಧೈರ್ಯ ಇಲ್ಲ. ಬಾಂಡ್ಸನ್ನು ರೈಸ್ ಮಾಡಿ ಹಂತ ಹಂತವಾಗಿ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಕೊಡಬೇಕಾಗಿರತಕ್ಕಂಥ ಸಬ್ಸಿಡಿಯನ್ನು ಬಿಡುಗಡೆ ಮಾಡಲಿಕ್ಕೆ ಎಫೆಕ್ಟೀವ್ ಸ್ಟೆಪ್ಸನ್ನು ನಾವು ಪ್ರೊಮೋಟ್ ಮಾಡಿದ್ದೇವೆ. ಅದಕ್ಕೆ ನಿಮಗೆ ಇದನ್ನು ತೋರಿಸಿದ್ದು. ಶಾಸಕರಿಗೆ ಕೊಡತಕ್ಕಂಥ 40 ಲಕ್ಷ ರೂಪಾಯಿ ವಿಚಾರ. ನಾನು ಮೊದಲನೆಯ ಸಾರಿ 40 ಲಕ್ಷ ರೂಪಾಯಿಗಳನ್ನು ಅನೌನ್ಸ್ ಮಾಡಿದಂತಹ ಕಾಲದಲ್ಲಿ ನನಗೆ ಬರ ಮೂರು ವರ್ಷಗಳ ಕಾಲ ಬರುತ್ತದೆ ಎನ್ನತಕ್ಕಂಥ ಶಂಕೆ ಸ್ವಲ್ಪವಾದರೂ ಇದ್ದಿದ್ದರೆ ಅದನ್ನೂ ನನಗೆ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಬರದ ಕಾಲದಲ್ಲಿ ನಾವು ಬರ ಪರಿಹಾರ ಕಮಗಾರಿಗಳಿಗೆ ಹಣ ಖರ್ಚು ಮಾಡಬೇಕು ಮತ್ತು ಇತರ ತುರ್ತು ಕೆಲಸಗಳಿಗೆ ನಾವು ಹನವನ್ನು ಖರ್ಚು ಮಾಡಬೇಕಾಯಿತು. ಆ ಕಾರಣದಿಂದಾಗಿ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಇತರರಿಗೆ ಖಾಸಗಿಯಾಗಿ ನಮ್ಮ ಮಾತುಗತೆಗಳು ನಡೆದಂತಹ ಕಾಲದಲ್ಲಿ ಹೇಳಿದ್ದೆ. ಆಗ ಈ ವರ್ಷವೂ ಬರ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ದುರಾದೃಷ್ಟವಶಾತ್ ಮೂರನೆಯ ವರ್ಷವೂ ಸಹ ಬರಗಾಲ ಬಂದಿದೆ. ಆ ಕಾರಣ ಅದನ್ನು ರಿನ್ಯೂ ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಮತ್ತು ಇನ್ನು ಸೋಮಶೇಖರ್ ಅವರು ಈ ಪ್ಯಾಕೇಜ್‌ಗಳ ವಿಚಾರ ಹೇಳಿದರು. ಬಳ್ಳಾರಿ ಪ್ಯಾಕೇಜ್ ನಡೆಯುತ್ತಿದೆ, ಮಂಡ್ಯ ಪ್ಯಾಕೇಜ್ ನಡೆಯುತ್ತಿದೆ. ಕೊಡಗು ಪ್ಯಾಕೇಜ್ ಈಗ ಅನೌನ್ಸ್ ಮಾಡಿದ್ದೇವೆ. ಬಾಗಲಕೋಟೆ ಪ್ಯಾಕೇಜ್ ಆಯಿತು. ಅದಕ್ಕೂ ಹಣಗಳನ್ನು ಒದಗಿಸಿದ್ದೇವೆ. ಈಗ ಹಣವನ್ನು ಕೊಡಬೇಕು ನಿಜ. ಕೆಲಸ ನಡೆಯುತ್ತಿದೆ. ನಾವು ಮೂರ್‍ನಾಲ್ಕು ಏಜೆನ್ಸಿಗಳನ್ನು ಮಾಡಿದ್ದೇವೆ. ಬಳ್ಳಾರಿಯಲ್ಲಿ ನಾವು ಜನಸ್ಪಂದನ ಕಾರ್ಯಕ್ರಮಕ್ಕೆ ಹೋದಾಗ ಒಂದು ದಿವಸವೆಲ್ಲಾ ಫೈನಾನ್ಸ್ ಕಮೀಷನರ್, ಛೀಫ್ ಸೆಕ್ರೇಟರಿ, ಅವರು ಇವರು ಎಲ್ಲರೂ ಅದರ ರಿವ್ಯೂ ಮಾಡಿದ್ದಾರೆ. ಈಗ ವಿಜಯನಗರದ ಬಹಳ ದೊಡ್ಡ ಪ್ಯಾಕೇಜಿನ ದೊಡ್ಡ ಕೆಲಸವೆಂದರೆ 500 ಮೆಗ್ಯಾವಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ, ಸುಮಾರು 3 ಸಾವಿರ ಕೋಟಿ ರೂಪಾಯಿಗಳ ಯೋಜನೆ, ಹೊಸಪೇಟೆಯಲ್ಲಿಸ ಸ್ಥಾಪಿತ ಆಗುತ್ತಿರುವಂತಹ ವಿದ್ಯುತ್ ಉತ್ಪಾದನಾ ಘಟಕ. ಈಗ ಕೆಲಸ ಪ್ರಾರಂಭ ಆಗಿದೆ. ಬಿಎಚ್ಇಎಲ್‌ನವರ ಜೊತೆಯಲ್ಲಿ ನಾವು ಒಡಂಬಡಿಕೆ ಮಾಡಿಕೊಂಡಿದ್ದೇವೆ. ಮಾನ್ಯ ಸೋಮಶೇಖರ್‌ರವರಿಗೆ ಅದರ ಬಗ್ಗೆಯೂ ಅನುಮನವಿತ್ತು. ಬಿಎಚ್ಇಎಲ್‌ನವರನ್ನು ಬೈಪಾಸ್ ಮಾಡಿ ಸ್ಕೋಡಾದವರ ಜೊತೆಯಲ್ಲಿ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳಿ ಅನುಮಾನವಿತ್ತು. ಅದಕ್ಕೆ ಟೆಂಡರ್ ಕರೆಯುತ್ತಿದ್ದೇವೆ.

ಶ್ರೀ ಬಿ.ಸೋಮಶೇಖರ್ : 2000ದ ಇಸ್ವಿಯಲ್ಲಿಯೇ ತೀರ್ಮಾನ ತೆಗೆದುಕೊಂಡಿದ್ದರೆ ಒಳ್ಳೆಯದಿತ್ತು ಏಕೆಂದರೆ ನಮ್ಮ ಸರ್ಕಾರದಲ್ಲಿಯೇ ನಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೆವು. ಅದನ್ನು ಸುಮ್ಮನೆ ಬಿಟ್ಟು ಬಿಟ್ಟಿದ್ದರೆ ಇಷ್ಟೊತ್ತಿಗೆ ಪ್ರೊಡಕ್ಷನ್ ಆಗುತ್ತಿತ್ತು. ಮೂರು ವರ್ಷ ತಾವು ಜಿಜ್ಞಾಸೆಯಿಂದ ಇದ್ದು ಈಗ ಆ ತೀರ್ಮಾನ ತೆಗೆದುಕೊಂಡಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ : ಜಿಜ್ಞಾಸೆ ಅರ್ಥ ಆಗಲಿಲ್ಲ. ಏಕೆಂದರೆ ಮೂಲಭೂತವಾಗಿ ನಮಗೆ ಪವರ್ ಬೇಕು. ಆ ಪವರ್‌ಫ್ರಂಟ್‌ನಲ್ಲಿ, ಪವರ್‌ಸೆಕ್ಟಾರ್‌ನಲ್ಲಿ ಜಿಜ್ಞಾಸೆಗಳಿಗೆ ಅವಕಾಶವಿಲ್ಲ ಎಸ್ಟೋ ಕೊಡಬೇಕೋ ಬೇಡವೇ? ತಣ್ಣೀರ್‌ಬಾವಿ ಅದರಂತೆ ನಾವು ಅಥವಾ ಮಹಾರಾಷ್ಟ್ರ ಸರ್ಕಾರದವರು ಇನ್ನೂ ದೊಡ್ಡ ಪ್ರಮಾಣದಲ್ಲಿ ಈ ಎನ್‌ರಾನ್‌ನ ಆ ಒಂದು ವಿಷಯಗಳಿಗೆ ಸಿಕ್ಕಿದರಲ್ಲಾ, ಅದಕ್ಕೆ ನಾವು

ಸಿಕ್ಕಬೇಕೇ ಬೇಡವೇ? ಇವುಗಳೆಲ್ಲವನ್ನೂ ಕೂಡ ನಾವು ಸಮಾಧಾನಕರವಾಗಿ, ತುಲನಾತ್ಮಕ ದೃಷ್ಟಿಯಿಂದ ನೋಡಿ ಆನಂತರ ತೀರ್ಮಾನವನ್ನು ಈಗ ತೆಗೆದುಕೊಂಡಿದ್ದೇವೆ. ಆ ಕೆಲಸ ಪ್ರಾರಂಭವಾಗುತ್ತದೆ. ನೀವು ಯೋಜನೆಯನ್ನು ಮಾಡಿರಲಿಲ್ಲ, ಆಲ್ಮಟ್ಟಿ 290 ಮೆಗಾವ್ಯಾಟ್ ವಿಚಾರದಲ್ಲಿ. ಅದು ಯಾವುದೋ ಒಂದು ಟೆಕ್ ಟ್ರ್ಯಾಪ್‌ಕೋ ಹಾಗೆ ಎಂದು ಹೇಳಿ ನಮ್ಮ ಕಾಲದಲ್ಲಿ ಪ್ರಾರಂಭವಾದದ್ದು ಆ ಟ್ರ್ಯಾಪ್‌ಕೋವನ್ನೇ ನೀವು ಟ್ರ್ಯಾಪ್ ಮಾಡುತ್ತಾ ಇದ್ದಿರಿ. ನಾವು ಒಂದೆರಡು ವರ್ಷ ಟ್ರ್ಯಾಪ್ ಮಾಡಿದೆವು. ಟ್ರ್ಯಾಪ್ ಟ್ರ್ಯಾಪ್ ನೋ ರಿಪ್ಲೈ. ಅಪ್ಲೈ ನೋ ರಿಪ್ಲೈ ಆಯಿತು. ಮತ್ತು ಅವರಿಗೂ ನಮಗೂ ಇದ್ದ ವ್ಯತ್ಯಾಸ. ಅದನ್ನೇ ನಾನು ಕೆಪಿಸಿಗೆ ನೀವು ಅಂದಾಜು ಕೊಡಿ, ಎಷ್ಟರಲ್ಲಿ ನೀವು ಉತ್ಪಾದನೆ ಮಾಡುತ್ತೀರಿ ಎಂದು ಹೇಳಿದೆ. ಸುಮಾರು 400, 500 ಕೋಟಿ ರೂಪಾಯಿಗಳು ವ್ಯತ್ಯಾಸ ಕಂಡು ಬಂತು. ಆದ್ದರಿಂದ ತತ್‌ಕ್ಷಣ ತೀರ್ಮಾನ ತೆಗೆದುಕೊಂಡು ಮೊದಲನೆಯ ಫೇಸ್ ಈಗ 20,25 ಮೆಗಾ ವ್ಯಾಟ್ ವಿದ್ಯುತ್ಪಾದನೆಯಲ್ಲಿಕ್ಕೆ ಪ್ರಾರಂಭ ಮಾಡುತ್ತಿದೆ. ಸುಪ್ರೀಂ ಕೋರ್ಟ್‌ನವರು ತೊಂದರೆ ಮಾಡಿದರು. ಈ ಎಲ್ಲಾ ಕಾರಣಗಳೂ ಇರುತ್ತವೆ. ಈ ಎಲ್ಲಾ ಕಾರಣಗಳೆಲ್ಲವನ್ನೂ ಕೂಡ ಅಧಿಕಾರದಲ್ಲಿದ್ದಂತಹ ನೀವು ಸಾರಾಸಗಟಾಗಿ ತಿರಸ್ಕಾರ ಮಾಡಲಿಕ್ಕೆ ಆಗುವುದಿಲ್ಲ. ನಿಮಗೂ ಇದೇ ಅಡ್ಡಿ, ಆತಂಕ, ಇದೇ ತೊಂದರೆಗಳು ಸುಪ್ರೀಂ ಕೋರ್ಟ್‌ನಿಂದ ಬರಬಹುದು. ಆಂಧ್ರಪ್ರದೇಶದಿಂದ ಬರಬಹುದು. ಮತ್ತೊಂದು ಕಡೆಯಿಂದ ಬರಬಹುದು. ಅದನ್ನೆಲ್ಲಾ ಭರಿಸಿಕೊಂಡು ಮುಂದೆ ಹೋಗಬೇಕಾಗಿದೆ. ಈ ಪ್ಯಾಕೇಜ್‌ಗಳು ಯಾವುದನ್ನೂ ಅಬ್ಯಾಂಡನ್ ಮಾಡುವುದಿಲ್ಲ, ಅವುಗಳಿಗೆಲ್ಲವೂ ಹಣ ಕೊಡಬೇಕಾಗಿದೆ. ಹಣವನ್ನು ನಾವು ರಿಲೀಜ್ ಮಾಡುವುದರ ಮೂಲಕ ಈ ಪ್ಯಾಕೇಜ್ ಕಾರ್ಯಕ್ರಮಗಳನ್ನು ಮುಂದುವರಿಸುತ್ತೇವೆ ಎನ್ನತಕ್ಕ ಮಾತನ್ನು ನಿಮಗೆ ಹೇಳುತ್ತೇನೆ. ಮಾನ್ಯ ಸಿಂಧ್ಯಾರವರು ಕೆಲವು ಮೂಲಭೂತವಾದಂತಹ ಪ್ರಶ್ನೆಗಳನ್ನು ಕೇಳಿದ್ದಾರೆ. ಮೂಲ ಭೂತವಾದಂತಹ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಸಾಕಾದಷ್ಟು ಸಮಯ ಬೇಕಾಗುತ್ತದೆ. ಆ ಕಾರಣ ಆ ಸಮಯ ಈಗ ಎರಡು ಗಂಟೆ ಆಗಿದೆ. ತಮ್ಮ ಊಟದ ಆಮಂತ್ರಣ ಕೂಡ ಇದೆ-- ನಮ್ಮ ಮನಸ್ಸಿನಲ್ಲಿ. ಆದುದರಿಂದ ನಾನು ಕುಡಿಯುವ ನೀರಿನ ವಿಚಾರವನ್ನು ಹೇಳುತ್ತೇನೆ. ಇದು ಅಗತ್ಯವಾಗಿದೆ, ಕೊಡಬೇಕು. ಈಗ ಕುಡಿಯುವ ನೀರಿಗೆ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಇದೆ ಆಸ್ ಆಫ್ ಟುಡೆ, ಎನ್ನತಕ್ಕಥ ಮಾಹಿತಿ ನನ್ನ ಹತ್ತಿರ ಇದೆ.

ಗೊಂದಲ

ಕುಡಿಯುವ ನೀರಿಗೆ ಜಿಲ್ಲಾಧಿಕಾರಿಗಳ ಹತ್ತಿರ ಎಷ್ಟೆಷ್ಟು ಹಣ ಇದೆ ಎಂಬ ಮಾಹಿತಿ ಇದೆ.

ಶ್ರೀ ಕೆ.ಬಿ. ಕೋಳಿವಾಡ್ : ಸಾರ್ ನಾನು ಹೇಳಲೇ?

ಶ್ರೀ ಎಸ್.ಎಂ. ಕೃಷ್ಣ : ಮಾಹಿತಿಯನ್ನು ನೀವು ಓದಬೇಕು, ಹೇಳಿದರೆ ನಂಬುವುದಿಲ್ಲ. ಓದಿದರೆ ನಂಬುತ್ತಾರೆ. ಬಾಯಲ್ಲಿ ಹೇಳೀದರೆ. ಎಲ್ಲಿ ವಿವರ ಇದೆ ತೋರಿಸಿ ಎಂದು ಹೇಳುತ್ತೀರಿ. ಅದಕ್ಕೆ ತೋರಿಸಿ ಬಿಟ್ಟರೆ ಆಮೇಲೆ ಬಾಯಲ್ಲಿ ವಿವರ ಹೇಳಿ ಎನ್ನುತ್ತೀರಿ. 37 ಕೋಟಿ ರೂಪಾಯಿ ಈಗ ಇವತ್ತು ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈಗ ಆ ಇತ್ತಂಡ ವಾದಕ್ಕೆ ನಾನು ಯಾವತ್ತೂ ಹೋಗಿಲ್ಲ. ತಾವು ವ್ಯಂಗ್ಯವಾಗಿ ಹೇಳುತ್ತೀರಿ, ನಾನು ಸ್ವೀಕಾರ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ವ್ಯಂಗ್ಯವಾಗಿ ಹೇಳಲಿಲ್ಲ. ಅವರು ಎದ್ದಾಗಲೂ ಅದಕ್ಕೆ ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆಯಿತು ಸ್ವಾಮಿ. ತಾವು ಮುಖ್ಯಮಂತ್ರಿ ಸ್ಥಾನದಲ್ಲಿದ್ದೀರಿ, ವ್ಯಂಗ್ಯವಾಗಿ ಮಾತನಾಡಬೇಕು. ಚುಚ್ಚಬೇಕು. ನಾವೂ ಚುಚ್ಚಿದ್ದೇವೆ, ಚುಚ್ಚಿ. ಆದರೆ ಪ್ರಶ್ನೆ ಏನು ಇದೆ

ಎಂದರೆ ಹಳ್ಳಿಗಳಲ್ಲಿ ಕುಡಿಯುವ ನೀರಿನ ವಿಚಾರಕ್ಕೆ ಹೋದಾಗ ಇಲ್ಲೆಲ್ಲಾ ಭಾಷಣದಲ್ಲಿ ಕೇಳುತ್ತೇವೆ.

ಶ್ರೀ ಎಸ್.ಎಂ. ಕೃಷ್ಣ : ತೊಂದರೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಡೆಪ್ಯುಟಿ ಕಮೀಷನರ್ ಅವರನ್ನು ಕೇಳಿದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಸಿಇ ಓ ಅವರನ್ನು ಕೇಳಿದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಒಂಬು ಹತ್ತು ಬೋರ್‌ವೆಲ್‌ಗಳನ್ನು ನಮ್ಮ ಯೋಗ್ಯತೆಗೆ ನಮ್ಮ ಕ್ಷೇತ್ರದಲ್ಲಿ ಹಾಕಿಸಲು ಆಗುವುದಿಲ್ಲ. ಈಗ ಜನಗಳಿಗೆ ನಾವು ಏನೆಂದು ಉತ್ತರ ಕೊಡಬೇಕು? ಸರ್ಕಾರ ಬೇರೆ, ನಾನು ಬೇರೆ ಎಂದು ಹೇಳಿದರೆ ನೀವ್ಯಾಕೆ ಎಂಎಲ್‌ಎ ಆಗಿರುವುದು ಎಂದು ಹೇಳುತ್ತಾರೆ. ನಾವು ಏನು ಉತ್ತರ ಕೊಡುವುದು? ಅದಕ್ಕೆ ನಾನೇನು ಹೇಳಿದೆ ಎಂದರೆ ನಾವು ಚುನಾವಣೆಗಳಿಗೆ ಹೋಗುತ್ತಿದ್ದೇವೆ. ತಾವು ಇಷ್ಟೊಂದು ಭರವಸೆ ಕೊಡಿ. ನಾನು ಬೇರೆ ಏನೂ ಕೇಳಲಿಲ್ಲ. ನಿಮ್ಮಿಂದ ವಿಸ್ತೃತವಾದ ಉತ್ತರವನ್ನು ನಾನು ಕೇಳುತ್ತಿಲ್ಲ. ನಾನು ಎರಡೇ ವಿಚಾರ ಕೇಳಿದ್ದು. ಒಂದು ಕೆಎಸ್‌ಆರ್‌ಟಿಸಿ ಪ್ರೈವಟೈಸೇಷನ್ ಮಾಡುವುದಕ್ಕೆ ಮಾಡಿರುವ ಅರ್ಡರನ್ನು ರದ್ದು ಮಾಡಿ ಎನ್ನುವುದು ಒಂದು. ಇನ್ನೊಂದು ಚುನಾವಣೆ ಸಂದರ್ಭದಲ್ಲಿ ಯಾವುದೇ ತೊಂದರೆ ಇಲ್ಲದ ಹಾಗೆ ಕುಡಿಯುವ ನೀರು ಯಾವ ಹಳ್ಳಿಯಲ್ಲಿ ಇಲ್ಲ, ಅಲ್ಲಿಗೆ ನೀರು ಕೊಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳಿ. ಸ್ವಾಮಿ ಎಂದು ನಾನು ಕೇಳಿದೆ. ಅಷ್ಟೆ.

ಶ್ರೀ ಎಸ್.ಎಂ. ಕೃಷ್ಣ : ಕನಿಷ್ಟ ಇವತ್ತು ಪ್ರತಿವಾರನೂ ನಾವು ರಿಪೋರ್ಟ್‌ಗಳನ್ನು ಡೆವಲಪ್‌ಮೆಂಟ್ ಕಮೀಷನರ್ ಮತ್ತು ಚೀಫ್ ಮಿನಿಸ್ಟರ್ಸ್ ಆಫೀಸ್‌ನಿಂದ ಪಡೆಯುತ್ತೇವೆ. ಪ್ರತಿ ಒಂದು ಜಿಲ್ಲೆಯಲ್ಲೂ ಕೂಡ ಕನಿಷ್ಟ ಇವತ್ತು ಒಂದು ಕೋಟಿ ರೂಪಾಯಿಗಳು ಇದೆ. ಕುಡಿಯುವ ನೀರಿಗೋಸ್ಕರ ಇದೆ. ಮಾನ್ಯ ಸಿಂಧ್ಯಾರವರು ಅವರ ಭಾಗದಲ್ಲಿ ಈ ಸಮಸ್ಯೆಗಳು ಇವೆ ಹಾಗೆ ಎಂದು ಹೇಳಿ ನಮಗೆ ತಿಳಿಸಿದ್ದಾರೆ. ಇವತ್ತೇ ನಾನು ಡೆವಲಪ್‌ಮೆಂಟ್ ಕಮೀಷನರ್‌ಗೆ ಅಲ್ಲಿಯ ಡೆಪ್ಯುಟಿ ಕಮೀಷನರ್ ಅವರನ್ನು ಸಂಪರ್ಕ ಮಾಡಿ ಇದರ ಬಗ್ಗೆ ಇರತಕ್ಕ ಸಮಸ್ಯೆಗಳನ್ನು ನಾವು ನೀವು ಒಟ್ಟಿಗೆ ಸೇರಿ ಬಗೆಹರಿಸಲು ಪ್ರಯತ್ನಿಸೋಣ.

ಶ್ರೀ ಎಚ್.ಸಿ. ಶ್ರೀಕಂಠಯ್ಯ : ಮಾನ್ಯ ಸಿಂಧ್ಯಾರವರು ಒಂದು ಸಾರಿ ಐದು ಬೋರ್‌ವೆಲ್‌ಗಳನ್ನು ಕೇಳಿದರು, ನಾವು ಹತ್ತು ಬೋರ್‌ವೆಲ್‌ಹಾಕಿಸಿ ಕೊಟ್ಟಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮನೆಗೆ ಕೊಟ್ಟಿದ್ದೀರಾ?

ಶ್ರೀ ಎಸ್.ಎಂ. ಕೃಷ್ಣ : ಇಲ್ಲ ಯಾರದೋ ಹೊಲಕ್ಕೆ ಕೊಟ್ಟಿದ್ದು. ಈಗ ಕೆಎಸ್‌ಆರ್‌ಟಿಸಿ ವಿಚಾರ ಹೇಳಿದರು. ನೀವು ನಂಬಬೇಕು. ಏಕೆಂದರೆ ನೀವು ಹಿಂದೆ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದವರು. ನೀವು ನಂಬಬೇಕು. ಒಂದು ಕಾಲದಲ್ಲಿ ಸಮಾಜವಾದ ಅದು ನಮ್ಮ ನಾರಾ, ಸ್ಲೋಗನ್ ಆಗಿತ್ತು. ಆದರೆ ಜನಗಳ ಅನುಕೂಲವನ್ನೂ ನಾನು ಗಮನಿಸಬೇಕಾಗಿದೆ. ಇವತ್ತು ಪ್ರಯಾಣಿಕರ ಸಂಖ್ಯೆ ಜಾಸ್ತಿ ಆಗುತ್ತಿದೆ. ಅದರಲ್ಲಿಯೂ ಪಟ್ಟಣ ಪ್ರದೇಶಗಳ ಸುತ್ತಮುತ್ತಲೂ ಒಂಬು 15 ಕಿಲೋಮೀಟರ್, 20 ಕಿಲೋ ಮೀಟರ್, ನಮ್ಮ ಕಡೆ ಬಂದರೆ ´ ೀರಿಸುತ್ತೇನೆ. ಹೇಗೆ ಬಸ್ ಮೇಲೆ 100 ಜನ ಒಳಗೆ 200 ಜನ ಇರುತ್ತಾರೆ.

2.10 ಪಿ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಾವು ದಯವಿಟ್ಟು ಕೇಳಬೇಕು. ನೀವು ಎಲ್ಲಿ ಕನ್‌ಫ್ಯೂಸ್ ಮಾಡಿಕೊಂಡಿದ್ದೀರೆಂದರೆ, Mandya is not totally nationalised area.ಮಂಡ್ಯ ಮತು ಮಳ್ಳವಳ್ಳಿಗಳಲ್ಲಿ ಡಿಪೋ ಮಾಡಿರುವ ಉದ್ದೇಶ, ಖಾಸಗಿಯವರು ಅಲ್ಲಿ ಹೋಗಲು ಸಾಧ್ಯವಾಗದ

ಕಾರಣ ಅವರಿಗೆ ಅಲ್ಲಿ [illegible] ಸಬ್‌ಸ್ಟಿಟ್ಯೂಟ್ ಮಾಡಿಕೊಡಲಾಗಿದೆ. ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಇವೆಲ್ಲವೂ totally nationalised areas ಅಲ್ಲ. Bidar and Belgaum areas, ಇವೆಲ್ಲವೂ totally nationalised areas. ನೀವು ಅಲ್ಲಿಗೆ ತೆಗೆದುಕೊಂಡು ಹೋಗಿ 20 ಕಿಲೋಮೀಟರ್ ಕೊಟ್ಟರೆ ಕೆಎಸ್‌ಆರ್‌ಟಿಸಿ ಬದುಕುವುದಾದರೂ ಹೇಗೆ ಎಂಬುದು ನನ್ನ ಪ್ರಶ್ನೆಯಾಗಿದೆ.

ಶ್ರೀ ಎಸ್.ಎಂ. ಕೃಷ್ಣ : ನಾನು ಕಳೆದ ವರ್ಷ ಮಂಡಿಸಿದಾಗ ಈ ವಿಚಾರವಾಗಿ ಬಹಳ ವಿಸ್ತೃತವಾಗಿ ಚರ್ಚೆ ಜರುಗಿದೆ. ಕೆಎಸ್‌ಆರ್‌ಟಿಸಿಯನ್ನು ಸುಧಾರಿಸಬೇಕೆಂದಾಗ ಇದನ್ನು ಪ್ರತಿನಿಧಿಸುವವರು ಇದಕ್ಕೆ ತೀವ್ರವಾಗಿ ವಿರೋಧ ಮಾಡಿರುವ. ಆದರೆ, ಯಾವುದೇ ವಿಧದಲ್ಲಿ ಕೆಎಸ್‌ಆರ್‌ಟಿಸಿಗೆ ಬರುತ್ತಿರುವ ಲಾಭಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನಾವು ಹೊಸ ಪಾಲಿಸಿಯನ್ನು ಅನುಷ್ಠಾನಕ್ಕೆ ತರುತ್ತೇವೆ. ಅನುಷ್ಠಾನಕ್ಕೆ ತರುವ ವಿಶ್ವಾಸ ನಮಗಿರುವುದಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಸಂಬಂಧ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಡಿ.ಬಿ. ಚಂದ್ರೇಗೌಡರು ನಿರ್ದೇಶನ ನೀಡಿದ್ದು, ಮುಖ್ಯಮಂತ್ರಿಗಳು ಭೇಟಿ ಮಾಡಿದ್ದು, ಇವೆಲ್ಲವೂ ಪತ್ರಿಕೆಗಳಲ್ಲಿ ವರದಿಯಾಗಿದೆ. ಆದಕಾರಣ, ತಾವು ಈ ಬಗ್ಗೆ ಭೇಟಿಯಾಗಿದ್ದೀರಾ, ಇಲ್ಲವೇ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡಿದರೆ ಅನುಕೂಲವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ನಾನು ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಅವರನ್ನು ಭೇಟಿಯಾಗಿದ್ದೆ. ಅವರನ್ನು ಭೇಟಿಯಾಗಿದ್ದಾಗ ಅವರು ಹೇಳಿದ್ದು ಮತ್ತು ನಾನು ಅರ್ಥೈಸಿಕೊಂಡಿರುವಂತೆ, ಮುಖ್ಯ ನ್ಯಾಯಾಧೀಶರೂ ಕೂಡ ಹೇಳಿದಂತೆ, "alternatively, ಸಂಚಾರಿ ನ್ಯಾಯಾಲಯವನ್ನು ಒದಗಿಸುವ ಬಗ್ಗೆ ಆಲೋಚನೆ ಮಾಡಬಹುದು, ಅದು ನನ್ನ ವ್ಯಾಪ್ತಿಯಲ್ಲಿರುವುದರಿಂದ ಅದಕ್ಕೆ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ನೀವು ಒದಗಿಸಿಕೊಡಿ" ಎಂದಿದ್ದಾರೆ. ಆದರೆ, ಈ ರೀತಿ ಹೇಳಿರುವುದು ಶಾಶ್ವತ ಪೀಠಕ್ಕಾಗಿ ಅಲ್ಲ. Let us not confuse ಸಂಚಾರಿ ನ್ಯಾಯಾಲಯ ಪ್ರಾರಂಭಿಸುವ ಕುರಿತು ನೀವು ಎರಡು ಕಡೆಗಳಲ್ಲಿ ಏನು ಪ್ರಸ್ತಾಪಿಸಿದ್ದೀರಿ, ಅದಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಿ, ಅದರ ಬಗ್ಗೆ ಯೋಚಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಬೆಳೆ ವಿಮೆ ಬಗ್ಗೆ ಸ್ಪಷ್ಟೀಕರಣ ನೀಡಲಿಲ್ಲ. ಆ ಕುರಿತಂತೆ ಏನೂ ಮಾತನಾಡಲಿಲ್ಲ. ಬಡ್ಡಿ ಮನ್ನಾ ಬಗ್ಗೆ ಮಾತ್ರ ಮಾತನಾಡಿದಿರಿ. ಆನ್‌ಲೈನ್ ಲಾಟರಿ ನಿಷೇಧಗೊಳಿಸುವುದಾಗಿ ತಿಳಿಸಿದ್ದರೂ ನಿಷೇಧಿಸಲಿಲ್ಲ. ಹೈಕೋರ್ಟ್ ಪೀಠದ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ. ಡಾ|| ಡಿ.ಎಂ. ನಂಜುಂಡಪ್ಪ ವರದಿ ಬಗ್ಗೆ ನಾವು ಪ್ರಸ್ತಾಪಿಸಿದರೂ ಅದರ ಬಗ್ಗೆ ಒಂದು ಮಾತೂ ಹೇಳಲು ತಯಾರಿಲ್ಲ. ಡಾ: ನಂಜುಂಡಪ್ಪನವರ ವರದಿ ಜಾರಿಗೊಳಿಸುವುದಾಗಿ ಹೇಳಿದ್ದರೂ ಅದನ್ನು ಜಾರಿಗೊಳಿಸಲು ತಯಾರಿಲ್ಲ. ಅಂದರೆ, ಆ ಭಾಗದ ನಿರ್ಲಕ್ಷ್ಯ ಮತ್ತು ಇವೊತ್ತು ಬೆಳೆ ವಿಮೆ ಹಣ ರೈತರಿಗೆ ಸಿಗುತ್ತಿಲ್ಲ. ರೈತರ ಬಗ್ಗೆ ನಿರ್ಲಕ್ಷ್ಯ, ಕುಡಿಯುವ ನೀರಿನ ತೊಂದರೆಯಾಗಿದೆ, ಗೋಶಾಲೆಗಳನ್ನು ಪ್ರಾರಂಭಿಸಿಲ್ಲ. ಕೇವಲ ಚುನಾವಣೆ ಘೋಷಣೆಗಳನ್ನು ಮಾಡಿದ್ದೀರೇ ಹೊರತು ಅನುಷ್ಠಾನಗೊಳಿಸುವುದಕ್ಕಾಗುತ್ತಿಲ್ಲ. ಹೀಗಾಗಿ ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಶ್ರೀ ಜಗದೀಶ್ ಶೆಟ್ಟರ್‌ರವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಜಗದೀಶ್ ಶೆಟ್ಟರ್‌ರವರು ಖಾಯಂ ಆಗಿ ಅಲ್ಲಿಯೇ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ ಮಾಡಿಕೊಳ್ಳಲಿ, ಬಹಳ ಸಂತೋಷ.

(II) 2004–05ನೇ ಸಾಲಿನ ಲೇಖಾನುದಾನದ ಬೇಡಿಕೆಗಳ ಮಂಡನೆ ಹಾಗು ಮತಕ್ಕೆ ಹಾಕುವುದು.

ಶ್ರೀ ಎಸ್.ಎಂ. ಕೃಷ್ಣ(ಮುಖ್ಯಮಂತ್ರಿ) : ಮಾನ್ಯ ಸಭಾಧ್ಯಕ್ಷರೆ,

"ದಿನಾಂಕ 31.3.2005ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿ ಮೊಬಲಗಿಗೆ ಮೀರದ ಮೊತ್ತದ ಲೇಖಾನುದಾನವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ನಾನು ಈಗ ಲೇಖಾನುದನ್ನದ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"ದಿನಾಂಕ 31.3.2005ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿರುವ ಮೊಬಲಗೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತದ ಲೇಖಾನುದಾನವನ್ನು ಮಂಜೂರು ಮಾಡುವುದು"

ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(iii) 2003–04ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತು) ಮೇಲಿನ ಚರ್ಚೆ, ಉತ್ತರ ಹಾಗೂ ಮತಕ್ಕೆ ಹಾಕುವುದು

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, Appropriation Bill ಇನ್ನೂ ನಮಗೆ ತಲುಪಿಲ್ಲ. It has not been circulated ನಾವು ಯಾವುದಕ್ಕೆ ವೋಟು ಹಾಕುವುದು?

ಅಧ್ಯಕ್ಷರು : ಎರಡು ದಿವಸಗಳ ಹಿಂದೆಯೇ ಅದನ್ನು ಇಂಟ್ರಡ್ಯೂಸ್ ಮಾಡಲಾಗಿದೆ. ಅದನ್ನು ಈಗ ಎಲ್ಲ ಮಾನ್ಯ ಸದಸ್ಯರಿಗೂ ಒದಗಿಸಿಕೊಡಬೇಕಾಗಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, In the absence of the Chief Minister ನಾನು ಆಗಲೇ 2003–04ನೇ ಸಾಲಿನ ಪೂರಕ ಅಂದಾಜು(ಅಂತಿಮ ಕಂತು)ಗಳನ್ನು ಇಂಟ್ರಡ್ಯೂಸ್ ಮಾಡಿದ್ದೆ. ಈಗ ಅದನ್ನು ಮತಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ(ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ,

"ದಿನಾಂಕ 31.3.2004ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1ರಿಂದ 5 ಹಾಗೂ 7ರಿಂದ 29 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ